(The House divided)

Ayes -6.

Noes- (Overwhelming majority)

MR. SPEAKER:— Since the overwhelming majority of Hon. Members are against the motion, I declare that the motion is negatived and the amendment is lost.

4-00 P.M. **ಶ್ರೀ ಎಸ್. ಬಂಗಾರಪ್ಪ**;— ಈ ಕಾಂಗ್ರೆಸ್ ಅನ್ನುವುದು ಒಡೆದು ಎರಡು ಪಂಗಡವಾಗಿದ್ದರೂ ಇದು ದೇಶವನ್ನು ಹೇಗೆ ಹಾಳುಮಾಡುತ್ತಿದೆ ಎಂಬುದನ್ನು ದೇಶದ ಜನತೆಗೆ ಎತ್ತಿತೋರಿಸಲು ನಾವು ಈ ಪ್ರಯತ್ನ ಮಾಡಿದೆವು. ನಮಗೆ ಇದರಲ್ಲಿ ಜಯವಾಗುವುದಿಲ್ಲವೆಂಬುದು ಗೊತ್ತಿತ್ತು. ಆದರೆ ಈ ಕಾಂಗ್ರೆಸಿನವರ ಎರಡೂ ಗುಂಪಿನವರ ಕಳ್ಳತನವನ್ನು ಬಯಲಿಗೆ ಎಳೆಯುವುದಕ್ಕೆ ನಾವು ಇದನ್ನು ಮಾಡಿದ್ದು

ಶ್ರೀ ಎಸ್. ಚೆನ್ನಯ್ಯ: ಹಾಗಲ್ಲ, ಅಲ್ಲಿ ಬಿಜಿನೆಸ್ ಅಡ್ವೈಜರಿ ಸಮಿತಿಯಲ್ಲಾದ ತೀರ್ಮಾನವನ್ನು ಬದಲಾಯಿಸುವುದು ಬೇಡ ಎಂದು ನಾವು ತೀರ್ಮಾನಕ್ಕೆ ಬಂದುದರಿಂದ ಇದಕ್ಕೆ ಒಪ್ಪಿಕೊಳ್ಳಬೇಕಾಯಿತು, ಅಷ್ಟೇ.

Mr. SPEAKER:—Now, I shall put the original motion to the vote of the House. The question is:

"That the House agrees with the Twenty fifh Report of the Business Advisory Committee"

The motion was adopted

Supplementary Demand for Grants for 1970-71 (Ist Instalment) General Discussion.

Demund No. 9,17,21,23,26,27,30,33,38,44,48,53, and 54.

Mr. SPEAKER:— Next item, financial business. The House is aware that the Business Advisory Committee has allotted to-day for discussion on both the Supplementary Demands for Grants and the Appropriation Bill. Therefore, the debate on the Demands for grants would conclude at 5-00 p. m. and the Hon. Minister may commence his reply at 5-00 p, m. From 5 30 to 6 00 P. M. We shall dispose of the Appropriation Bill.

ಶ್ರೀ ಎನ್. ಹುಚ್ಚಮಾಸ್ತಿಗೌಡ:— ಇನ್ನು ಮಾತನಾಡತಕ್ಕವರು ಇರುವುದರಿಂದ ೬ ಗಂಟೆಯತನಕ ಚರ್ಚೆಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂಬು ನನ್ನ ವಿಜ್ಞಾಪನೆ.

MR. SPEAKER:— All right. Then the debate on demands for grants may go on till 6-00 P. m.

SRI N. A. CHANNE GOWDA:— Sri, we cannot sit beyond 6 O' clock

SRI B. B. SAYANAK:— We are not going to sit after 6 00 p. m.

MR. SPEAKER:— The debate may go on upto 6 00 p. m. I want to know how much time is required by the Hon. Minister for Finance to reply to the debate.

SRI RAMAKRISHNA HEGDE:— Sir, it depends upon the observations made by the Hon. Members. Normally I will not take more then 15 to 20 minutes.

MR. SPEAKER:— All right. Then at 6 20 p. m. the demands will be put to vote and thereafter we shall takeup Appropriation Bill. I extend the time of today sittings upto 7 00 p. m

ಶ್ರೀ ಸಿ. ಎಂ. ಎಸ್. ಶಾಸ್ತ್ರಿ :— ಬಿಜಿನೆಸ್ ಅಡ್ವೈಜರಿ ಸಮಿತಿಯಲ್ಲಿ ೬ ಗಂಟೆಗೆ ಸಭೆ ಮುಗಿಯಬೇಕೆಂದು ತೀರ್ಮಾನ ಮಾಡಿದ್ದರೂ ಅದನ್ನು ತಾವು ಯಾವ ನಿಬಂಧನೆ ಪ್ರಕಾರ ಬದಲಾವಣೆ ಮಾಡಿದ್ದೀರಿ

MR. SPEAKER:— The Business Advisyry Committee has not fixed the time of the sittings of the House till 6 00 p. m They have only allotted to-day for the discussion and disposal of these two items.

ಶ್ರೀ ಎಂ. ಎಸ್. ಕೃಷ್ಣನ್:— ಸ್ವಾಮಿ, ಒಂದು ಪ್ರಶ್ನೆ ಏನೆಂದರೆ ಆಯುರ್ವೇದ ವಿದ್ಯಾರ್ಥಿಗಳ ಮುಷ್ಕರದ ವಿಷಯವಾಗಿ ಮಾನ್ಯ ಮಂತ್ರಿಗಳು ಉತ್ತರ ಕೊಡುತ್ತೇನೆಂದು ಹೇಳಿದ್ದರು. ಅದರ ಬಗೆ ಯಾವಾಗ ತೆಗೆದುಕೊಳ್ಳುತ್ತೀರಿ.

MR. SPEAKAR:— Before we Hon rice Minister will make a statement.

ಶ್ರೀ ಕೆ. ಎಚ್. ಪಾಟೀಲ್ (ಗದಗ);— ಸನ್ಮಾನ್ಯ ಸಭಾಪತಿಗಳೇ, ನನಗೆ ಕೊಟ್ಟಿರತಕ್ಕಂಥ ಅತ್ಯಲ್ಪ ವೇಳೆಯಲ್ಲಿ ಕೇವಲ ಸಹಕಾರ ಸಂಘದ ಖಾತೆ ಮೇಲೆ ಮಾತನಾಡಲು ಬಯಸುತ್ತೇನೆ. ಅದಕ್ಕೂ ಮೊದಲು ಒಂದು ವಿಷಯವನ್ನು ಹೇಳಿ ಸಹಕಾರ ಸಂಘದ ಬಗ್ಗೆ ಮಾತನಾಡುತ್ತೇನೆ. ಚಿಂಚೋಳಿ ಗ್ರಾಮದಲ್ಲಿ ಬಹಳ ದಿವಸದಿಂದ ರೂರಲ್ ವಾಟರ್ ಸಪ್ಲೈ ಸ್ಕೀಂ ಸ್ಯಾಂಕ್ಷನ್ ಆಗಿಲ್ಲ. ಯಾವ ಕಾರಣವೋ ಏನೋ ಗೊತ್ತಿಲ್ಲ, ಅದಕ್ಕೆ ಸರ್ಕಾರದವರು ತೀವ್ರವಾಗಿ ಗಮನ ಕೊಡಬೇಕು ಎಂದು ಹೇಳುತ್ತೇನೆ.

ಇನ್ನು ಸಹಕಾರ ಸಂಘದ ವತಿ ಮೇಲೆ ಬಹಳ ದೀರ್ಘವಾಗಿ ಹೇಳಲಿಕ್ಕೆ ಅವಕಾಶ ಇಲ್ಲದೆ ಇರುವುದರಿಂದ ಬಹಳ ಸಂಕ್ಷಿಪ್ತವಾಗಿಯೇ ಹೇಳಿ ತಮ್ಮ ಗಮನವನ್ನು ಸೆಳೆಯಲಿಕ್ಕೆ ಬಯಸುತ್ತೇನೆ. ನಾನು ಒಂದು ವರ್ಷ ಮೊಟ್ಟಮೊದಲೇ ನೋಟೀಸ್ ಕೊಟ್ಟಿದ್ದೆ ಆ ನೋಟೀಸ್‌ಗೆ ಮುಖ್ಯಮಂತ್ರಿಗಳು ತಾವಾಗೇ ನನ್ನನ್ನು ಆಹ್ವಾನಿಸುತ್ತಾರೆಂದು ತಿಳಿದಿದ್ದೆ. ಶ್ರೀಮಾನ್ ನಾಡಗೌಡರ ಪರಾಭವ ಏನೆಂದು ಲಿಖಿತ ಮೂಲಕ ಕೊಟ್ಟಿದ್ದರೂ ಈ ಅಸೆಂಬ್ಲಿಯಲ್ಲಿ ಹೇಳಿದ್ದರೂ ಕೂಡ ಒಂದು ವರ್ಷವಾದರೂ ಅದರ ಮೇಲೆ ಯಾವ ರೀತಿಯಾಗಿಯೂ ಕರಪ್ಷನ್ ಛಾರ್ಜಸನ್ನು ವಿಚಾರ ಮಾಡಲಾರದೆ ಹೋದಿರಿ. ಅದಕ್ಕಾಗಿ ನಾನು ಅವರ ಮೇಲೆ ನೇರವಾಗಿ ಬಹಿರಂಗವಾಗಿ ಏನು ವಿಚಾರ ಮಾಡಬೇಕು ಎಂದು ತಿಳಿದುಕೊಂಡು ನಮ್ಮ ಪಕ್ಷದ ವತಿಯಿಂದ ೨೫ ಜನರ ರುಜುಮಾಡಿಸಿ ಅಧ್ಯಕ್ಷರಿಗೆ ಕೊಟ್ಟರೂ ಸಹ ಇದನ್ನು ಚರ್ಚೆ ಮಾಡುವುದಕ್ಕೆ ಬೇಕಾದಷ್ಟು ಸಮಯವನ್ನು ಕೊಡಲಿಲ್ಲ. ಈಗ ಮೈಸೂರಿನ ರಾಜ್ಯಪಾಲರಾದ ಧರ್ಮವೀರರವರೇ ಶಾಸನ ಸಭೆಯ ವಿಚಾರವಾಗಿ ಪ್ರಸ್ತಾಪಮಾಡಿದ್ದಾರೆ. ನಾವು ಸುನೀತಿಯಿಂದ ನಡೆದುಕೊಂಡು ಬಂದಿದ್ದರೂ ಈ ರೀತಿ ಆಗಿರುವುದು ದುರ್ದೈವ. ನಾವು ಎಷ್ಟೇ ಉದಾತ್ತವಾಗಿ ನಡೆಯಬೇಕೆಂದಿದ್ದರೂ ಮಧ್ಯೆ ಮಧ್ಯೆ ಅನಿವಾರ್ಯವಾಗಿ ಸರ್ಕಾರದ ಧೋರಣೆಯಿಂದ ಈ ತರಹ ಕಷ್ಟಗಳು ಬರುತ್ತದೆ. ಅದಕ್ಕಾಗಿ ವಿಷಾದ ಪಡುತ್ತೇನೆ.

ನಮ್ಮ ಮನಸ್ಸಿಗೆ ಒಂದು ಭಾವನೆ ಬರಲಿಕ್ಕೆ ಹತ್ತಿದೆ. ಏನಂದರೆ ಶ್ರೀಮಾನ್ ನಾಡಗೌಡರ ವಿಚಾರದಲ್ಲಿ ಸಾರ್ವಜನಿಕವಾಗಿ ಇಷ್ಟೊಂದು ಬಹಿರಂಗವಾಗಿದ್ದರೂ ಕೂಡ ಅವರ ಮೇಲೆ ಇರುವ ಕರಪ್ಷನ್ ಛಾರ್ಜಸ್ ಮೇಲೆ ಮುಖ್ಯಮಂತ್ರಿಗಳು ಇನ್ನೂವರೆಗೆ ಏತಕ್ಕೆ ಕ್ರಮ ತೆಗೆದುಕೊಂಡಿಲ್ಲ ಎಂದು ನಾನು ಕೇಳುತ್ತೇನೆ. ಇದರಿಂದ ಏನು ತಿಳಿಯುತ್ತದೆ ಎಂದರೆ ಅವರಿಂದ ಬರತಕ ಹಿಸ್ಸೆ ಎಲ್ಲಿ ಕಳೆದು ಹೋಗುತ್ತದೋ ಅನ್ನುವುದಾಗಲಿ ಅಥವಾ ನನ್ನ ಮಂತ್ರಿಮಂಡಲ ಎಲ್ಲಿ ಬಿದ್ದು ಹೋಗುತ್ತದೋ ಎನ್ನುವ ಭಯವಾಗಲಿ ಅವರಿಗೆ ಇದೆ ಎಂದು ಕಾಣುತ್ತದೆ. ಆದರಿಂದ ಅವರ ಲೋಪವನ್ನು ಮುಚ್ಚಿಟ್ಟಿದ್ದಾರೆ ಎಂದು ಗೊತ್ತಾಗುತ್ತದೆ. ಮೊನ್ನೆ ತಾನೇ ಬೆಳಗಾಂವನಲ್ಲಿ ಕಾಂಗ್ರೆಸ್ (ಒ) ಸಂಸ್ಥೆಯ ಮೈಸೂರು ಪ್ರದೇಶ ಕಾಂಗ್ರೆಸ್ ಕಮಿಟಿಯ ಒಂದು ಸಭೆ ನಡೆದಿದೆ. ಅದನ್ನು ಬಹಳ ಅದ್ದೂರಿಯಿಂದ ನಡೆಸಿದ್ದಾರೆ. ಅಲ್ಲಿ ಶ್ರೀಮಾನ್ ನಿಜಲಿಂಗಪ್ಪನವರನ್ನು ಸ್ವಾಗತ ಮಾಡಿದರು. ಅದಕ್ಕಾಗಿ ಹಣವನ್ನು ಕೂಡಿಸತಕ್ಕಂಥ ಒಂದು ಏರ್ಪಾಡನ್ನು ಶ್ರೀಮಾನ್ ನಾಡಗೌಡರೇ ಮಾಡಿದ್ದರಿಂದ ಅವರ ಮೇಲೆ ಏನು ಲೋಪ ಇದ್ದರೂ, ಅವರಿಂದ ಲಾಭವಾಗುತ್ತದೆ ಎನ್ನುವ ದೃಷ್ಟಿಯಿಂದ ಅವರ ಮೇಲೆ ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ ಎನ್ನುವ ಭಾವನೆ ನಮಗೆ ಬಂದಿದೆ. ಅವರು ಈ ಒಂದು ಸಮಾರಂಭಕ್ಕಾಗಿ ಹಣವನ್ನು ವಸೂಲ್ಮಾಡಿರುವ ಸಂಸ್ಥೆ ಯಾವುಯಾವುದು ಎಂದರೆ (೧) ಸ್ಪಿನ್ನಿಗ್ ಮಿಲ್ಸ್, ಗೋಕಾಕ್ ಅವರಿಂದ ೧೦ ಸಾವಿರ ರೂಪಾಯಿ (೨) ಸಂಕೇಶ್ವರದ ಒಂದು ಸಂಸ್ಥೆಯಿಂದ ೫ ಸಾವಿರ ರೂಪಾಯಿ (೩) ಬೆಳಗಾಂ ಸೆಂಟ್ರಲ್ ಕೋಅಪರೇಟೀವ್ ಬ್ಯಾಂಕ್‌ನಿಂದ ೫ ಸಾವಿರ ರೂಪಾಯಿ (೪) ಒಂದು ಷುಗರ್ ಫ್ಯಾಕ್ಟರಿಯಿಂದ ೧೦ ಸಾವಿರ ರೂಪಾಯಿ ಈ ರೀತಿ ಒಟ್ಟು ೩೦ ಸಾವಿರ ರೂಪಾಯಿಗಳನ್ನು ಕಲೆಕ್ಟ್ ಮಾಡಿದ್ದಾರೆ. ಆ ಇನ್‌ಫರ್ಮೇಷನ್ ನನ್ನ ಹತ್ತಿರ ಇದೆ. ಅಲ್ಲದೆ ಉಜ್ವಲ್‌ಕೊಪ್ಪವ್ ಇಂಜನಿಯರ್ ಸಹಾಯದಿಂದ ೨೫ ಸಾವಿರ ರೂಪಾಯಿ, ಮಲಪ್ರಭಾ, ಹಿಡಕಲ್ ಎಕ್ಸಿಕ್ಯೂಟೀವ ಇಂಜನೀಯರ್ ಸಹಾಯದಿಂದ ೨೫ ಸಾವಿರ ರೂಪಾಯಿ ಕಲೆಕ್ಟ್ ಮಾಡಿದ್ದಾರೆ. ಬಹುಭಾಗದ ಜನ ಶ್ರೀಮಾನ್ ನಾಡಗೌಡರಿಗೆ ಬೇಕಾದಂಥವರು ಎಂದು ಈ ಸಮಾರಂಭಕ್ಕೆ ಬೇಕಾದಂಥ ಹಣವನ್ನು ವಸೂಲ್ಮಾಡುವ ಕೆಲಸವನ್ನು ಅವರಿಗೆ ವಹಿಸಿದ್ದರು. ಇನ್ನು ಎಷ್ಟರಮಟ್ಟಿಗೆ ಅವರಲ್ಲಿ ಮಾಹಿತಿ ಇರಬೇಕು ಎನ್ನುವುದ ನನಗೆಗೊತ್ತಿಲ್ಲ. ಇದನ್ನು ಮುಖ್ಯಮಂತ್ರಿಗಳು ಪರಿಶೀಲನೆ ಮಾಡಬೇಕು ಎಂದು ಕೇಳುತ್ತೇನೆ. ಆದರೂ ಈ ಹೊತ್ತಿನ ದಿವಸ ನಮ್ಮ ಫೈನಾನ್ಸ್ ಮಿನಿಸ್ಟರ್ ಸಪ್ಲಿಮೆಂಟರಿ ಬಡ್ಜೆಟನ್ನು ನಮ್ಮ ಮುಂದೆ ಇಟ್ಟಿದ್ದಾರೆ ನಾನು ಅದನ್ನು ಸೀಮಿತದಿಂದ ನೋಡುತ್ತಾ ಇದ್ದೆ. ನಿಜವಾಗಿಯೂ ಅವರು ಸಹಕಾರದ ಮಂತ್ರಿಗಳಾಗಿದ್ದಾಗ ಬಹಳ ಉದಾತ್ತವಾಗಿ ಮಾತನಾಡುತ್ತಿದ್ದರು, ಏತಕ್ಕೆಂದರೆ ಸರ್ಕಾರದ ಹಣವನ್ನು ರಕ್ಷಣೆ ಮಾಡಬೇಕೆಂದು ಮಾತನಾಡುತ್ತಿದ್ದರು. ಆದರೆ ಅವರು ಈ ಹೊತ್ತು ಏನು ಹೇಳುತ್ತಿದ್ದಾರೆ ಎಂದರೆ ತಿಳಿದೋ ತಿಳಿಯದೋ ಖರ್ಚು ಮಾಡಿಬಿಟ್ಟು ನ್ಯೂ ಸರ್ವಿಸಸ್ ಅಂತ ನಮ್ಮನ್ನು ಕೇಳುತ್ತಿದ್ದಾರೆ. ಈ ಹೊತ್ತು ದಾವಣಗೆರೆಯ ಒಂದು ಸಂಸ್ಥೆಯಿಂದ ೨೫ ಲಕ್ಷ ರೂಪಾಯಿಯ ಷೇರು ತೆಗೆದುಕೊಂಡಿದ್ದಾರೆ. ಈ ರೀತಿ ಮಿಸ್‌ಯೂಸ್ ಮಾಡುವಂಥ ಒಂದು ಸಂಸ್ಥೆಗೆ ಷೇರು ಇಡುವ ಉದ್ದೇಶ ಅದನ್ನು ಭ್ರೂ ಮಾಡುವುದಕ್ಕೆ ಸರ್ಕಾರದ ಹಣವನ್ನು ಎನ್. ಸಿ. ಡಿ. ಸಿ. ಫಂಡ್‌ನಿಂದ ಬಂದಂಥ ಹಣವನ್ನು ಮಿಸ್‌ಯೂಸ್‌ದ ಮಾಡಿ ನಮ್ಮನ್ನು ಏತಕ್ಕೆ ಕೇಳುತ್ತಿದಾರೆ ಸನ್ಮಾನ್ಯ ಸಭಾಪತಿಗಳೇ ಈ ಹೊತ್ತಿನ ದಿವಸ ನೇರವಾಗಿ ಕೆಲವು ಪ್ರಶ್ನೆಗಳನ್ನು ನಮ್ಮ ಆರ್ಥಿಕ ಸಚಿವರಲ್ಲಿ ಕೇಳಬೇಕಾಗಿದೆ. ಆರ್ಥಿಕ ಸಚಿವರು ದಾವಣಗೆರೆಯಲ್ಲಿ ಮತ್ತು ಅದೇ ರೀತಿ ಗೋಕಾಕ್‌ನಲ್ಲಿ ಒಂದು ಸಹಕಾರಿಸಂಘಕ್ಕೆ ಹಣವನ್ನು ಕೊಟ್ಟಿದ್ದಾರೆ.

ಶ್ರೀ ಪಿ ವಿ. ಐತಾಳ:— ಸ್ವಾಮಿ, ಈ ಸಭೆಯಲ್ಲಿ ಈ ಚರ್ಚೆಯಲ್ಲಿ ಮಾತನಾಡಬೇಕೆಂದು ಮೊದಲನೇ ಹೆಸರು ಕೊಟ್ಟವನು ನಾನು. ಅದನ್ನು ಕೊನೆಗೆ ಹಾಕಿದ್ದಾರೆ. ನಮಗೆ ಅಂದರೆ ಸೌತಕೆನರಾದವರಿಗೆ ಸ್ವೀಕರನ್ನು ಅಟ್ಯಾಕ್ ಮಾಡಲಿಕ್ಕೂ ಗೊತ್ತಿದೆ. ಮೊದಲನೇ ಹೆಸರು ನಾನು ಕೊಟ್ಟಿರುವಾಗ ಇದರ ಮಧ್ಯೆ ೨೦ ಹೆಸರುಗಳಿವೆ. ನನ್ನದು ಲಾಸ್ಟನಲ್ಲಿ ಹಾಕಿರುವುದರಿಂದ ನನಗೆ ಅವಕಾಶ ಸಿಕ್ಕುವುದು ಯಾವಾಗ ? ನೀವು ನನ್ನನ್ನು ಲಾಸ್ಟನಲ್ಲಿ ಹಾಕಿರುವ ಉದ್ದೇಶ ನಾನು ಏನೂ ಮಾತನಾಡುವುದಿಲ್ಲ ಎಂದು ಆರೀತಿ ತಿಳಿದಿದ್ದರೆ ನಮಗೆ ಸ್ವೀಕರನ್ನೂ, ಎಲ್ಲರನ್ನೂ ಅಟ್ಯಾಕ್ ಮಾಡಲಿಕ್ಕೆ ಗೊತ್ತಿದೆ.

ಶ್ರೀಮತಿ ಲೀಲಾವತಿ ರೈ:— ಮಾನ್ಯ ಸದಸ್ಯರಾದ ಶ್ರೀಮಾನ್ ಪಿ. ವಿ. ಐತಾಳರವರು ಸ್ವೀಕರನ್ನೂ ಅಟ್ಯಾಕ್ ಮಾಡಲಿಕ್ಕೆ ಸೌತ್ ಕೆನರಾದ ಎಲ್ಲರಿಗೂ ಗೊತ್ತುಂಟು ಎಂದು ಹೇಳಿದರು. ಏತಕ್ಕೆ ಅಟ್ಯಾಕ ಮಾಡುತ್ತಾರೆ ಎನ್ನುವುದು ಹೇಳಲಿಲ್ಲ.

ಶ್ರೀ ಪಿ.ವಿ. ಐತಾಳ್:— ಏಕೆಂದರೆ ಮಾತನಾಡುವುದಕ್ಕೆ ತಮಗೆ ಬೇಕಾದವರಿಗೆ ಮೊದಲು ಅವಕಾಶ ಕೊಡುವುದು ಬೇಡವಾದವರಿಗೆ ಕೊನೆಯಲ್ಲಿ ಅವಕಾಶಕೊಡುವುದು ಈ ರೀತಿ ಅವರು ಮಾಡುತ್ತಿದ್ದಾರೆ.

ಶ್ರೀ ಬೋಳಾರಘುರಾಮಶೆಟ್ಟಿ:— ಈ ಪಟ್ಟಿಯಲ್ಲಿ ನನ್ನ ಹೆಸರು ಇರಬಹುದು. ನಾನು ಮಾತನಾಡಬೇಕಾಗಿದೆ.

ಶ್ರೀ ಕೆ ಎಚ್. ಪಾಟೀಲ್:— ಈ ಹೊತ್ತಿನ ದಿವಸ ಹಣ ಸಂಗ್ರಹದ ವಿಚಾರ, ಉತ್ತರ ಕರ್ಣಾಟಕದ ಧಾರವಾಡ, ಬಿಜಾಪುರ, ಕಾರವಾರ ಜಿಲ್ಲೆಗಳ ಬಗ್ಗೆ, ಶ್ರೀ ಪಿ.ಎಂ. ನಾಡಗೌಡರು ಸಹಕಾರ ಸಚಿವರಾಗಿದಾರೆ, ಅವರಿಗೆ ಒಪ್ಪಿಸಿದ್ದೀರಾ ಎಂದು ಕೇಳುತ್ತಿದ್ದೇನೆ. ಎಲ್ಲೆಲ್ಲಿ ಕೈ ನಡೆಯುತ್ತದೆ ಅಲ್ಲೆಲ್ಲ ಈ ರೀತಿಯ ವ್ಯವಹಾರ ಮಾಡಿದ್ದಾರೆ ಎನ್ನುವ ಮಾತನ್ನು ಹೇಳುತ್ತಿದ್ದೇನೆ. ಬಾಗಲಕೋಟೆ ಬಸವೇಶ್ವರ ಕಾಲೇಜು ಸಲುವಾಗಿ ಬೇರೆ ಸಂಸ್ಥೆಗಳಲ್ಲಿ ಅವರು ಹಣವನ್ನು ತೆಗೆದುಕೊಂಡಿದ್ದಾರೆ. ಏನು ಹಣವನ್ನು ಮಂಜೂರಾತಿ ಮಾಡಿದ್ದಾರೆ, ಹೇಗೆ ರಿಜಿಸ್ಟ್ರಾರ್ ಅವರನ್ನು ಉಪಯೋಗ ಮಾಡಿಕೊಂಡಿದ್ದಾರೆ ಎನ್ನುವುದು ಈಗ ಬಯಲಿಗೆ ಬಂದಿದೆ.

Sri K.H. SRINIVAS:— I rise to a point of order Sir. Rule 172 reads.

> "The debate on the supplementary grants shall de confined to the items constituting the same and no discussion may be raised on the original grants nor policy underlyig them save in so far as it may be necessary to explain or illustrate the particular items under discussion."

I feel the hon. Member Sri K. H. Patil is merely indulging in making allegations against the hon Minister Sri P. M. Nad Gowda which are quite outside the scope of Rule 172. I request the Chair to call the Memder to order.

MR. SPEAKER:—I request Sri. K. H. PATIL. to confine himself to the scope of debate laid down under the rules and be more relevant.

[Mr. CHAIRMAN (Sri. D. M. SIDDHIAH) in the chair.]

ಶ್ರೀ ಕೆ. ಎಚ್. ಪಾಟೀಲ್:— ಯಾವ ಸಂಸ್ಥೆಯೊಳಗೆ ಎಂದರೆ ಬಸವೇಶ್ವರ ವಿದ್ಯಾವರ್ಧಕ ಸಂಸ್ಥೆಯೊಳಗೆ ಅಡ್ಮಿನಿಸ್ಟ್ರೇಟರಾಗಿ ಶ್ರೀ ನಾಡಗೌಡರು ಹೆಚ್ಚು ಹೆಚ್ಚು ಹಣ ತೆಗೆದುಕೊಂಡು ಉಪಯೋಗ ಮಾಡಿಕೊಂಡಿದ್ದಾರೆ. ಇದಕ್ಕೆ ರಿಜಿಸ್ಟ್ರಾರ್ ಅವರ ಸಹಾಯವನ್ನು ಪಡೆದುಕೊಂಡಿದ್ದಾರೆ. ಶ್ರೀ ಮಾನ್ ಜಮಖಂಡಿ ಮಠ ಅವರು ಟ್ರಾನ್ಸಫರ್ ಆಗಿ ಹೋದರೂ ಸಹ ಅವರ ವಿಚಾರದಲ್ಲಿ ಹೇಗೆ ನಡೆದುಕೊಂಡಿದ್ದಾರೆ ಎನುವುದನ್ನು ನೋಡಬಹುದು. ಅವರು ವರ್ಗವಾದ ನಂತರ ಅವರಿಗೆ ಮಾನಪತ್ರವನ್ನು ಕೊಟ್ಟಿದ್ದಾರೆ. ಇದಕ್ಕಿಂತ ಹೇಯವಾದ ರೀತಿ ಏನಿದೆ ಎಂದು ನಾನು ಕೇಳುತ್ತೇನೆ ಶ್ರೀ ಮಾನ್ ರಾಮಕೃಷ್ಣ ಹೆಗಡೆ ಅವರಿಗೆ ಕೇಳುತ್ತೇನೆ, ಸ್ಟೇಟ್ ಎಕ್ಸಚೆಕರ್‌ನಿಂದ ಈ ಮಂತ್ರಿಗಳಿಗಾಗಿ ಹಣ ಖರ್ಚು ಮಾಡುತ್ತಿದ್ದೀರಿ. ಇಂಥ ಮಂತ್ರಿಗಳನ್ನು ತೆಗೆದು ಹಾಕಿರಿ ಎಂದು ಮಾನ್ಯ ಮುಖ್ಯ ಮಂತ್ರಿಗಳಿಗೆ ಕಿವಿಯಲ್ಲಿ ಹೇಳುವುದಕ್ಕೆ ಏನು ಕಷ್ಟವಾಗುತ್ತದೆ ಎಂದು ಕೇಳುತ್ತೇನೆ ಒಂದು ಖಾತೆಯ ಡೈರೆಕ್ಟರಾಗಿದ್ದವರ ಪಕ್ಕದಲ್ಲಿ ಮಂತ್ರಿಗಳು ಕುಳಿತುಕೊಂಡು, ಎಲ್ಲ ಅಸೋಸಿಯೇಷನ್ ಪ್ರೆಸಿಡೆಂಟರೂ ಕೂಡಿ ಹತ್ತು ಸಾವಿರ ರೂಪಾಯಿಗಿಂತ ಹೆಚ್ಚು ಹಣವನ್ನು ಖರ್ಚು ಮಾಡಿ ಜಮಖಂಡಿಮಠ ಅವರು ಮೋಜು ಮಜಾಗಳಿಗೆ ಹಣವನ್ನು ಖರ್ಚು ಮಾಡಿ ಬಿನ್ನವತ್ತಳೆಯನ್ನು ಕೊಟ್ಟ ಸಮಯದಲ್ಲಿ ಶ್ರೀ ನಾಡಗೌಡರು ಆ ಸಮಾರಂಭದ ಅಧ್ಯಕ್ಷರಾಗಿದ್ದರು.

ಶ್ರೀ ಕೆ. ಎಚ್. ಶ್ರೀನಿವಾಸ್:— ಶ್ರೀ ಜಮಖಂಡಿ ಮಠ ಅವರಿಗೆ ಅಪೆಕ್ಸ್‌ಸಂಸ್ಥೆಯ ಅಧ್ಯಕ್ಷರುಗಳು ಸೇರಿ ಬೀಳ್ಕೊಡಿಗೆ ಕೊಟ್ಟಿದಾರೆ. ಅದಕ್ಕೂ ಸಭೆಯ ಮುಂದೆ ಸರ್ಕಾರದವರು ಇಟ್ಟಿರುವಂಥ ಬೇಡಿಕೆಗಳಿಗೂ, ನಡೆಯುತ್ತಿರುವ ಚರ್ಚೆಗೂ ಎನು ಸಂಬಂಧವಿದೆ ಸ್ವಾಮಿ?

MR. CHAIRMAN:—I request the hon Member to confine himself to the demands under discusion.

ಶ್ರೀ ಕೆ. ಎಚ್ ಪಾಟೀಲ್:— ಅಪೆಕ್ಸ್ ಬ್ಯಾಂಕಿನವರು ಹಣ ಖರ್ಚು ಮಾಡಿದ್ದಾರೆ. ಅದಕ್ಕೆ ನಾನು ಏನೂ ಹೇಳುವುದಿಲ್ಲ ನಾನು ಕೇಳುವುದು ಇಷ್ಟೆ? ನಮ್ಮ ರಾಜ್ಯದ ಮಂತ್ರಿಯಾಗಿರುವ ಸಹಕಾರಿ ಶಾಖೆಯ ಮಂತ್ರಿಗಳ ಬಗ್ಗೆ ಹೇಳುವುದಕ್ಕೆ ಹೊರಟಿದ್ದೇನೆ. ಆ ಮಹಾನುಭಾವ ಒಬ್ಬ ಅಧಿಕಾರಿಯ ಜೊತೆಯಲ್ಲಿ ಹೋಗಿ ಆತನಿಗೆ ಕೊಡತಕ್ಕ ಮಾನಪತ್ರದ ಸಮಾರಂಭದಲ್ಲಿ ಕುಳಿತುಕೊಂಡು, ಅವರಿಗಿಂತ ಕಡಮೆಯಾಗಿ, ಅವರ ಶಿಷ್ಯ ಎಂದು ಹೇಳಲಿಕ್ಕೆ ಹೊರಟರೆ ಇವರ ಕೈಯಿಂದ ಹೇಗೆ ಅಧಿಕಾರ ಆಗುತ್ತದೆ? ಮಂತ್ರಿಗಳು ಅವರ ಕೈಕೆಳಗಿನ ಒಬ್ಬ ನೌಕರನಿಗೆ ಮಾನಪತ್ರ ಕೊಡುವಾಗ ಅದರ ಅಧ್ಯಕ್ಷತೆಯನ್ನು ವಹಿಸಿ ಅವರಿಗೆ ಶಹಭಾಸಗಿರಿಯನ್ನು ಮಂತ್ರಿಯಾದವರು ಕೊಡುತ್ತಾರೆಯೇ?

MR. CHAIRMAN;— The Hon Member must conclude within a minute because his allotted time of fifteen minutes is over. I understand the Speaker allotted only five minutes but he has *t*aken alreacy fifteen minutes.

ಶ್ರೀ ಕೆ. ಎಚ್. ಪಾಟೀಲ್:— ಸಿವಿಲ್ ಸರ್ವಿಸ್ ರೂಲ್ಸ್ ನೋಡಿದರೆ ಯಾರಾದರೂ ಗೆಜೆಟೆಡ್ ಅಧಿಕಾರಿ ಅಥವಾ ಸರ್ಕಾರಿ ನೌಕರ ಮಾನಪತ ತೆಗೆದುಕೊಳ ಬಾರದು ಎಂದು ಇರುವುದು ಕಂಡು ಬರುತ್ತದೆ. ಯಾವ ಮಂತ್ರಿ ೨೦–೩೦ ಲಕ್ಷ ರೂಪಾಯಿ ಕೊಡುತ್ತಾನೆ, ಯಾರ ರೆಕಮೆಂಡೇಷನ್ ಮೇಲೆ ಕೊಡುತ್ತಾನೆ ಅಂಥ ಅಧಿಕಾರಿಯ ಹತ್ತಿರ ಹೋಗಿ ಕುಳಿತುಕೊಂಡು ಮಾನಪತ್ರ ಕೊಡುವುದು ಗಂಭೀರವಾದ ಅಪರಾಧವಾಗುತ್ತದೆ.

Sri S. K. AMIN.—On a point of order Sir. My Hon. Friend has already referred to Rule 172 I want to know Whether the Hon. Member Sri. Patil can take so much time and go on speaking without any relevance to the supplementary demand and even after consuming his allotted time, whether he can be given further time. He has already taken enough time.

Mr. CHAIRMAN.—I request theh Hon. Member to conclude within a minute.

ಶ್ರೀ ಎನ್ ಹುಚ್ಚ ಮಾಸ್ತಿಗೌಡ.—ನಮ್ಮ ಪಕ್ಷದಿಂದ ನಾಲ್ಕು ಜನ ಸದಸ್ಯರಿಗೆ ಮಾತನಾಡಲು ಅವಕಾಶ ಕೇಳಿದ್ದೇವೆ. ಮಾನ್ಯ ಸದಸ್ಯರಿಗೆ ೧೫ ನಿಮಿಷ ಕೊಡಬೇಕು ಎಂದು ಕೇಳಿದ್ದೇವೆ. ದಯವಿಟ್ಟು ಸ್ವಲ್ಪ ಅವಕಾಶ ಅವರಿಗೆ ಕೊಡಬೇಕು.

4–30 P. M.

ಶ್ರೀ ಎಚ್ ಸಿದ್ದ ವೀರಪ್ಪ.—ಅಧ್ಯಕ್ಷರು ಏನು ಹೇಳಿದರೋ ಏನೋ ಅದಿರಲಿ, ೧೫ ನಿಮಿಷ ಅವಕಾಶ ರೂಲ್ ಪ್ರಕಾರ ಇದೆ ಎಂದು ಅವರು ಹೇಳುತ್ತಿದ್ದಾರೆ. ನಮ್ಮ ಪಕ್ಷದವರಿಗೆ ಅವಕಾಶ ಕೊಡುವುದಿಲ್ಲವೆಂದು ಹೇಳುವುದಾದರೆ ಬೇಕಾದವರು ಮಾತನಾಡಲಿ. ೫ ನಿಮಿಷಗಳ ಅವಕಾಶವನ್ನು ಮಾನ್ಯ ಸದಸ್ಯರು ಕೇಳುತ್ತಿದ್ದಾರೆ. ಅಷ್ಟು ಅವಕಾಶ ಕೊಟ್ಟರೆ ಏನೂ ಆಗುವುದಿಲ್ಲ. ಅದನ್ನು ಕೊಟ್ಟು ಗಲಾಟೆಯನು ತಪ್ಪಿಸುವುದು ಉತ್ತಮ.

ಛೇರ್ಮನವರು.—ಅವರು ೧೫ ನಿಮಿಷ ಮಾತನಾಡಿದ್ದಾರೆ, ನಾನು ಬಂದಾಗ ೫ ನಿಮಿಷ ಅವಕಾಶ ಕೊಟ್ಟಿರುವುದಾಗಿ ಹೇಳಿದಂತೆ ಕೇಳಿದೆ. ಬಹಳ ಜನರು ಮಾತನಾಡಬೇಕೆಂದಿರುವುದರಿಂದ ಮತ್ತು ೬ ಗಂಟೆಗೆ ಈ ವಿಷಯ ಮುಕ್ತಾಯವಾಗಬೇಕಾಗಿರುವುದರಿಂದ ಅವರು ಅವರ ಭಾಷಣವನ್ನು ಮುಕ್ತಾಯ ಮಾಡಬೇಕೆಂದು ಹೇಳಿದೆ. ಅವರು ಐದು ನಿಮಿಷಗಳಲ್ಲಿ ಮುಗಿಸಬೇಕು.

ಶ್ರೀ ಕೆ. ಎಚ್ ಪಾಟೀಲ್.—ಮಾನ್ಯ ಅಧ್ಯಕ್ಷರೆ, ಈಗ ಡಿಮ್ಯಾಂಡ್ ನಂಬರ್ ೫೪ರ ಬಗ್ಗೆ ಮಾತ್ರ ಮಾತನಾಡುತ್ತೇನೆ. ಗೋಕಾಕಿನಲ್ಲಿ ಸಕ್ಕರೆ ಕಾರ್ಖಾನೆ ಸ್ಥಾಪಿಸಲು ೫ ಲಕ್ಷ ರೂಪಾಯಿ ಕೊಡಿಸಿದಾಗ ಸೊಸೈಟಿಯನ್ನು ರಿಜಿಸ್ಟರ್ ಮಾಡಲು ನಿರಾಕರಿಸಿದರು. ಕಾರಣವೇನು? ಹಣಕೊಡುವ ಬೇರೆ ವ್ಯಕ್ತಿಗಳನ್ನು ಕರೆದುಕೊಂಡಬುದು ಅವರಿಗೆ ಪ್ರೋತ್ಸಾಹ ಕೊಟ್ಟರು. ಇದು ಸರಿಯೇ? ದಾವಣಗೆರೆಯಲ್ಲಿ ರೈತರು ಮುಂದೆ ಬಂದು ಸೊಸೈಟಿ ಮಾಡುತ್ತೇವೆಂದು ಹೇಳಿದಾಗ ಇದು ಸಮಯವಲ್ಲವೆಂದು ಹೇಳಿ ಬೇರೆಯವರನ್ನು ರೈತರಲ್ಲದವರನ್ನು ಕರೆದುಕೊಂಡು ಬಂದು ಅವರಿಗೆ ಸರಕಾರ ೧೮ ಲಕ್ಷ ರೂಪಾಯಿ ಕೊಟ್ಟಿತು. ಇದನ್ನು ನೋಡಿದರೆ ಸರಕಾರ ಭ್ರಷ್ಟಾಚಾರದಿಂದ ದೂರವಿದೆಯೇ, ಇಲ್ಲವೇ ಎಂಬುದು ಗೊತ್ತಾಗುವುದು. ಮಾರ್ಕೆಟಿಂಗ್ ಸೊಸೈಟಿಗೆ ೨೦ ಲಕ್ಷ ರೂಪಾಯಿ ಕೊಟ್ಟು ಫರ್ಟಿಲೈಜರ್ ಕಾರ್ಖಾನೆ ಮಾಡುವುದಕ್ಕೆ ಸಹಾಯ ಮಾಡಿದ್ದಾರೆ, ಸಂತೋಷ. ಸರಕಾರದವರು ನೇರವಾಗಿ ಹಣ ಹಾಕಿಲ್ಲ. ಸ್ಟೇಟ್ ಮಾರ್ಕೆಟಿಂಗ್ ಸೊಸೈಟಿ ಸಿ ತಿ ಸರಿಯಾಗಿಲ್ಲ, ಮತ್ತೆ ಹಣ ಕೊಡಲಾಗುತ್ತಿದೆ; ತಮಗೆ ಬೇಕಾದಾಗ ಹಣ ಕೊಡುವರು. ಬೇಕಾದವರಿಗೆ ಅನುಕೂಲ ಮಾಡಲು ಈ ರೀತಿ ಮಾಡುತ್ತಿದ್ದಾರೆ. ನೇರವಾಗಿ ಖಚಿತವಾಗಿ ನಿದರ್ಶನಗಳನ್ನು ಹೇಳಬೇಕೆನ್ನುತ್ತಾರೆ. ಹೋದಸಾರಿ ಅಸೆಂಬ್ಲಿಯಲ್ಲಿ ಸಹಕಾರ ಶಾಖೆ ಮಂತ್ರಿಗಳಮೇಲೆ ಆರೋಪ ಮಾಡಿದೆ. ಮಕ್ಕಳ ಲಗ್ನಮಾಡಿ ವರದಕ್ಷಿಣೆಗೆ ವ್ಯವಸ್ಥೆ ಮಾಡಿದ ವಿಚಾರ ಹೇಳಿದೆ. ಇಂದು ತಮಗೆ ಬೇಕಾದವರನ್ನು ಟ್ರಿಬ್ಯೂನಲ್ ಮೆಂಬರ್ ಮಾಡಿದ್ದಾರೆ, ಹೀಗೆ ಮಾಡಿ ಭ್ರಷ್ಟಾಚಾರ ಮಾಡಿದ್ದಾರೆ. ಇದಕ್ಕಿಂತ ಹೆಚ್ಚಾದ್ದು ಯಾವುದು ಬೇಕು? ಈಗ ಪ್ರತಿಯೊಂದು ಕೋಆಪರೇಟಿವ್ ಸಂಸ್ಥೆಯಲ್ಲೂ ಏನು ನಡೆಯುತ್ತಿದೆಯೆಂಬುದನ್ನು ನೋಡಬಹುದು. ಸರಿಯಾಗಿ ಕೆಲಸವಾಗುತ್ತಿಲ್ಲ. ಆದರೆ ಲಕ್ಷಾಂತರ ರೂಪಾಯಿ ಖರ್ಚು ಮಾಡುತ್ತಿದ್ದಾರೆ. ಶ್ರೀ ನಾಡಗೌಡರ ಬೀಗರು ಚೆರ್ಮನ್ನರಾಗಿದ್ದಾರೆ, ಅಧಿಕಾರಿಗಳನ್ನು ಯಾವರೀತಿ ಎಲೆಕ್ಟ್ ಮಾಡುವರು ಎಂಬುದು ಗೊತ್ತಾಗಿದೆ. ಒಬ್ಬರು ಎಷ್ಟು ದಿವಸ ಅಧಿಕಾರದಲ್ಲಿ ಉಳಿಯಬೇಕು? ಬೇರೆಯವರಿಗೆ ಅವಕಾಶ ಕೊಡುವುದಿಲ್ಲ, ಈ ರೀತಿ ಮಾಡುತ್ತಿದ್ದಾರೆಂದು ಸ್ಪಷ್ಟವಾಗಿ ಹೇಳುತ್ತೇನೆ. ಇದಲ್ಲದೆ ಬಿಜಾಪುರದ ವಿಚಾರ ಶ್ರೀ ನಂಜಯ್ಯಮಠರವರು ಹೇಳಿದರು. ಡಿಕ್ಟೇಟರ್ ರೀತಿಯಲ್ಲಿ ಕೆಲಸ ಮಾಡುತ್ತಿದ್ದಾರೆ. ಪಿ ಡಬ್ಲ್ಯು ಇಲಾಖೆಯಿಂದ ಹಣ ಗಳಿಸುವ ವಿಚಾರ ಹೇಳಲೇ ಬೇಕಾಗಿಲ್ಲ. ಇದನ್ನೆಲ್ಲಾ ಕಂಡುಹಿಡಿದು ಕ್ರಮ ತೆಗೆದುಕೊಳ್ಳಲು ಲೋಕಪಾಲ್ ಮುಂತಾದ ವ್ಯವಸ್ಥೆ ಮಾಡಿಲ್ಲ. ಈ ಸಭೆಯಲ್ಲಿ ಕೈ ಎತ್ತುವವರು ಬಹಳ ಸದಸ್ಯರಿರುವುದರಿಂದ ಭ್ರಷ್ಟಾಚಾರ ಹೇಗೆತಾನೆ ನಿರ್ಮೂಲವಾದೀತು? ಕೇಂದ್ರ ಸರಕಾರ ಹಣ ಕೊಡುವುದರಿಂದ ಸಹಕಾರ ಸಂಘಗಳಿಗೆ ಉದಾರವಾಗಿ ಹಣ ಕೊಡುತ್ತಿದ್ದಾರೆ. ಪಿ ಎ ಸಿ ಮತ್ತು ಎಸ್ಟಿಮೇಟ್ ಕಮಿಟಿಗಳವರು ವರದಿ ಸಲ್ಲಿಸಿದ್ದಾರೆ, ಅದಕ್ಕೆ ಬೆಲೆ ಕೊಟ್ಟಿಲ್ಲ. ಕೆ ಸಿ ಟಿ ಮಿಲ್ಸ್‌ಗೆ ಹಣ ಕೊಡಬಾರದೆಂದು ಪಿ ಎ ಸಿ ತಿಳಿಸಿದೆ. ಆದರೂ ಕೂಡ ಶ್ರೀ ಎ ಎಸ್ ಪಾಟೀಲರ ಸಂಬಂಧಿ ಇರುವರೆಂದು ೧೮ ಲಕ್ಷ ಅದಕ್ಕೆ ಕೊಟ್ಟಿರುವುದು ನಷ್ಟವಲ್ಲವೇ? ಹೀಗೆ ಮಾಡಲು ನಾಚಿಕೆಯಾಗುವುದಿಲ್ಲವೆ? ಆ ಸಂಸ್ಥೆಯ ವ್ಯವಹಾರಗಳನ್ನು ಒಬ್ಬ ವ್ಯಾಪಾರಸ್ಥರಿಗೆ ಕೊಟ್ಟು ಒಂದು ಕೋಟಿ ಮೂವತ್ತು ಲಕ್ಷ ಹಾಳು ಮಾಡಿರುವಾಗ ಮತ್ತೆ ಕೊಟ್ಟಿದ್ದಾರೆ. ಬಡಿ ಲೆಕ್ಕ ಹಾಕಿದರೆ ವರ್ಷಕ್ಕೆ ೭ ಲಕ್ಷ ಅದು ಕೊಡಬೇಕಾಗುವುದು ಇದ ಎಷ್ಟು ಮಟ್ಟಿಗೆ ನ್ಯಾಯ?

ಆ ಒಂದುಕಥೆ ಹೇಳಿದರೆ ಅವರು ಮಂತ್ರಿಗಳಾಗಿರಲಿ, ಮೆಂಬರಾಗಿ ಕೂಡ ಇಲ್ಲಿಇರಲಿಕ್ಕೆ ನಾಲಾಯಕ್ಕು ಎಂದು ಹೇಳಿದರೆ ತಪ್ಪಾಗಲಾರದು. ಈ ರೀತಿಯಿಂದ ಕಟುವಾದ ಮಾತು ಹೇಳಿದರೆ ಇದು ಸತ್ಯಕ್ಕೆ ದೂರವಾಗಲಾರದು ಎಂದು ಹೇಳುತ್ತೇನೆ. ಇನ್ನೂ ೫೦–೫೨ ಚಾರ್ಜಸ್ ಅವರ ಮೇಲೆ ಇದೆ. ಇದನ್ನು ಹೇಳಬೇಕಾದರೆ ಕನಿಷ್ಟ ಎರಡು ತಾಸು ಆದರೂ ಬೇಕು, ದುರದೈವದಿಂದ ಈಗ ಸಮಯ ಇಲ್ಲ, ಫೈನಾನ್ಸ್ ಮಿನಿಸ್ಟರಿಗೆ ಒಂದು ಮಾತು ಹೇಳುತ್ತೇನೆ, ನಿಮಗೆ ಅವರನ್ನು ತೆಗೆದು ಹಾಕುವುದಕ್ಕೆ ಆಗದಿದ್ದರೆ ಕೇಂದ್ರ ಸರ್ಕಾರದವರಿಗೆ ಅಥವಾ ಗವರ್ನರರವರಿಗೆ ಬರೆದು ಅವರನ್ನು ಡಿಸ್‌ಮಿಸ್ ಮಾಡಿರಿ, ಮನೆಗೆ ಕಳುಹಿಸಿರಿ. ಇಂತಹ ಭ್ರಷ್ಟಾಚಾರ ಮಾಡತಕ್ಕ ಮಂತ್ರಿಗಳನ್ನು ಇಟ್ಟುಕೊಂಡು ಅನ್ಯಾಯವನ್ನು ಸರಿಪಡಿಸದೇ ಹೋದರೆ ನಾವು ಇನ್ನೇನುತಾನೆ ಮಾಡುವುದಕ್ಕೆ ಸಾಧ್ಯ? ವಿರೋಧಪಕ್ಷದವರು ಹೀಗೆ ಟೀಕೆ ಮಾಡುತ್ತಾರೆ ಹಾಗೆ ಟೀಕೆ ಮಾಡುತ್ತಾರೆ ಅಂದರೆ ಇನ್ನೇನು ತಾನೆ ಹೇಳಬೇಕು? ಬಿ. ಎಂ. ಪಾಟೀಲರವರ ಮೇಲೆ ಏಕೆ ಟೀಕೆ ಬರುವುದಿಲ್ಲ? ಕೌಜಲಗಿಯವರ ಮೇಲೆ ಏಕೆ ಟೀಕೆ ಬರುವುದಿಲ್ಲ? ಈ ಎಲ್ಲಾ ಕಾರಣಗಳಿಂದ ಮಾನ್ಯ ಚೀಫ್ ಮಿನಿಸ್ಟರು ನಾಡಗೌಡರ ಮೇಲೆ ಇರತಕ್ಕ ಆಪಾದನೆಗಳನ್ನು ಎನ್‌ಕ್ವೈರಿಮಾಡಲಿ, ಅವು ಸುಳ್ಳಾಗಿದ್ದರೆ ಅವರು ಯಾವುದೇ ಪನಿಷ್‌ಮೆಂಟ್ ನನಗೆ ಕೊಡುತ್ತಾರೋ ಅದನ್ನು ತೆಗೆದು ಕೊಳ್ಳಲಿಕ್ಕೆ ತಯಾರಾಗಿದ್ದೇನೆ. ಇಲ್ಲದೇ ಹೋದರೆ ಅವು ನಿಜವಾಗಿದ್ದರೆ ಅವರನ್ನು ಡಿಸ್‌ಮಿಸ್ ಮಾಡಿ ಮನೆಗೆ ಕಳುಹಿಸಿ ಕೊಡಲಿ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎ. ಪಂಚಪ್ಪ (ಶಾಂತಿ ನಗರ) :— ಮಾನ್ಯ ಅಧ್ಯಕ್ಷರೇ, ಈ ಸಪ್ಲಿಮೆಂಟರಿ ಡಿಮ್ಯಾಂಡ್ಸ್ ಮೇಲೆ ಮಾತನಾಡುತ್ತಾ, ಈ ಎಲ್ಲಾ ಡಿಮ್ಯಾಂಡ್‌ಗಳನ್ನೂ ಸ್ವಾಗತ ಮಾಡಿ ಎರಡು ಮಾತುಗಳನ್ನು ಹೇಳಲು

ಇಚ್ಛಿಸುತ್ತೇನೆ. ಸ್ವಾಮಿ, ಚೆಕ್‌ಪೋಸ್ಟ್ ಏನಿವೆ ಇವುಗಳಿಂದ ಹಣ ನ್ಯಾಯವಾಗಿ ಬರುತ್ತಿಲ್ಲ, ಇದನ್ನು ಸರಿಪಡಿಸಬೇಕೆಂದು ತಮ್ಮ ಮೂಲಕ ಸರ್ಕಾರದವರನ್ನು ಕೇಳಿಕೊಳ್ಳುತ್ತೇನೆ.

ಎರಡನೆಯದಾಗಿ ಬೆಂಗಳೂರಿನ ಜನಸಂಖ್ಯೆ ಬಹಳ ಜಾಸ್ತಿಯಾಯಿತು. ರೋಗಿಗಳ ಸಂಖ್ಯೆ ಕೂಡ ಬಹಳ ಜಾಸ್ತಿಯಾಗುತಾ ಇದೆ. ಕಂಟೋನ್‌ಮೆಂಟಿನಲ್ಲಿ ಬೌರಿಂಗ್ ಹಾಸ್ಪಿಟಲ್ ಇದೆ. ಅದು ಸಾಲುವುದಿಲ್ಲ. ೪ ವರ್ಷದಿಂದ ಹೇಳುತ್ತಾ ಇದ್ದೇನೆ. ಆ ಭಾಗಕ್ಕೆ ಬೇರೆ ಇನ್ನೊಂದು ಆಸ್ಪತ್ರೆ ಕೊಡಿ ಎಂದು ಇದುವರೆಗೂ ಕೂಡ ಅದರ ಕಡೆಗೆ ಗಮನ ಕೊಟ್ಟಿಲ್ಲ. ಆದ್ದರಿಂದ ಸಿವಿಲ್ ಏರಿಯಾದಲ್ಲಿ ಇನ್ನೊಂದು ಆಸ್ಪತ್ರೆಯನ್ನು ಏರ್ಪಾಡು ಮಾಡಿಕೊಡಬೇಕು ಎಂದು ಸರ್ಕಾರದವರನ್ನು ಕೇಳಿಕೊಳ್ಳುತ್ತೇನೆ. ಹೊರಗಿನಿಂದ ಬೆಂಗಳೂರಿಗೆ ಜನರು ಬಂದು ತುಂಬುತ್ತಾ ಇದ್ದಾರೆ, ಬೆಂಗಳೂರಿಗೆ ಅನ್ಯಾಯ ಮಾಡುತ್ತಾ ಇದ್ದಾರೆ. ಇದರ ಕಡೆಗೆ ಹೆಚ್ಚು ಗಮನ ಕೊಡಬೇಕೆಂದು ಹೇಳುತ್ತೇನೆ. ಬೆಂಗಳೂರಿನಲ್ಲಿ ವಾಣಿವಿಲಾಸ ಮತ್ತು ವಿಕ್ಟೋರಿಯಾ ಆಸ್ಪತ್ರೆ ಇದೆ. ನಾನು ಅನೇಕ ಸಲ ಅಲ್ಲಿಗೆ ಹೋಗಿ ನೋಡಿದ್ದೇನೆ. ಅಲ್ಲಿ ಪೇಷೆಂಟುಗಳಿಗೆ ಸರಿಯಾದ ಅನುಕೂಲ ಇಲ್ಲ. ದೊಡ್ಡಿಯೊಳಗೆ ಕುರಿಗಳಿಗೆ ಎಷ್ಟೋ ಅನುಕೂಲ ಇದೆ. ಅಷ್ಟೂ ಕೂಡ ಈ ಆಸ್ಪತ್ರೆಗಳಲ್ಲಿ ಇಲ್ಲ. ಅಲ್ಲಿ ಆಗುತ್ತಾ ಇರತಕ್ಕ ಅನಾನುಕೂಲ ಹೇಳುವುದಕ್ಕೆ ಸಾಧ್ಯವಿಲ್ಲ. ಪೇಷಂಟುಗಳಿಗೆ ಅಲ್ಲಿ ಹೋಗುವವರಿಗೆ ಚೀಟಿ ಬರೆದು ಕೊಡುತ್ತಾರೆ. ಮೆಡಿಸನ್ ತೆಗೆದುಕೊಂಡು ಬನ್ನಿ ಎಂದು ಹೇಳುತ್ತಾರೆ, ಸರ್ಕಾರದವರು ಬೇಕಾದಷ್ಟು ಹಣವನ್ನು ಕೊಟ್ಟರೂ ಕೂಡ ಬಡವರಿಗೆ ಅದರ ಅನುಕೂಲ ಸಿಕ್ಕುತ್ತಿಲ್ಲ, ಸರ್ಕಾರದವರು ಇದರ ಕಡೆಗೆ ಗಮನ ಕೊಟ್ಟು, ಸೂಕ್ತವಾದ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಈ ಆಸ್ಪತ್ರೆಯಲ್ಲಿ ಕೆಲಸ ಮಾಡತಕ್ಕ ಡಾಕ್ಟರುಗಳ ವಿಷಯದಲ್ಲಿ ಜನಗಳಿಗೆ ಬಹಳ ಕೆಟ್ಟ ಅಭಿಪ್ರಾಯ ಬಂದಿದೆ. ೨೦ನೇ ತಾರೀಖು ಕೃಷ್ಣವೇಣಮ್ಮ ಅಂತ ಅನ್ನುವವರನ್ನು ವಾಣಿವಿಲಾಸ ಆಸ್ಪತ್ರೆಯಲ್ಲಿ ಅಡ್ಮಿಟ್ ಮಾಡಿದರು. ಅವರಿಗೆ ಹೆರಿಗೆ ಆದಮೇಲೆ ಚೆನ್ನಾಗಿ ಇದ್ದರು. ನಂತರ ಫ್ಯಾಮಿಲಿ-ಪ್ಲಾನಿಂಗ್ ಡಾಕ್ಟರು ಅವರನ್ನು ಕೇಳಿದಾಗ ನಾನು ವೀಕ್ ಆಗಿದ್ದೇನೆ ಆಪರೇಷನ್ ಮಾಡಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲ ಎಂದು ಅಪೋಸ್ ಮಾಡಿದರು. ಅದಕ್ಕೆ ಡಾಕ್ಟರು ನಮಗೆ ಗೊತ್ತಿದೆ, ಏನೂ ಆಗುವುದಿಲ್ಲ ಎಷ್ಟೋ ಕೇಸುಗಳನ್ನು ಮಾಡಿದ್ದೇವೆ ತೊಂದರೆ ಆಗುವುದಿಲ್ಲ ಎಂದು ಹೇಳಿದಾಗ ಆಕೆ ನಮ್ಮ ಗಂಡಸರನ್ನು ಕೇಳಿ ಅಂತ ಹೇಳಿದಳಂತೆ. ಮುನಿಸ್ವಾಮಿ ಅಂತ ಆತ ಕಾಫಿಬೋರ್ಡ್‌ನಲ್ಲಿ ಕೆಲಸ ಮಾಡುತ್ತಾರೆ, ೪೩ ನೇ ಡಿವಿಜನ್‌ನಲ್ಲಿ ವಾಸವಾಗಿದ್ದಾರೆ, ಮೊನ್ನೆ ಹೆರಿಗೆ ಆದದ್ದು ೫ನೇ ಮಗ. ಅವರೂ ಕೂಡ ದಯವಿಟ್ಟು ಮಾಡಬೇಡಿ ನನ್ನ ಸಂಸಾರ ಕೆಟ್ಟು ಹೋಗುತ್ತದೆ ಅಂತ ಹೇಳಿದರೂ ಕೂಡ ಏನೂ ಆಗುವುದಿಲ್ಲ ಎಷ್ಟೋ ಕೇಸುಗಳನ್ನು ಮಾಡಿದ್ದೇವೆ. ಏನೂ ತೊಂದರೆಯಾಗುವುದಿಲ್ಲ ಎಂದು ಹೇಳಿದರು ಇದರ ಮೇಲೆ ನಿಮ್ಮ ಇಷ್ಟ ಅಂತ ಆತ ಹೇಳಿದರು. ೧ನೇ ತಾರೀಖು ಬೆಳಿಗ್ಗೆ, ಒಂಭತ್ತೂವರೆ ಗಂಟೆಗೆ ಆ ಪೇಷಂಟನ್ನು ಕರೆದುಕೊಂಡು ಹೋದರು. ಒಂದೂವರೆ ಗಂಟೆಗೆ ಬೆಡ್ ಮೇಲೆ ತಂದು ಹಾಕಿದರು, ಆಗಲೇ ಆಕೆಗೆ ತಲೆನೋವು ಶುರುವಾಯಿತು. ಅದನ್ನು ಡಾಕ್ಟರುಗಳು ಗಮನಿಸಲಿಲ್ಲ, ಆಗ ಮುನಿಸ್ವಾಮಿ ಅವರ ಅತ್ತೆ ಅಲ್ಲಿ ಇದ್ದರು. ಅವರಿಗೆ ಬೇರೆ ಮೆಡಿಸನ್‌ಗಳ ಚೀಟಿ ಬರೆದುಕೊಟ್ಟಿದ್ದಾರೆ ಅವು ನನ್ನ ಹತ್ತಿರ ಇಲ್ಲ ಇವೆ. ಪೇಷಂಟ್ ಚೆನ್ನಾಗಿ ಇದ್ದಾರೆಯೇ ಇಲ್ಲವೇ ಎಂಬುದನ್ನು ಚೆನ್ನಾಗಿ ಪರೀಕ್ಷೆ ಮಾಡಿ ಆಪರೇಷನ್ ಮಾಡಬೇಕು. ವೀಕ್ ಆಗಿದ್ದೇನೆ ಬೇಡ ಎಂದು ಹೇಳಿದರೂ ಕೂಡ ಫೋರ್ಸ್ ಮಾಡಿ ಆಪರೇಷನ್ ಮಾಡಿ ಆಕೆಯನ್ನು ಕೊಲೆ ಮಾಡಿದ್ದಾರೆ. ೪ನೇ ತಾರೀಖಿನ ದಿವಸ ಮೂರುಮುಕ್ಕಾಲು ಗಂಟೆಗೆ ಆ ಪೇಷಂಟು ಸತ್ತರು. ಈ ರೀತಿ ಆದರೆ ಬಡವರನ್ನು ಕೇಳುವವರೇ ಇಲ್ಲದಂತಾಗಿದೆ. ಇವತ್ತು ಆ ಡಾಕ್ಟರನ್ನು ಸಸ್‌ಪೆಂಡ್ ಮಾಡಿದ್ದು ತಪ್ಪು ಎಂದು ನಾಗರತ್ನಮ್ಮನವರು ಹೇಳುತ್ತಾ ಇದ್ದಾರೆ. ಬಡವರ ಮನೆಯಲ್ಲಿಅವರು ಹುಟ್ಟಿದಾದ್ದರೆ ಆ ರೀತಿ ಹೇಳುತ್ತಾ ಇರಲಿಲ್ಲ. ಹೆಲ್ತ್ ಮಿನಿಸ್ಟರು, ಚೀಫ್ ಮಿನಿಸ್ಟರಿಗೆ ತೊಂದರೆಗೆ ಒಳಗಾದವರು ಅಪೀಲು ಮಾಡಿಕೊಂಡಿದ್ದಾರೆ ಈ ತರಹ ಬಡವರನ್ನು ಕೊಲೆ ಮಾಡಿದರೆ ಸರ್ಕಾರಕ್ಕೆ ಕೆಟ್ಟ ಹೆಸರು ಬರುತ್ತದೆ. ಯಾರ್ಯಾರು ಇದಕ್ಕೆ ಸಂಬಂಧಪಟ್ಟವರು ಇದ್ದಾರೆ ಅವರ ಮೇಲೆ ಸರ್ಕಾರದವರು ಕ್ರಮ ತೆಗೆದುಕೊಳ್ಳದಿದ್ದರೆ ನಾಳೆ ನೀವೆ ಟೀಕೆ ಮಾಡುತ್ತೀರಿ. ಏಕೆ ಕ್ರಮ ತೆಗೆದುಕೊಳ್ಳಲಿಲ್ಲ, ಎಂದು. ಒಳ್ಳೆಯ ಡಾಕ್ಟರುಗಳು ಇದ್ದಾರೆ, ಒಳ್ಳೆಯ ಔಷದಿಗಳನ್ನು ಕೊಡುತ್ತಾರೆ ಎಲ್ಲರೂ ಕೆಟ್ಟವರು ಎಂದು ನಾನು ಹೇಳುವುದಿಲ್ಲ. ವೀಕ್ ಆಗಿದ್ದೇನೆ ಬೇಡ ಎಂದು ಹೇಳಿದರೂ ಕೂಡ ಕೇಳದೆ ಆಪರೇಷನ್ ಮಾಡಿ ಕೊಲೆ ಮಾಡಿರತಕ್ಕ ಡಾಕ್ಟರನ್ನು ಸಸ್‌ಪೆಂಡ್ ಮಾಡಿದ್ದು ತಪ್ಪು ಎಂದು ಇವತ್ತಿನ ದಿವಸ ಹೇಳಿದರೆ ನಾಳೆ ಕ್ರಮ ತೆಗೆದುಕೊಳ್ಳದೇ ಹೋದರೆ ಪ್ರತಿಯೊಂದನ್ನೂ ಕೂಡ ತಪ್ಪು ಎಂದು ಹೇಳುತ್ತೀರಿ, ನೀವೆ ಟೀಕೆ ಮಾಡುತ್ತೀರಿ. ಇದು ಯಾವ ಧರ್ಮ, ಯಾವನ್ಯಾಯ?

(*Chairman Smt. Nagarathnamma Hiremath in the Chair.*)

ಶ್ರೀ ಎ. ನಂಜಪ್ಪ:—ಇದು ನನ್ನಕ್ಷೇತ್ರಕ್ಕೆ ಸಂಬಂಧಪಟ್ಟಿದ್ದು ಆದ್ದರಿಂದ ನಾನು ಕೇಳುತ್ತೇನೆ. ಈ ತರಹ ಕೆಲವಾರು ಆಪರೇಷನ್‌ಗಳನ್ನು ಮಾಡಿ ಕೊಲೆ ಮಾಡಿದ್ದಾರೆ. ಈವೊತ್ತಿನದಿವಸ ಆಕೆಯನ್ನು ಸಸ್ಪೆಂಡ ಮಾಡಿದ್ದು ತಪ್ಪು ಎಂದು ಅನೇಕರು ಹೇಳಿದರು. ನಮ್ಮ ಮನೆಯಲ್ಲಿ ಯಾರಿಗಾದರು ಈ ತರಹ ಆಗಿದ್ದರೆ ನಾವು ಸುಮ್ಮನೆ ಕೂಡುತ್ತಿದ್ದೆವೆ? ಐದು ಜನ ಮಕ್ಕಳನ್ನು ಪಡೆದುಕೊಂಡು ಆ ಸಂಸಾರದವರು ಬಿಕ್ಷೆ ಬೇಡುವ ಪರಿಸ್ಥಿತಿ ಇರುವಾಗ ಅಸೆಂಬ್ಲಿ ಸದಸ್ಯರಾದ ನಾವು ಅಂತಹ ಬಡವರಿಗೆ ನ್ಯಾಯ ದೊರಕಿಸಿಕೊಡಬೇಕು. ಅನ್ಯಾಯವಾಗಿದ್ದರೆ ಎನ್‌ಕ್ವೈರಿ ಮಾಡಿ ಯಾರು ಯಾರು ತಪ್ಪು ಮಾಡಿದ್ದಾರೋ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ನಾವೇ ಈ ಸಭೆಯಲ್ಲಿ ಇಂಜನಿಯರು ಹಾಗೆ ಮಾಡಿದ್ದಾರೆ, ತಹಶೀಲ್‌ದಾರರು ಹೀಗೆ ಮಾಡಿದ್ದಾರೆ ಎಂದು ಹೇಳುತ್ತೇವೆ. ಈ ತರಹ ಕೆಲಸ ಮಾಡಿದ್ದಕ್ಕೆ ಒಬ್ಬ ಡಾಕ್ಟರ ಮೇಲೆ ಸರಕಾರದವರು ಕ್ರಮ ತೆಗೆದುಕೊಂಡರೆ ಹಾಗೆ ಮಾಡುವುದು ಸರಿಯಲ್ಲ, ಬೇಕಾದವರನ್ನು ಬಿಟ್ಟು ಬಿಡುತ್ತಾರೆ ಎಂದು ಹೇಳುವುದು ಸತ್ಯಕ್ಕೆ ದೂರವಾದ ಮಾತು. ಆ ರೀತಿ ಹೇಳಬಾರದು ಇಲ್ಲಿ ಸದಸ್ಯರಾಗಿ ಬಂದಾಗ ಪ್ರಮಾಣವಚನ ತೆಗೆದುಕೊಳ್ಳುವ ಕಾಲದಲ್ಲಿ ನಾವು ಪ್ರಾಮಾಣಿಕವಾಗಿ ನ್ಯಾಯವಾಗಿ ನಡೆದುಕೊಳ್ಳುತ್ತೇವೆ ಎಂದು ಹೇಳಿ ಪ್ರಮಾಣವಚನ ತೆಗೆದುಕೊಳ್ಳುತ್ತೇವೆ ಆಮೇಲೆ ಇಲ್ಲಿ ಬಂದು ಹೀಗೆಅನ್ಯಾಯ ಮಾಡುವುದು ಸರಿಯೇ? ಇದು ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟಿದ್ದು ಆದ್ದರಿಂದ ನಾನು ತಮ್ಮಲ್ಲಿ ಅಪೀಲ್ ಮಾಡಿಕೊಂಡಿದ್ದೇನೆ. ಆದುದರಿಂದ ಇದರ ಬಗ್ಗೆ ಒಂದು ಎನ್‌ಕ್ವೈರಿ ಆಗಲಿ ಆಗ ಇದರಲ್ಲಿ ಗವರ್ನ್‌ಮೆಂಟಿನವರದು ತಪ್ಪೇ ಅಥವಾ ಆಕೆಯದು ತಪ್ಪೇ ಎಂಬುದು ಗೊತ್ತಾಗುತ್ತದೆ. ಇನ್ನಾರದಾದರೂ ಇದರಲ್ಲಿ ತಪ್ಪು ಇದ್ದರೆ ಅವರ ಬಗ್ಗೆಯೂ ಕೂಡ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಮಾನ್ಯ ಸದಸ್ಯರು ಇಲ್ಲಿ ಚುನಾಯಿತರಾಗಿ ಬರಲು ಬಡವರಿಂದ ಓಟು ತೆಗೆದುಕೊಂಡು ಬರುತ್ತಾರೆ. ಹಾಗೆ ಬಡವರ ಓಟು ತೆಗೆದುಕೊಂಡು ಬಂದಮೇಲೆ ಅವರನ್ನು ಕೊಲೆ ಮಾಡಿದರೆ ಆಗ ಅವರ ಮೇಲೆ ಕ್ರಮ ತೆಗೆದುಕೊಂಡರೆ ಸರಕಾರದವರು ಆ ಡಾಕ್ಟರನ್ನು ಸಸ್ಪೆಂಡ್ ಮಾಡಿದ್ದು ತಪ್ಪು ಎಂದು ಹೇಳುವುದು ನ್ಯಾಯವಲ್ಲ. ಆ ರೀತಿ ಮಾಡಬಾರದೆಂದು ಹೇಳುತ್ತೇನೆ.

ಇನ್ನೊಂದು ವಿಷಯ ಬೌರಿಂಗ್ ಆಸ್ಪತ್ರೆಯಲ್ಲಿ ಒಬ ಡಾಕ್ಟರು ೧೬ ರೂಪಾಯಿ ಲಂಚ ತೆಗೆದುಕೊಂಡಿದ್ದಾರೆ ಎಂದು ಎಲ್ಲಪ್ಪ ಎಂಬ ಜವಾನ ಹೇಳಿದ. ಹುಡುಗ ಕಾಲು ಮುರಿದುಕೊಂಡಿದ್ದರಿಂದ ಸರ್ಟಿಫಿಕೇಟ್ ಕೊಡಿ ಎಂದು ಹೇಳಿದ್ದಕ್ಕೆ ೧೬ ರೂಪಾಯಿಗಳನ್ನು ತೆಗೆದುಕೊಂಡು ಅದಕ್ಕೆ ರಸೀತಿ ಕೊಡಲಿಲ್ಲ ಎಂದು ಹೇಳಿದ. ಹೆಲ್ತ್ ಮಿನಿಷ್ಟರಿಗೂ ಒಂದು ಕಾಪಿಯನ್ನು ಕಳುಹಿಸಿದ್ದೇನೆ. ಅದರ ಮೇಲೆ ಏನೂ ಕ್ರಮ ತೆಗೆದು ಕೊಂಡಿಲ್ಲ. ಹೀಗೆಲ್ಲಾ ಮಾಡುತ್ತಾರೆ ಎಂದು ಆಸ್ಪತ್ರೆಯಲ್ಲಿ ಇರುವ ಜವಾನರೇ ಹೇಳುತ್ತಾರೆ. ಇಂತಹ ಡಾಕ್ಟರುಗಳು ಬಡವರಿಗೆ ಸಹಾಯ ಯಾವ ರೀತಿಯಲ್ಲಿ ಮಾಡುತ್ತಾರೆ? ಇದಕ್ಕಿಂತ ನಾಚಿಕೆಗೇಡು ಬೇರೆ ಯಾವುದೂ ಇಲ್ಲ. ನಾವು ನಾಗರೀಕರಿಂದ ಚುನಾಯಿತರಾಗಿ ಬಂದವರು. ನಾಗರೀಕರಿಗೆ ಸಹಾಯ ಮಾಡಬೇಕೆಂದು ಕೇಳಿ ಕೊಳ್ಳುತ್ತೇನೆ. ಈ ಸಂದರ್ಭದಲ್ಲಿ ನನಗೆ ಮಾತನಾಡಲು ಅವಕಾಶ ಕೊಟ್ಟಿರುವುದಕ್ಕಾಗಿ ಅಧ್ಯಕ್ಷಿಣಿಯವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

‡ ಶ್ರೀ ಭೋಳಾರಘುರಾಮಶೆಟ್ಟಿ (ಕಾರ್ಕಳ):—ಮಾನ್ಯ ಅಧ್ಯಕ್ಷಿಣಿಯವರೇ, ಮಾನ್ಯ ಆರ್ಥಿಕ ಮಂತ್ರಿಗಳು ತಂದಂಥ ಸಪ್ಲಿಮೆಂಟರಿ ಬಜೆಟನ್ನು ನಾನು ವಿರೋಧಿಸುತ್ತಾ ಕೆಲವು ಮಾತುಗಳನ್ನು ಹೇಳಬೇಕೆಂದಿದ್ದೇನೆ. ಈ ಸಪ್ಲಿಮೆಂಟರಿ ಬಜೆಟಿನಲ್ಲಿ ಈ ಸಾರಿ ಐದುವರೆ ಕೋಟಿ ರೂಪಾಯಿಗಳನ್ನು ಕೇಳಿದ್ದಾರೆ. ಈಗ ಕೆಲವು ವರ್ಷಗಳಿಂದ ಬಜೆಟ್ ತಯಾರುಮಾಡುವ ಸಮಯದಲ್ಲಿ ಖರ್ಚು ಹೆಚ್ಚು ತೋರಿಸಿ ಅದನ್ನು ಉಳಿತಾಯ ಮಾಡಿ, ಸಪ್ಲಿಮೆಂಟರಿ ಬಜೆಟಿನಲ್ಲಿ ಖುಷಿಬಂದ ರೀತಿಯಲ್ಲಿ ಖರ್ಚುಮಾಡುವದು ಒಂದು ವ್ಯವಹಾರವಾಗಿ ಹೋಗಿಬಿಟ್ಟಿದೆ. ಬಜೆಟ್ ಈ ಸಭೆಯ ಮುಂದೆತಂದು ಅದರ ಒಪ್ಪಿಗೆಯನ್ನು ಪಡೆದು ಅನಂತರ ಅದನ್ನು ತಮ್ಮ ಇಚ್ಛೆಬಂದಹಾಗೆ ಖರ್ಚುಮಾಡಿ ಇಚ್ಛೆಬಂದ ಹೆಡ್ಡಿಂಗ್ಸ್‌ನಲ್ಲಿ ಉಳಿತಾಯ ಮಾಡಿಕೊಂಡು ಹೋಗುತ್ತಿದ್ದಾರೆ. ನಿಜವಾಗಿ ಸಭೆಯ ಒಪ್ಪಿಗೆಯನ್ನು ಪಡೆಯದೆ ಖರ್ಚು ಮಾಡುವುದು ಸಭೆಗೆ ಗೌರವ ತರುವುದಿಲ್ಲ ಎಂದು ಹೇಳುತ್ತೇನೆ. ಈ ಸಪ್ಲಿಮೆಂಟರಿ ಬಜೆಟಿನಲ್ಲಿ ಚುನಾವಣೆಯ ಓಟರ್ ಪಟ್ಟಿಯನ್ನು ತಯಾರು ಮಾಡುವುದಕ್ಕೆ ೫ ಲಕ್ಷ ೫೦ ಸಾವಿರ ರೂಪಾಯಿಗಳನ್ನು ಇಟ್ಟಿದ್ದಾರೆ ಮತ್ತು ಇದರ ಖರ್ಚಿನ ಅರ್ಧ ಅಂಶ ಕೇಂದ್ರ ಸರಕಾರ ಕೊಡಬೇಕಾಗಿದೆ. ಮತದಾರರ ಚುನಾವಣಾ ಪಟ್ಟಿ ತಯಾರು ಮಾಡಿರುವುದರಲ್ಲಿ ಹಿಂದಿನ ಅನುಭವದ ಪ್ರಕಾರ ಹೇಳುವುದಾದರೆ ಸರಿಯಾಗಿ ಮತದಾರರಪಟ್ಟಿ ತಯಾರಾಗುವುದಿಲ್ಲ. ಅನೇಕ ಕ್ಷೇತ್ರಗಳಲ್ಲಿ ಸಾವಿರಾರು ಗಟ್ಟಲೆ ಮತದಾರರ ಹೆಸರುಗಳನ್ನು ಬರೆದಿರುವುದಿಲ್ಲ. ಬರೆದರೂ ಕೂಡ ಅಲ್ಲಿ ಸರಿಯಾದ ಹೆಸರುಗಳು ಇರುವುದಿಲ್ಲ. ಮತದಾರರ ಪಟ್ಟಿಯನ್ನು ತಯಾರು ಮಾಡುವ ಸಂದರ್ಭದಲ್ಲಿ ಎಷ್ಟೋ ಜನರು ನಿಧನರಾಗಿದ್ದರೂ ಕೂಡ ಅವರ ಹೆಸರುಗಳು ಮುಂದೂಕೂಡ

ಇರುವಂಥ ಪ್ರಸಂಗಗಳನ್ನು ನಾವು ನೋಡಿದ್ದೇವೆ. ಮತದಾರರ ಪಟ್ಟಿಯನ್ನು ತಯಾರು ಮಾಡುವಂಥ ಸಂದರ್ಭದಲ್ಲಿ ಯಾವ ಅಧಿಕಾರಿಗಳು ಸರಿಯಾಗಿ ವರ್ತಿಸುವುದಿಲ್ಲವೋ ಅಂತಹವರ್ಮ ಮೇಲೆ ಸರಕಾರದವರು ಕ್ರಮ ತೆಗೆದುಕೊಳ್ಳಬೇಕು ಮತ್ತು ಒಂದು ವೇಳೆ ಎಲ್ಲಿಯಾದರೂ ತಪ್ಪು ಆಗಿದ್ದರೆ ಇನ್ನು ಮುಂದೆ ಮಾಡದ ರೀತಿಯಲ್ಲಿ ನೋಡಿಕೊಳ್ಳಬೇಕೆಂದು ಆರ್ಥಿಕ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಇನ್ನು ಎಕ್ಸ್‌ಪೋ–೭೦ರ ವಿಷಯದ ಬಗ್ಗೆ ಈ ಸಭೆಯಲ್ಲಿ ಬಹಳ ಧೀರ್ಘವಾದ ಚರ್ಚೆಯಾಗಿದೆ. ಅದರ ಬಗ್ಗೆ ಹೆಚ್ಚು ಮಾತನಾಡುವ ಇಚ್ಚೆ ನನಗೆ ಇಲ್ಲ. ಆದರೂ ಒಂದು ಮುಖ್ಯವಾದ ವಿಷಯವನ್ನು ಬಹಳ ವಿಷಾಧದಿಂದ ಹೇಳಬೇಕಾಗಿದೆ. ನಮ್ಮ ರಾಜ್ಯದಲ್ಲಿ ಬರಗಾಲ ಪರಿಸ್ಥಿತಿ ಇದೆ ಎಂದು ಕೇಂದ್ರ ಸರಕಾರದವರನ್ನು ಹಣ ಕೇಳುತ್ತೇವೆ ಮತ್ತು ಇನ್ನೂ ಅನೇಕ ಗ್ರಾಮಗಳಲ್ಲಿ ಕುಡಿಯುವುದಕ್ಕೆ ನೀರು ಇಲ್ಲ ಎನ್ನುವ ಮಾತನ್ನು ಸರ್ಕಾರದವರು ಒಪ್ಪುತ್ತಾರೆ. ಅಂತಹ ಸಂದರ್ಭದಲ್ಲಿ ಕೇವಲ ೧೪೩ ಜನರಿಗಾಗಿ ನಮ್ಮ ರಾಜ್ಯದ ಆರು ಲಕ್ಷ ೬೧ ಸಾವಿರದ ೩೦೧ ರೂಪಾಯಿಗಳನ್ನು ಸರ್ಕಾರದವರು ಖರ್ಚುಮಾಡಿದ್ದಾರೆ. ನಿಜವಾಗಿ ಹೇಳುವುದಾದರೆ ಈ ಹಣ ಯಾವ ರೀತಿಯಲ್ಲಿಯೂ ಕೂಡ ಸದುಪಯೋಗವಾಗಲಿಲ್ಲ. ಆ ರೀತಿ ಅವರನ್ನು ಜಪಾನಿಗೆ ಕಳುಹಿಸಿದ ಸಂದರ್ಭದಲ್ಲಿ ಒಂದು ವಿಷಯ ಹೇಳಿದರು ಫಸ್ಟ್ ಹ್ಯಾಂಡ್ ನಾಲೆಜ್ ಪಡೆಯುವುದಕ್ಕೆ ನಮ್ಮ ಯುವಕರನ್ನು ಅಲ್ಲಿಗೆ ಕಳುಹಿಸಿದ್ದೇವೆ ಎಂದು ಹೇಳಿದರು. ಅಲ್ಲಿಗೆ ಹೋಗಿಬಂದವರ ಪೈಕಿ ನಾನು ಒಬ್ಬರನ್ನು ಭೇಟಿ ಮಾಡಿದ್ದೆ ಆಗ ಅವರು ನಮಗೆ ನಿಜವಾಗಿಯೂ ಅಲ್ಲಿ ಏನೂ ತಿಳಿದುಕೊಳ್ಳುವುದಕ್ಕೂ, ನೋಡುವುದಕ್ಕೂ, ಸಾಧ್ಯವಾಗಲಿಲ್ಲ ಎಂದು ಹೇಳಿದರು ೧೪೩ ಜನರು ಅಲ್ಲಿ ಹೋದಾಗ ಒಟ್ಟಿಗೆ ತಿರುಗಾಡುವ ಸಂದರ್ಭಕೂಡ ಇರಲಿಲ್ಲ. ಯಾಕೆಂದರೆ ಅಲ್ಲಿ ವಿಶೇಷ ಜನಸಂದಣಿ ಇದ್ದುದರಿಂದ ಒಟ್ಟಿಗೆ ಓಡಾಡುವುದಕ್ಕೆ ಸಾಧ್ಯವಾಗಲಿಲ್ಲ. ಅಲ್ಲಿ ತಿರುಗಾಡುವುದಕ್ಕೆ ಧೈರ್ಯ ಇರಲಿಲ್ಲ ಅಲ್ಲಿಯ ಎಂಬೆಸಿ ಸಹಾಯ ಕೂಡ ಸಿಕ್ಕಲಿಲ್ಲ ಮತ್ತು ಅಲ್ಲಿ ಒಂದೊಂದು ಸ್ಟಾಲನ್ನು ನೋಡಬೇಕಾದರೆ ಸುಮಾರು ೪–೫ ಗಂಟೆ ಕಾಯಬೇಕಾಗಿದ್ದ ಸಂದರ್ಭ ಬಂದುದರಿಂದ ಸಮಯವೆಲ್ಲಾ ಬರೀ ಕಾಯುವುದರಲ್ಲೇ ಕಳೆದುಹೋಗಿ ಏನೂ ನೋಡುವುದಕ್ಕೂ ಅವಕಾಶ ಆಗಲಿಲ್ಲ ಎಂದು ಹೇಳಿದರು. ಈ ಡೆಲಿಗೇಷನ್‌ನನ್ನು ಕಳುಹಿಸುವಾಗ ಸರಕಾರದವರು ಸರಿಯಾಗಿ ಆಲೋಚನೆಮಾಡಿ ಸದುಪಯೋಗ ಆಗುವ ರೀತಿಯಲ್ಲಿ ಮಾಡಲಿಲ್ಲ ಆದುದರಿಂದ ಈ ರೀತಿ ಮಾಡಿದಂತಹ ಖರ್ಚು ನಿಜವಾಗಿಯೂ ಬಹಳ ಅಕ್ಷಮ್ಯ ಅಪರಾಧ ಎಂದು ಭಾವಿಸುತ್ತೇನೆ. ಇನ್ನು ಮುಂದಾದರೂ ಕೂಡ ಇಂತಹ ಸಂದರ್ಭದಲ್ಲಿ ಆ ರೀತಿ ಹಣವನ್ನು ದುರುಪಯೋಗ ಮಾಡುವ ಅವಕಾಶವನ್ನು ಸರಕಾರದವರು ಮಾಡಕೂಡದೆಂದು ಹೇಳುತ್ತೇನೆ. ಈ ಬಜೆಟಿನಲ್ಲಿ ಫಾರಿನ್ ಟೂರ್ ಹೋಗುವುದಕ್ಕೆ ಯಾವುದೂ ಅವಕಾಶ ಇರಲಿಲ್ಲ. ಹೊಸದಾಗಿ ಒಂದು ಹೆಡ್ ಮಾಡಿ, ಹೊಸಅಕೌಂಟ್ ಮಾಡಿ ಅದಕ್ಕೆ ಖರ್ಚು ಮಾಡಿದ್ದಾರೆ. ಅದು ಈ ಸಭೆಯ ಒಪ್ಪಿಗೆ ಇಲ್ಲದೆ ಮಾಡಿದ್ದಾರೆ ಎಲ್ಲಾ ರೀತಿಯಿಂದಲೂ ನೋಡಿದರೆ ಈ ಎಕ್ಸ್‌ಪೋಗೆ ಆದಂತಹ ಅನ್ಯಾಯ ಅಕ್ರಮಗಳಿಗೆಲ್ಲಾ ಸರಕಾರದ ಸಂಪೂರ್ಣ ಜವಾಬ್ದಾರಿ ಇದೆ ಎಂದು ಹೇಳುತ್ತೇನೆ. ಈ ಜವಾಬ್ದಾರಿಯನ್ನು ಅವರು ವಹಿಸಿ ಕೊಳ್ಳಬೇಕಾಗಿದೆ ಮತ್ತು ಮಾಡಿದಂತಹ ತಪ್ಪು ಬಹಳ ಅಕ್ಷಮ್ಯ ಅಪರಾಧ ಎಂದು ಭಾವಿಸುತ್ತೇನೆ.

ಇಂದು ನಮ್ಮ ರಾಜ್ಯದ ಆರ್ಥಿಕ ಪರಿಸ್ಥಿತಿ, ರೈತರ ಪರಿಸ್ಥಿತಿಯನ್ನು ನೋಡಿದರೆ ನಿಜವಾಗಿಯೂ ಎಲ್ಲರಿಗೂ ಬಹಳ ವ್ಯಸನ ವಾಗುತ್ತದೆ. ಈ ಸಪ್ಲಿಮೆಂಟರಿ ಬಜೆಟಿನಲ್ಲಿ ಕಾರ್ಖಾನೆಗಳಿಗೆ ಸಂಬಂಧಪಟ್ಟ ಕೆಲವು ಉಪಕರಣಗಳ ರಿಪೇರಿ ಬಗ್ಗೆ ಕೆಲವು ಯೋಜನೆಗಳನ್ನು ಇಟ್ಟಿದ್ದಾರೆ. ನಾನಾದರೂ ಅದನ್ನು ಸ್ವಾಗತಿಸುತ್ತೇನೆ. ಯಾಕೆಂದರೆ ಪರದೇಶಗಳಿಂದ ತರಿಸಿದ ಟ್ರಾಕ್ಟರುಗಳು ಮತ್ತು ಅದರ ಉಪಕರಣಗಳ ರಿಪೇರಿ ಮಾಡುವುದಕ್ಕೆ ಬೇರೆ ಬೇರೆ ಸಾಮಾನುಗಳನ್ನು ಜೋಡಿಸುವುದಕ್ಕೆ ಇಲ್ಲಿ ಯಾವ ರೀತಿಯ ಅನುಕೂಲವು ಇಲ್ಲದೆ ರೈತರು ಸಾಲ ಮಾಡಿ ಅನೇಕ ಟ್ರಾಕ್ಟರುಗಳನ್ನು ಪಡೆದು ಅದು ಮೂಲೆಪಾಲು ಆಗಿದೆ. ಅಂತಹ ಟ್ರಾಕ್ಟರುಗಳ ರಿಪೇರಿ ಮತ್ತು ಸರ್ವಿಸ್ ಮಾಡುವಂತಹ ಅನುಕೂಲವನ್ನು ಕೆಲವು ಕಡೆಗಳಲ್ಲಿ ಮಾತ್ರ ಕೊಟ್ಟಿದ್ದಾರೆ. ಇದರ ಮಟ್ಟಿಗೆ ಎಷ್ಟು ಖರ್ಚಾದರೂ ಕೂಡ ಇಂತಹ ಅನುಕೂಲವನ್ನು ನಮ್ಮ ರಾಜ್ಯದ ಪ್ರತಿಯೊಂದು ಜಿಲ್ಲೆಯಲ್ಲಿಯೂ ಮಾಡುವ ಅವಶ್ಯಕತೆ ಇದೆ ಎಂದು ನಾನು ಆರ್ಥಿಕಮಂತ್ರಿಗಳಿಗೆ ಹೇಳುತ್ತೇನೆ.

ಏಕೆಂದರೆ ಇವತ್ತು, ನಾವು ಗ್ರೀನ್ ರೆವಲ್ಯೂಷನ್ ಆಗಬೇಕೆಂದು ಹೇಳುತ್ತೇವೆ. ಇದರ ಸದುಪಯೋಗ ರೈತರಿಗೆ ಸಿಗಬೇಕಾದರೆ ಯಂತ್ರೋಪಕರಣಗಳ ಅವಶ್ಯಕತೆ ಇದೆ. ಅವನ್ನು ರಿಪೇರಿ ಮಾಡಿಕೊಳ್ಳುವ ಅನುಕೂಲತೆಯನ್ನು ಮಾಡಿಕೊಳ್ಳದಿದ್ದರೆ ಅವು ಮೂಲೆ ಪಾಲಾಗುತ್ತವೆ. ಇದರಿಂದ ರೈತರಿಗೆ ತೊಂದರೆ ಆಗುತ್ತದೆ. ಅದು ಬಹಳ ಕಷ್ಟದಿಂದ ಪಡೆದಂಥ ಯಂತ್ರಗಳನ್ನು ಮೂಲೆಗೆ ಒಯ್ಯಬೇಕಾಗುತ್ತದೆ. ಇದರ ಸರ್ವಿಸ್ ಮತ್ತು ರಿಪೇರಿಗಳನ್ನು ಸರ್ಕಾರದ ಸಹಾಯದಿಂದ ವ್ಯವಸ್ಥೆ ಮಾಡಲು ಪ್ರಯತ್ನಮಾಡಬೇಕೆಂದು ನಾನು ಹೇಳುತ್ತೇನೆ.

5-00 P.M.

ಇನ್ನು ಬರಗಾಲದ ಬಗ್ಗೆ ಎರಡು ಕೋಟಿ ರೂಪಾಯಿಗಳನ್ನು ಕೇಳಿದ್ದಾರೆ. ನಿಜವಾಗಿ ಬರಗಾಲ ಪರಿಸ್ಥಿತಿಯ ವಿಷಯವನ್ನು ಹೇಳಬೇಕಾದರೆ ನಮ್ಮಲ್ಲಿ ಮಳೆಬಾರದ ಸ್ಥಿತಿಯಿಂದಾಗಿ ಬರಗಾಲ ಉಂಟಾಗಿಲ್ಲ. ಮಳೆ ವಿಪರೀತವಾದರೆ ಜನಗಳಿಗೆ ಕಷ್ಟವಾಗುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮತ್ತು ಉತ್ತರ ಕನ್ನಡ ಜಿಲ್ಲೆಯಲ್ಲಿ ವಿಪರೀತ ಮಳೆಯಾಗಿ ಬೆಳೆಗಳು ಹಾಳಾಗುತಿವೆ. ಮನೆಗಳೂ ಸಹ ಕುಸಿದುಬೀಳುತ್ತಿವೆ. ಅಭಾವ ಪರಿಸ್ಥಿತಿಗೆ ಈ ತರಹ ಪರಿಹಾರವನ್ನು ಕೊಡುವಾಗ ಮಳೆ ಹೆಚ್ಚಾಗಿ ಆಗತಕ್ಕ ಕಷ್ಟಕ್ಕೂ ಕೂಡ ಪರಿಹಾರ ಕೊಡಬೇಕು. ನಮ್ಮ ನೆರೆಯ ರಾಜ್ಯವಾದ ಕೇರಳದಲ್ಲಿ ಅಲ್ಲಿನ ಸರ್ಕಾರದವರು ಫ್ಲಡ್ ರಿಲೀಫ್ ಬಗ್ಗೆ ಹೆಚ್ಚಿನ ಹಣವನ್ನು ಕೇಂದ್ರ ಸರ್ಕಾರದಿಂದ ಪಡೆದುಕೊಂಡು ಅಲ್ಲಿನ ಜನರಿಗೆ ಬೇಕಾದಷ್ಟು ಅನುಕೂಲತೆಗಳನ್ನು ಮಾಡಿಕೊಡುತ್ತಿದ್ದಾರೆ. ಉತ್ತರ ಕನ್ನಡ ಜಿಲ್ಲೆಗೆ ಮತ್ತು ದಕ್ಷಿಣ ಕನ್ನಡ ಜಿಲ್ಲೆಗೆ ಆ ರೀತಿ ನಮ್ಮ ಸರ್ಕಾರದವರೂ ಸಹ ಸಹಾಯ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ

ಇನ್ನು ಫ್ಯಾಮಿನ್ ರಿಲೀಫ್ ಕೊಡುವುದರಲ್ಲಿ ರಾಜಕೀಯ ಮಾಡುತ್ತಿದ್ದಾರೆ, ಪ್ರಾದೇಶಿಕ ಭಾವನೆಗಳಿಂದ ಸಹಾಯ ಮಾಡುತ್ತಿದ್ದಾರೆ ಎಂಬ ಕೂಗು ಈ ಸಭೆಯಲ್ಲಿ ಅನೇಕ ಮೂಲೆಗಳಿಂದ ಕೇಳಿ ಬರುತ್ತಿದೆ ಇದು ಬಹಳ ದುರದೃಷ್ಟಕರವಾದ ಅಪಾದನೆ; ಸರ್ಕಾರದವರು ಇದರ ಬಗ್ಗೆ ಎಚ್ಚರಿಕೆಯಿಂದ ನಡೆಯಬೇಕು. ಒಂದು ವೇಳೆ ಅಂತಹ ಅಪಾದನೆಗಳು ಬಂದರೆ ಅವನ್ನು ಚೆನ್ನಾಗಿ ವಿಚಾರಮಾಡಬೇಕು ಯಾರಾದರೂ ತಪ್ಪಿತಸ್ಥರು ಇದ್ದರೆ ಅಂತವರಬಗ್ಗೆ ಸರಿಯಾಗಿ ವಿಚಾರಣೆಮಾಡಿ ಅಂತಹ ಅಪಾದನೆಗಳು ಯಾವುವೂ ಬಾರದಂತೆ ಸರಿಯಾದ ಕ್ರಮಗಳನ್ನು ತೆಗೆದುಕೊಳ್ಳಬೇಕು.

ಇನ್ನೊಂದು ವಿಷಯ. ಈಗ ಸಪ್ಲಿಮೆಂಟರಿ ಬಡ್ಜೆಟ್ಟಿನಲ್ಲಿ ಖೆಡ್ಡಾದ ಬಗ್ಗೆ ೬ ಲಕ್ಷ ೭೫ ಸಾವಿರ ರೂಪಾಯಿಗಳನ್ನು ಇಟ್ಟಿದ್ದಾರೆ. ಈ ಹಣ ಬಹಳ ಜಾಸ್ತಿ. ಈ ಸಾರಿ ಆಗುವಂಥ ಖೆಡ್ಡಾ ಮೊದಲು ಆದಂಥ ಸ್ಥಳದಲ್ಲಿಯೇ ಆಗುತ್ತದೆ. ಆಗ ಮಾಡಿದಂಥ ಸೌಕರ್ಯಗಳು ಅಲ್ಲಿಯೇ ಇರುತ್ತದೆ. ಆದ್ದರಿಂದ ಈಗ ಅವೇ ಸ್ಥಳದಲ್ಲಿ ಪುನಃ ಖೆಡ್ಡಾ ಮಾಡುವುದರಿಂದ ಈಗ ೬ ಲಕ್ಷ ೭೫ ಸಾವಿರ ರೂಪಾಯಿಗಳನ್ನು ಅದಕ್ಕೋಸ್ಕರ ಇಡುವ ಅಗತ್ಯವಿಲ್ಲ. ಇನ್ನೊಂದು ವಿಷಯವನ್ನು ಕೇಳುತ್ತೇನೆ. ಕಳೆದಸಾರಿ ಅಲ್ಲಿ ಸರಿಯಾದ ಸೌಲಭ್ಯಗಳನ್ನು ಮಾಡದೇ ಇದ್ದುದರಿಂದ ಈ ಸಭೆಯ ಮಾನ್ಯ ಸದಸ್ಯರಿಗೆ ಗುಂಡಿನಏಟು ತಗುಲಿ ತೊಂದರೆಯಾಗಿದೆ. ಈ ಸಾರಿ ಅಂತಹ ತೊಂದರೆಗಳು ಆಗದೇ ಇರುವ ರೀತಿಯಲ್ಲಿ ಅದನ್ನು ಮಾಡಬೇಕು. ಅಲ್ಲಿ ವ್ಯವಸ್ಥಿತವಾದ ರೀತಿಯಲ್ಲಿ ಏರ್ಪಾಡು ಆಗಬೇಕು ಎಂಬುದಾಗಿ ನಾನು ಹೇಳಬಯಸುತ್ತೇನೆ.

ಇನ್ನು ಬಡ್ಜೆಟ್ಟಿನಲ್ಲಿ ಅರ್ಧಾಂಶವನ್ನು ಕೆಲವು ಸಂಸ್ಥೆಗಳಿಗೆ ಸಾಲವಾಗಿ ಕೊಡುವುದಕ್ಕಾಗಿ ಇಟ್ಟಿದ್ದೀರಿ. ಬೆಂಗಳೂರಿನ ಡೈರಿ ಕಟ್ಟಡದ ಬಗ್ಗೆ ೨ ಲಕ್ಷ ೭೦ ಸಾವಿರ ರೂಪಾಯಿಗಳನ್ನೂ, ಅಲ್ಲಿಗೆ ಬರೀ ಉಪಕರಣಗಳನ್ನು ಖರೀದಿ ಮಾಡುವ ಬಗ್ಗೆ ೧೩ ಲಕ್ಷರೂಪಾಯಿಗಳನ್ನೂ, ಎನ್.ಜಿ.ಇ ಎಫ್‌ಗೆ ೧ ಕೋಟಿ ೭೦ ಸಾವಿರ ರೂಪಾಯಿಗಳನ್ನೂ ಕೆ.ಸಿ.ಟಿ. ಮಿಲ್ಸ್‌ಗೆ ೧೮ ಲಕ್ಷ ೬ ಸಾವಿರ ಚಿಲ್ಲರೆ ರೂಪಾಯಿಗಳನ್ನೂ ಎಂ.ಎಸ್.ಕೆ. ಮಿಲ್ಸ್‌ಗೆ ೨೧ ಲಕ್ಷರೂಪಾಯಿಗಳನ್ನು ಇಟ್ಟಿದ್ದೀರಿ. ಇದನ್ನು ನ್ಯಾಯವಾಗಿ ವಿಚಾರಣೆ ಮಾಡುವುದಾದರೆ ತಾವು ಇಂತಹ ಸಂಸ್ಥೆಗಳನ್ನು ಹಲವಾರು ವರ್ಷಗಳಿಂದಲೂ ಪೋಷಣೆ ಮಾಡುತ್ತಿದ್ದೀರಿ. ಸರ್ಕಾರದ ಬೊಕ್ಕಸದಿಂದ ಎಷ್ಟು ಹಣ ಅಲ್ಲಿಗೆ ಹಾಕಿದರೂ, ಅವು ಇನ್ನೂ ತನ್ನ ಕಾಲಿನ ಮೇಲೆ ನಿಲ್ಲುವ ಶಕ್ತಿಯನ್ನು ಪಡೆದಿಲ್ಲ. ನಾವು ರೈತರಿಗೆ ಬೇಕಾದಂಥ ನೀರಾವರಿ ಸೌಕರ್ಯಗಳನ್ನು ಮಾಡಿಕೊಡಬೇಕೆಂದು ಹೇಳಿದರೆ, ಸರ್ಕಾರದವರು ನಮ್ಮಲ್ಲಿ ಹಣದ ಕಷ್ಟ ಉಂಟು ಎಂಬುದಾಗಿ ಹೇಳುತ್ತಾರೆ. ಸದಾ ಕಾಲ ನಷ್ಟ ಮಾಡುವಂಥ ಹಾಗೂ ಸದಾ ಕಾಲ ಸರಿಯಾದ ಉತ್ಪತ್ತಿ ಮಾಡದೇ ಇರುವ ಸಂಸ್ಥೆಗಳಿಗೆ ಬಡ ಬೋರೇಗೌಡನ ಹಣವನ್ನು ವೃಥಾ ಖರ್ಚುಮಾಡುತ್ತಿದ್ದೀರಿ ನಮ್ಮ ಸಮಾಜವಾದತತ್ವದ ಘೋಷಣೆಯ ದೃಷ್ಟಿಯಿಂದ ಅವನ್ನು ಆ ರೀತಿಯಾಗಿ ಬೆಳೆಸಿಕೊಂಡು ಹೋಗುವುದು ಸರಿಯಲ್ಲ. ಇದರಿಂದ ಜನಸಾಮಾನ್ಯರಿಗೆ ನಷ್ಟ ಮಾಡುವಂಥಾದ್ದು ನ್ಯಾಯವಲ್ಲ. ಜನಸಾಮಾನ್ಯರ ಜೀವನಮಟ್ಟವನ್ನು ಸರಿದೂಗಿಸುವುದಕ್ಕೆ ಬೇಕಾದ ಪರಿಹಾರ ಕ್ರಮಗಳನ್ನು ತೆಗೆದುಕೊಳ್ಳಬೇಕು. ಈ ರೀತಿ ಕೆಲವೇ ಸಂಸ್ಥೆಗಳನ್ನು ಘೋಷಣೆ ಮಾಡುವುದರಿಂದ ಈ ಸಂಸ್ಥೆಗಳ ನಷ್ಟವನ್ನು ತುಂಬಿಸುವುದಕ್ಕೆ ಮಾಡುವಂಥ ಪ್ರಯತ್ನಗಳಿಂದ ಮುಂದಕ್ಕೆ ಏನೂ ಪ್ರಯೋಜನವಿಲ್ಲ ಇಂತಹ ಅನ್ಯಾಯವನ್ನು ಸರ್ಕಾರ ಮುಂದುವರಿಸುವುದಕ್ಕೆ ನಿಜವಾಗಿ ಈ ಸಭೆ ಒಪ್ಪಿಗೆಯನ್ನು ಕೊಡುವುದಿಲ್ಲ. ಆದ್ದರಿಂದ ಎಲ್ಲ ರೀತಿಯಿಂದಲೂ ಈ ಸಪ್ಲಿಮೆಂಟರಿ ಬಡ್ಜೆಟ್ಟನ್ನು ವಿರೋಧಿಸುವುದಕ್ಕೆ ನಾನು ನಿಂತಿದ್ದೇನೆ. ನಾನು ಈ ಸಪ್ಲಿಮೆಂಟರಿ ಬಡ್ಜೆಟ್ಟನ್ನು ಪೂರ್ಣವಾಗಿ ವಿರೋಧಿಸುತ್ತೇನೆ.

MR. CHAIRMAN (SRI B. B. SIDDAIAH) in the Chair

SRI B. B. SAYANAK (Belgaum) —Mr. Chairman, Sir, I oppose the Supplementary Demands tabled by the Hon'ble Finance Minister. I would like to say a few words about 'Parliamentary Affairs'. There is some provision for the preparation of voters list. I would like to bring to the notice of the Hon'ble Minister that the list is prepared by the concerned Clerks in the office onely. They are not going house to house to enquire details and then prepare the list. Voters list is very important in a democracy. Therefore, I request the Government to see that the people who prepare the list go the respective houses to enquire details and then prepare the list. Now they are preparing the list without knowing whether a particular person is alive or not. This must be stopped.

Regarding education in our Marathi area, no text books have been provided. There are no Marathi medium books and there are no books on General Mathematics, General Seience and Social Studies. Books are not available notonly in Marathi Language but also in Urdu. We are now in the month of October. What would be the fate of the students if the text books are not made available to them ? This is the state of affairs regarding Urdu Marathi Mediums. The students are finding it difficult for want of text books. This is a hard time for students. I do not understand why the Government is lethargic to print the Books in Marathi and Urdu.

Regarding transfer of teachers, it is a sad thing to tell. One teacher by name Sri Shinde has been transferred within one year to a Barkword place in Khamapur Talukas Such a state of affairs is going on in our area. There is one D.D.P.I. in our area. He is a very corrupt officer. He visits Schools and transfers the teachers on the spot. On there are 280 Vacancies in the District. This is a sad stok of affair, Sir, I visited a School-St. Paul School, one day. When I went there, the Head-Master of that School was thrashing a boy. When I asked him why he was beating the boy, the Head Master said "are not the Police beating the public ?'. Then I asked him, whether he was a Police Officer, for which he said though he has not a Police Officer, he was entitled to bear the body. Then I asked where there was the rule? He said there was no rule, but he has entitlede to beat the boy. This is kind of attitude the Teachers are having. You must take drastic action against such teacheres particularjy against the teacher in st paul School in Belgaum.

In respect of Co-operation Department some of my friends have stated that there is corruption, nepotism, favouritism and all these things. You must please see that such things do not happen.

In respect of Panchayat, the Government have not framed rules for Panchayat Seeretaries. I request the Government to formulate rules

(Sri **B. B. SAYANAK**)

for the Panchayat Secretaries; otherwise there will not be any discipline and disciplinary action cannot be taken by the Executive Officers or by the Assistant Commissoners.

Sir, regarding the Hospital affairs, it is sad tale to tell. There are no medicines at all in the Hospitals. In addition to this, X-Rays are not taken though there are three X-Ray machines. The reason is given is that all the machines are out of order. All the patients are directed to go to private people to have the X-Ray photo. This is a sad state of affair. I request the Government to transfer the Civil Surgeon who is not haveing the requisite qualification of M.D. He is not a sugreon. It is better to transfer him from Belgaum Civil Hospital.

Sir, regarding Khedda operations, we are spending lakhs of rupees. What is the benefit we are going to derive? We have nothing to-do with the elephant to-day. Therefore we can stop this operation and save the money.

Sir, regarding *Expo-70*, there was some lively discussion. There was influence and favouritism. The Ministers, relatives had gone and come from Japan. I want to ask why the Government has selected the persons who stood First or Second in all the examination, *i.e.*, in B.sc. B.A., M.sc., M.A., M.B.B.S., B.E. etc. What has happened? They selected their own relatives. This is very bad. The poor people who have passed their examination in merit have been left out. There would not have been any agitation in the states,; if the Government has been fair in this matter. Thank you Sir.

† ಶ್ರೀ ಎಸ್ ಬಂಗಾರಪ್ಪ (ಸೊರಬ);—ಮಾನ್ಯ ಅಧ್ಯಕ್ಷರೇ, ಮಾನ್ಯ ಹಣಕಾಸಿನ ಸಚಿವರು ಮಂಡನೆ ಮಾಡಿರತಕ್ಕ ಹೆಚ್ಚುವರಿ ಬೇಡಿಕೆಗಳನ್ನು ವಿರೋಧ ಮಾಡುತ್ತಾ ಒಂದೆರಡು ವಿಷಯಗಳನ್ನು ಇಲ್ಲಿ ಪ್ರಸ್ತಾಪಮಾಡಬೇಕೆಂದಿದ್ದೇನೆ. ಈಗ ಡಿಮ್ಯಾಂಡ್ ನಂ.೧೭ ರ ಬಗ್ಗೆ ನಾನು ಏನೂ ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಏಕೆಂದರೆ, ಅದರ ಬಗ್ಗೆ ಈಗಾಗಲೆ ಹಲವು ಸದಸ್ಯರು ಮಾತನಾಡಿದ್ದಾರೆ.

ಈ ಡಿಮ್ಯಾಂಡ್ ಸಂ. ೨೭ ಬಹಳ ಮುಖ್ಯವಾದುದು, ಇದು ಬೆಂಗಳೂರು ಡೈರಿಗೆ ಸಂಬಂಧಪಟ್ಟಿದ್ದು. ಇದರ ವಿಚಾರದಲ್ಲಿ ಈ ಮನೆಯಲ್ಲಿ ಒಂದು ಸಾರಿ ರದ್ದಾಂತವಾದುದು ಎಲ್ಲರಿಗೂ ಗೊತ್ತಿದೆ. ಬೆಂಗಳೂರು ಡೈರಿಯ ಮೇಲೆ ಹಲವಾರು ಅಪಾದನೆಗಳನ್ನು ಮಾಡಿದ ಸದಸ್ಯರು ಇಲ್ಲಿ ಬಹಳ ಜನರು ಇದ್ದಾರೆ. ಅಲ್ಲಿ ಹಿಂದೆ ಮ್ಯಾನೇಜಿಂಗ್ ಡೈರೆಕ್ಟರ್ ಆಗಿದ್ದ ಆದಿರಾಜ್ಯನವರು ಯಾರೆಂಬುದು ತಮಗೆಲ್ಲಾ ಗೊತ್ತಿದೆ. ಈಗ ಅವರು ಶಿವಮೊಗ್ಗ ಜಿಲ್ಲಾಧಿಕಾರಿಗಳಾಗಿದ್ದಾರೆ. ಇವರ ಕಾಲದಲ್ಲಿ ಬೇಕಾದಷ್ಟು ಬೆಣ್ಣೆ ಸುಟ್ಟು ಹಾಕಿದರು ತುಪ್ಪ ಹಾಳು ಮಾಡಿದರೂ ಎಲ್ಲಾ ಮಾಡಿದರು. ಆ ವ್ಯಕ್ತಿಯ ಮೇಲೆ ಎನ್‌ಕ್ವೈರಿ ಮಾಡಬೇಕೆಂದು, ಹೇಳಿ ಹಲವು ಬಾರಿ ಹೇಳಿದರೂ ಕೂಡ ಈ ಸರ್ಕಾರದವರು ಏನೊಂದು ಕಾರ್ಯಕ್ರಮವನ್ನು ಅವರ ಮೇಲೆ ತೆಗೆದುಕೊಳ್ಳಲಿಲ್ಲ. ಪಬ್ಲಿಕ್ ಅಕೌಂಟ್ಸ್ ಕಮಿಟಿ ಕೂಡ ಈ ವಿಷಯವನ್ನು ವಿಚಾರಣೆಗೆ ಒಳಪಡಿಸಿರುವುದು ಎಲ್ಲರಿಗೂ ಗೊತ್ತಿದೆ. ಅದರ ರಿಪೋರ್ಟು ಈಗಾಗಲೆ ಸದಸ್ಯರಿಗೆ ಎಲ್ಲಾ ಹಂಚಿದ್ದಾರೆ. ಮೊನ್ನೆ ತಾನೆ ನಾನು ಸ್ಕಾರ್ಸಿಟಿ ಬಗ್ಗೆ ಮಾತನಾಡುವಾಗ ಈ ವಿಚಾರ ಪ್ರಸ್ತಾಪ ಮಾಡಿದೆ ಮಾನ್ಯ ರಾಮಕೃಷ್ಣ ಹೆಗಡೆಯವರಾದರೂ ಇವತ್ತಿನ ದಿವಸ ಇದಕ್ಕೆ ಉತ್ತರ ಕೊಡುತ್ತಾರೋ ಎಂದು ನೋಡಬೇಕಾಗಿದೆ. ನಾನು ಇವತ್ತು ಶಿವಮೊಗ್ಗ ಜಿಲ್ಲಾಧಿಕಾರಿಗಳ ಬಗ್ಗೆ ಮಾತನಾಡುತ್ತಿದ್ದೇನೆ. ಬೆಂಗಳೂರು ಡೈರಿಯಲ್ಲಿ ಮ್ಯಾನೇಜಿಂಗ್ ಡೈರೆಕ್ಟರ್ ಆಗಿದ್ದಾಗ ಇವರು ಏನು ಪಬ್ಲಿಕ್ ಹಣವನ್ನು ಪೋಲು ಮಾಡಿದ್ದಾರೆ, ಮತ್ತು ಅವರಿಂದ ಏನು ಹೆಸರು ತೆಗೆದುಕೊಂಡಿದ್ದಾರೆಂಬುದರ ಬಗ್ಗೆ ನಾನು ಹೇಳುತ್ತಿದ್ದೇನೆ.

ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ:— ಅವರು ಬಿ ಎಂ ಡಿ ಯಲ್ಲೂ ಒಂದು ಕೋಟಿ ರೂಪಾಯಿ ಹಾಳು ಮಾಡಿದ್ದಾರೆ.

ಶ್ರೀ ಎಸ್. ಬಂಗಾರಪ್ಪ:— ಬೋರ್ಡ್ ಆಫ್ ಮಿನರಲ್ ಡೆವಲಪ್‌ಮೆಂಟ್‌ನಲ್ಲಿಯೂ ಸಹ ಇವರು ಒಂದು ಕೋಟಿ ರೂಪಾಯಿ ಪೋಲು ಮಾಡಿದ್ದಾರಂತೆ. ಅಂದರೆ ಮಾನ್ಯ ಸದಸ್ಯರು ಹೇಳಿದ ಹಾಗೆ ಇವರು ಬಸ್ಮಾಸುರನ ಒಂದು ಜನ್ಮವೆಂದು ಹೇಳಬಹುದು. ಇವರು ಎಲ್ಲಿ ಹೋದರೆ ಅಲ್ಲಿ ಸರ್ಕಾರದ ಹಣವನ್ನು ಪೋಲು ಮಾಡುತ್ತಿದ್ದಾರೆ. ಬೆಂಗಳೂರು ಡೈರಿಯಲ್ಲಿ ಹಾಳು ಮಾಡಿದ ನಂತರ ಈಗ ಶಿವಮೊಗ್ಗ ಜಿಲ್ಲಾಧಿಕಾರಿಯಾಗಿ ಸಾಕಷ್ಟು ಹಾಳು ಮಾಡಿದ್ದಾರೆ.

ನಮ್ಮ ಜಿಲ್ಲೆಯಲ್ಲಿ ಡೆಪ್ಯುಟೀಕಮೀಷನರಾಗಿರತಕ್ಕ ಶ್ರೀ ಆದಿರಾಜಯ್ಯನವರು ಬೆಂಗಳೂರು ಡೈರಿಯಲ್ಲಿ ಹಣವನ್ನು ಹಾಳು ಮಾಡಿದ್ದಾರೆ ಎಂದು ಪಬ್ಲಿಕ್ ಅಕೌಂಟ್ಸ್ ಕಮಿಟಿಯವರು ಆಪಾದನೆ ಮಾಡಿ ಸರ್ಕಾರಕ್ಕೆ ಒಂದು ರಿಪೋರ್ಟ್ ಕೊಟ್ಟಿದ್ದಾರೆ, ಇವರು ಬಂಡವಾಳಶಾಹಿಗಳ ಜೊತೆಯಲ್ಲಿ ಷರೀಕು ಆಗಿದ್ದಾರೆ. ಹೀಗಿರುವಾಗ ಇವರನ್ನು ಕೆಲಸದಿಂದ ಸಸ್‌ಪೆಂಡ್ ಮಾಡಿ ಕೆಲಸದಿಂದ ಡಿಸ್‌ಮಿಸ್ ಮಾಡುವುದಕ್ಕೆ ಸರ್ಕಾರದವರು ಏತಕ್ಕೆ ಕ್ರಮ ತೆಗೆದುಕೊಳ್ಳಲಿಲ್ಲ ಎಂದು ನಾನು ಶ್ರೀಮಾನ್ ವೀರೇಂದ್ರಪಾಟೀಲರನ್ನು ಕೇಳುತ್ತಿದ್ದೇನೆ ಇವರ ಮೇಲೆ ಸರ್ಕಾರದವರು ಏತಕ್ಕೆ ಅಧಿಕಾರವನ್ನು ಚಲಾವಣೆ ಮಾಡಲಿಲ್ಲ? ಶ್ರೀಮಾನ್ ಆದಿರಾಜಯ್ಯನವರು ಅಧಿಕಾರಿಗಳಿಗೆ ಷರಿಕು ಆಗಿ ಶಿಕಾರಿಪುರದ ತಾಲ್ಲೂಕು ಮಂಡಲಿಯಲ್ಲಿ ಸುಮಾರು ೬೦ ಸಾವಿರ ರೂಪಾಯಿಗಳಷ್ಟು ಹಣ ಮೋಸ ನಡೆಸಿದ್ದಾರೆ. ಸೊಸೈಟಿಯಲ್ಲಿ ಅಧಿಕಾರಿಗಳಜೊತೆಯಲ್ಲಿ ಷರೀಕು ಆಗಿ ಸತ್ತವರ ರುಜು ಹಾಕಿಸಿ ಸಾಲ ತೆಗೆದುಕೊಂಡಿದ್ದಾರೆ. ಬಿ. ಡಿ. ಒ. ಮುಂತಾದ ತಾಲ್ಲೂಕು ಮಂಡಳಿಯ ಅಧಿಕಾರಿಗಳ ಜೊತೆ ಷರೀಕು ಆಗಿ ಕೆರೆ ಮಾಡಿಸಿದ್ದೇವೆ, ರಸ್ತೆ ಮಾಡಿಸಿದ್ದೇವೆ ಎಂದು ಖರ್ಚು ತೋರಿಸಿ ಹಣವನ್ನು ಹೊಡೆದಿದ್ದಾರೆ. ಅಲ್ಲಿ ಕೆರೆಯು ಕೆಲಸವನ್ನೂ ಮಾಡಿಸಿಲ್ಲ. ರಸ್ತೆಯ ಕೆಲಸವನ್ನೂ ಮಾಡಿಸಿಲ್ಲ. ಇದರ ಜೊತೆಗೆ ಮಾನ್ಯ ರೆವಿನ್ಯೂ ಉಪಸಚಿವರಾದ ಶ್ರೀ ಬಸವಣ್ಣಪ್ಪನವರು ಅಧಿಕಾರಿಗಳನ್ನು ಷೀಲ್ಡ್ ಮಾಡುತ್ತಿದ್ದಾರೆ. ಯಾವುದೇ ವಿಚಾರಕ್ಕಾಗಲೀ ಎಲ್ಲಾ ಅಧಿಕಾರಿಗಳೂ ಇವರ ಹತ್ತಿರ ಬರುತ್ತಾರೆ. ಅವರಿಗೆ ಶ್ರೀಮಾನ್ ಬಸವಣ್ಣಪ್ಪನವರು ಷೀಲ್ಡ್ ಮಾಡುತ್ತಾರೆ. ಈ ವಿಚಾರದಲ್ಲಿ ಮತ್ತು ಡೆಪ್ಯುಟಿ ಕಮೀಷನರ್ ವಿಚಾರದಲ್ಲಿ ಕೆಲವು ಆಪಾದನೆಗಳನ್ನು ಮಾಡಿ ನಾವು ವಿಜಿಲೆನ್ಸ್ ಕಮೀಷನರಿಗೆ ಒಂದು ರೆಪ್ರೆಜೆಂಟೇಷನ್ ಕೊಟ್ಟಿದ್ದೇವೆ. ಶಿಕಾರಿಪುರದ ಬಿ. ಡಿ. ಒ. ಹಣವನ್ನು ಹಾಳು ಮಾಡುತ್ತಿದ್ದಾರೆ. ಲಂಚವನ್ನು ತಿನ್ನುತ್ತಿದ್ದಾರೆ. ಡೆಪ್ಯುಟಿ ಕಮೀಷನರ್ ಲಂಚವನ್ನು ತಿನ್ನುತ್ತಿದ್ದಾರೆ. ಇಂಥಾ ಆಪಾದನೆಗಳನ್ನೆಲ್ಲಾ ಈ ಅಧಿಕಾರಿಗಳ ಮೇಲೆ ಮಾಡಿ ಸರ್ಕಾರಕ್ಕೆ ರೆಪ್ರೆಜೆಂಟೇಷನ್ ಕೊಟ್ಟರೂ ಕೂಡ ಇವರ ಮೇಲೆ ಇನ್ನೂ ಸರ್ಕಾರದವರು ಏತಕ್ಕೆ ಕ್ರಮವನ್ನು ತೆಗೆದುಕೊಳ್ಳಲಿಲ್ಲ ಎಂದು ನಾನು ಅಧ್ಯಕ್ಷರ ಮುಖಾಂತರ ಸರ್ಕಾರದವರನ್ನು ಕೇಳಬೇಕಾಗಿದೆ. ಹೀಗಿರುವಾಗ ಈ ಸಪ್ಲಿಮೆಂಟರಿ ಬಡ್ಜೆಟ್ ಎಸ್ಟಿಮೇಟಿನಲ್ಲಿ ಕೇಳಿರುವ ಎರಡು ಮೂರು ಕೋಟಿ ರೂಪಾಯಿಗಳಿಗೆ ನಾವು ಹೇಗೆ ನಮ್ಮ ಮಂಜೂರಾತಿಯನ್ನು ಕೊಡುವುದು? ಯಾವ ನಂಬಿಕೆಯ ಮೇಲೆ ಸರ್ಕಾರಕ್ಕೆ ಈ ಹಣಕ್ಕೆ ಮಂಜೂರಾತಿಯನ್ನು ಕೊಡುವುದು? ಇಂಥಾ ಡೆಪ್ಯುಟಿ ಕಮೀಷರ್ ಸರ್ಕಾರಿ ಸೇವೆಯಲ್ಲಿದ್ದರೆ ಸರ್ಕಾರದ ಕೈಯಲ್ಲಿ ಯಾವ ಹಣವನ್ನೂ ನಂಬಿ ಕೊಡುವುದಕ್ಕಾಗುವುದಿಲ್ಲ. ಇಂಥಾ ಅಧಿಕಾರಿಗಳನ್ನು ಇಟ್ಟುಕೊಂಡರೆ ಸರ್ಕಾರವನ್ನು ನಡೆಸತಕ್ಕ ಜವಾಬ್ದಾರಿಯನ್ನು ಹೊತ್ತಿರತಕ್ಕ ಜನರ ಕೈಯಲ್ಲಿ ಸಪ್ಲಿಮೆಂಟರಿ ಬಡ್ಜೆಟ್ಟಿನಲ್ಲಿ ಕೇಳಿರತಕ್ಕ ಹಣವನ್ನು ಕೊಡುವುದಕ್ಕೆ ಆತಂಕವಾಗಿದೆ. ಆದ್ದರಿಂದ ನಾನ ಈ ಡಿಮ್ಯಾಂಡನ್ನು ವಿರೋಧ ಮಾಡುತ್ತೇನೆ. ಇಷ್ಟು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† **ಶ್ರೀಮತಿ ನಾಗರತ್ನಮ್ಮ ಹಿರೇಮಠ (ಗಾಂಧೀನಗರ)**:—ಮಾನ್ಯ ಆಧ್ಯಕ್ಷರೇ ೧೯೭೦-೭೧ನೇ ಸಾಲಿನ ಮೊದಲನೆಯ ಕಂತುಗಳಿಗೆ ಸಂಬಂಧಿಸಿದ ಬೇಡಿಕೆಗಳನ್ನು ಅರ್ಥ ಸಚಿವರು ಸಭೆಯ ಒಪ್ಪಿಗೆಗಾಗಿ ನಮ್ಮ ಮುಂದೆ ಮಂಡಿಸಿದ್ದಾರೆ. ದೇಶದ ಅಭಿವೃದ್ಧಿ ಕೆಲಸಗಳಿಗಾಗಿ ಜನತೆಯ ಸುಖ ಸೌಲಭ್ಯಕ್ಕಾಗಿ ಬೇಡಿಕೆಗೆ ಒಪ್ಪಿಗೆ ಕೊಡುವುದು ಸದಸ್ಯರ ಕರ್ತವ್ಯ. ಅಂತೆ ಹಣ ದುರ್ವಿನಿಯೋಗವಾಗದಂತೆ ನೋಡಿಕೊಳ್ಳುವುದು ಸರ್ಕಾರದ ಕರ್ತವ್ಯ. ಒಂದುವೇಳೆ ಸರ್ಕಾರದವರು ಅಪ್ಪಿ ತಪ್ಪಿ ಹಣ ಖರ್ಚು ಮಾಡುತ್ತಿದ್ದರೆ ಅದಕ್ಕೆ ಸರ್ಕಾರಕ್ಕೆ ಮಾರ್ಗದರ್ಶನ ನೀಡುವುದು ಸದಸ್ಯರಾದ ನಮ್ಮ ಕರ್ತವ್ಯ. ಮಾನ್ಯ ಹಣಕಾಸಿನ ಸಚಿವರ ನಂಬಿಕೆಯ ಬಗ್ಗೆ ಮತ್ತು ಅವರ ಪ್ರಾಮಾಣಿಕತೆಯ ಬಗ್ಗೆ ನಾನು ಪ್ರಶ್ನೆ ಮಾಡುವುದಿಲ್ಲ. ಆದರೆ ನಾನು ಒಂದು ವಿಚಾರವನ್ನು ಮಾತ್ರ ಹೇಳುತ್ತೇನೆ. ಅದು ಏನೆಂದರೆ ಹಣವನ್ನು ಯಾವುದೇ ಇಲಾಖೆಗೆ ಖರ್ಚು ಮಾಡಬೇಕಾದರೂಕೂಡ ಅದನ್ನು ದೂರದೃಷ್ಟಿಯಿಂದ ವಿಚಾರ ಮಾಡಿ ಖರ್ಚು ಮಾಡಬೇಕಾಗುತ್ತದೆ. ಪಬ್ಲಿಕ್ ಅಕೌಂಟ್ಸ್ ಕಮಿಟಿಯವರು ಕೊಟ್ಟಿರತಕ್ಕ ವರದಿಯನ್ನು ನೋಡಿದರೆ ಯಾವ ಯಾವ ಇಲಾಖೆಯಲ್ಲಿ ಹೇಗೇಗೆ ಹಣ ದುರ್ವಿನಿಯೋಗವಾಗಿದೆ ಎಂಬುದು ಅರ್ಥವಾಗುತ್ತದೆ. ಇನ್ನು ಮುಂದಾದರೂ ಕೂಡ

(ಶ್ರೀಮತಿ ನಾಗರತ್ನಮ್ಮ ಹಿರೇಮಠ)

ಎಷ್ಟೆಷ್ಟು ಫ್ಯಾಕ್ಟರಿಗಳಿಗೆ, ಎಷ್ಟೆಷ್ಟು ಕೋಆಪರೇಟಿವ್ ಸೊಸೈಟಿಗಳಿಗೆ ಯಾವ ಯಾವ ರೀತಿಯಲ್ಲಿ ಹಣ ದುರ್ವಿನಿಯೋಗವಾಗಿದೆ ಎಂಬುದನ್ನು ಸರ್ಕಾರದವರು ಅರ್ಥಮಾಡಿಕೊಂಡು ಇನ್ನುಮುಂದಾದರೂ ಇಂಥಾ ದುರ್ವಿನಿಯೋಗ ಆಗದಂತೆ ನೋಡಿಕೊಳ್ಳುತ್ತಾರೆ ಎಂದು ಭಾವಿಸಿ ಇನ್ನು ನಮ್ಮ ಮುಂದಿರುವ ಸಪ್ಲಿಮೆಂಟರಿ ಬಡ್ಜೆಟ್ಟಿನ ಬಗ್ಗೆ ಒಂದೆರಡು ವಿಷಯಗಳನ್ನು ಹೇಳಬಯಸುತ್ತೇನೆ. ಇದರಲ್ಲಿ ಡಿಮ್ಯಾಂಡ್ ನಂಬರ್ ೧೭ಕ್ಕೆ ಸಂಬಂಧಪಟ್ಟಹಾಗೆ ಹೇಳುವುದಾದರೆ ಇದರಲ್ಲಿ ಯಾವರೀತಿ ಹಣ ವ್ಯಯವಾಗಿದೆ ಎಂಬುದನ್ನು ನಾನು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ನಮ್ಮ ಸರ್ಕಾರ ಯುವಜನ ಸಾಂಸ್ಕೃತಿಕ ಶಾಖೆ ಪ್ರಾರಂಭಿಸಿದ್ದು ಶ್ಲಾಘನೀಯವಾದ ವಿಚಾರವೇನೋ ಹೌದು. ಆದರೆ ಅದಕ್ಕೆ ಒದಗಿಸಿದಂತಹ ಹಣ ಇಡೀ ದೇಶದ ಯುವಕರಿಗೆ ಉಪಯೋಗವಾಗಬೇಕು. ಕೆಲವು ಮಂತ್ರಿಗಳಿಗೆ, ಸಂಬಂಧಪಟ್ಟ ಯುವಕರೋ ಅಥವಾ ರಾಜಕೀಯ ಪಕ್ಷಗಳ ಅಧ್ಯಕ್ಷ ಅಥವಾ ಪ್ರಭಾವ ಶಾಲಿಗಳಾದ ಆ ಹುಡುಗರೋ, ಹುಡುಗರ ಸ್ನೇಹಿತರೋ ಕೆಲವರು ಸೇರಿಕೊಂಡು ಯುವಕ ಸಾಂಸ್ಕೃತಿಕ ಸಂಘ ಮಾಡಿಕೊಂಡು ಅವರವರಿಗೆ ತಿಳಿದಂತಹ ಯುವಕ ಚಟುವಟಿಕೆಗಳನ್ನು ನಡೆಸಲು ಸರ್ಕಾರದಿಂದ ೧೦ ಸಾವಿರ ರೂಪಾಯಿಗಳನ್ನು ಕೊಡುತ್ತಿದ್ದಾರೆಎಂದು ನಾನು ಕೇಳಿದ್ದೇನೆ. ಒಂದುವೇಳೆ ಹಾಗೆ ಕೊಟ್ಟಿದ್ದರೆ ಅದು ನಿಜವಾಗಿಯೂ ಅನ್ಯಾಯ ಎಂದು ನಾನು ಹೇಳಬಯಸುತ್ತೇನೆ. ಬೆಂಗಳೂರು ನಗರದಲ್ಲಿ ಇರತಕ್ಕ ಯುವಜನರಿಗೆ ಇದು ಉಪಯೋಗವಾದರೆ ಸಾಲದು, ದೇಶದ ಹಳ್ಳಿಜನತೆಯ ಎಲ್ಲಾ ಜನಾಂಗದ ಮಕ್ಕಳಿಗೂ ಇದು ವಿನಿಯೋಗವಾಗಬೇಕು. ಸರ್ಕಾರದ ಧನಸಹಾಯ ಏನಿದೆ ಅದು ಸಾರ್ವತ್ರಿಕವಾಗಿ ಯುವಕ ಜನಾಂಗ ಸಂಸ್ಕೃತಿಗಳ ಚಟುವಟಿಕೆಗಳಿಗೆ ನೆರವಾಗುವಂತಿರಬೇಕು ಸರ್ಕಾರ ಸಹಾಯಧನ ನೀಡುವಾಗ ಯುವಕ ಸಂಘದ ಸಂಚಾಲಕರು ಯಾರು, ಸಹಾಯಧನ ಸದುಪಯೋಗವಾಗುವುದೇ, ಇತ್ಯಾದಿಗಳನ್ನು ವಿಮರ್ಶಿಸಿ ಸಹಾಯ ಧನ ಸಲ್ಲಿಸಬೇಕು. ಬೆಂಗಳೂರಿನಲ್ಲಿ ಪ್ರಭಾವಶಾಲಿಗಳ ಮಕ್ಕಳು ಅವರ ಮಿತ್ರರೂ ಮಾಡಿಕೊಂಡಿರುವ ಯುವಕ ಸಂಘಕ್ಕೆ ವಾರ್ಷಿಕವಾಗಿ ಸಾವಿರಾರು ರೂಪಾಯಿಗಳ ಧನ ಸಹಾಯ ಒದಗುತ್ತಿದೆ ಎಂದುತಿಳಿದು ಬಂದಿರುವುದರಿಂದಲೇ ನಾನು ಈ ಬಗ್ಗೆ ಹೇಳುತ್ತಿದ್ದೇನೆ. ಇದುನಿಜವಾದಲ್ಲಿ ಇಂತಹ ಆಕ್ಷೇಪಣೀಯ ವಿಚಾರಗಳಿಗೆ ಆಸ್ಪದ ಕೊಡದಿರುವುದು ಶ್ರೇಯಸ್ಕರವೆಂದು ಹೇಳಬಯಸುತ್ತೇನೆ. ನಾನು ಮೊದಲೇ ಹೇಳಿದಹಾಗೆ ಸರ್ಕಾರದವರು ಖರ್ಚು ಮಾಡುವ ಹಣ ಸದ್ವಿನಿಯೋಗವಾಗಬೇಕೆಂದು ಹೇಳಬಯಸುತ್ತೇನೆ. ಇಂತಹ ಒಂದೇ ಒಂದು ಸಂಘಕ್ಕೆ ಹಣ ವಿನಿಯೋಗ ಮಾಡುತ್ತಿದರೆ ಅದು ಆಕ್ಷೇಪಣೀಯ ಎಂದು ಹೇಳುತ್ತೇನೆ. ಯುವಜನ ಕಲ್ಯಾಣ ಖಾತೆಯನ್ನು ಪ್ರಥಮವಾಗಿ ಆರಂಭಿಸಿದ್ದು ನಮ್ಮ ರಾಜ್ಯ. ಆದರೆ ಅದೊಂದೇ ಪ್ರಥಮವಾಗದೇ ಇನ್ನೂ ಅನೇಕ ಪ್ರಕರಣಗಳಿಂದ ಇಡೀ ಭಾರತದ ಗಮನವನ್ನು ಸೆಳೆದ ಕೀರ್ತಿ ನಮ್ಮ ಸರ್ಕಾರಕ್ಕೆ ಸಲ್ಲಬೇಕು. ಸರ್ಕಾರ ಒಂದುಕಡೆ ದಾರಿ ತಪ್ಪಿ ನಡೆದಿದೆ. ಎಲ್ಲಿ ದಾರಿ ತಪ್ಪಿ ನಡೆದಿದೆ ಎಂಬ ಬಗ್ಗೆ ಒಂದು ಉದಾಹರಣೆಯನ್ನು ಕೊಡುತ್ತೇನೆ. ಎಕ್ಸ್‌ಪೋ-೭೦ಕ್ಕೆ ನಮ್ಮ ಸರ್ಕಾರದವರು ಒಂದು ನಿಯೋಗವನ್ನು ಕಳಿಸುವುದರಲ್ಲಿ ದಾರಿ ತಪ್ಪಿದರು. ಆ ರೀತಿ ಆಗದಂತೆ ಸರ್ಕಾರದವರು ಮೊದಲೇ ನೋಡಿಕೊಳ್ಳಬಹುದಿತ್ತು. ಈ ವಿಚಾರದಲ್ಲಿ ಸರ್ಕಾರ ಯಾವ ರೀತಿ ದಾರಿ ತಪ್ಪಿತು ಎಂಬುದನ್ನು ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ಈ ಯುಗದ ಮಾನವನ ಮಹೋನ್ನತ ಸಾಧನೆ ಎಕ್ಸ್‌ಪೋ-೭೦ಗೆ ನಮ್ಮ ಮುಖ್ಯಮಂತ್ರಿಗಳು ಭೇಟಿ ನೀಡಿದ ನಂತರ ನಮ್ಮ ರಾಜ್ಯದ ಯುವಕರನ್ನು ಅದಕ್ಕೆ ಕಳಿಸೋಣ, ಅವರು ಅದನ್ನು ನೋಡಿ ಅದರಿಂದ ಉಪಯೋಗ ಪಡೆಯಲಿ ಎನ್ನುವ ಭಾವನೆ ಬಂದಿದು ಪ್ರಶಂಸನೀಯ ಆದರೆ ವಾಸ್ತವಿಕ ದೃಷ್ಟಿಯಿಂದ ಈ ವಿಚಾರ ಕಾರ್ಯಶೀಲವೇ, ಸೂಕ್ತವೇ ಎಂದು ಚಿಂತಿಸದೆ ಏನೋ ಮಾಡಲು ಹೋಗಿ ಏನೋ ಆಗಿ ದಾರಿಯಲ್ಲಿ ಹೋಗುವ ದೆವ್ವವನ್ನು ಮನೆ ಹೊಗಿಸಿಕೊಂಡಂತೆ ಅನೇಕ ಕಷ್ಟನಿಷ್ಠೂರಗಳನ್ನು ಹೊತ್ತುಕೊಂಡ ಪಾಡು ಸರ್ಕಾರದ್ದಾಯಿತು. ಆದರಿಂದ ಅನೇಕ ಕಷ್ಟನಷ್ಟಗಳಾಯಿತು. ಈ ನಿಯೋಗದ ಆಯ್ಕೆ ಅಕ್ರಮವೆಂಬುದನ್ನು ಇಡೀ ದೇಶಕ್ಕೆ ಇಡೀ ಜನತೆಗೆ ಮತ್ತು ಇಡೀ ವಿದ್ಯಾರ್ಥಿ ವೃಂದಕ್ಕೆ ತೋರಿಸಿದಹಾಗಾಯಿತು. ಮತ್ತು ವಿದ್ಯಾರ್ಥಿ ವೃಂದದಲ್ಲಿ ಅಶಾಂತಿ ಉಂಟುಮಾಡಿದಹಾಗೆ ಆಯಿತು. ಇಂತಹ ಸಾರ್ವತ್ರಿಕ ಸಮಸ್ಯೆಗಳ ತೀರ್ಮಾನ ಕೈಕೊಳ್ಳಬೇಕಾದರೆ ದೂರದೃಷ್ಟಿ ಇರಬೇಕು. ತೀರ್ಮಾನದ ಆಗುಹೋಗುಗಳ ಅರಿವಿರಬೇಕು. ನಿರ್ದಿಷ್ಟ ರೀತಿ ನೀತಿ ಗಳಿಂದ ತೀರ್ಮಾನ ಕೈಕೊಳ್ಳಬೇಕು. ಮೊಗಲಾಯಿ ರೀತಿಯಲ್ಲಿ ಇನ್‌ಕ್ಲೂಡ್ ಸಮ್ ಎಕ್ಸ್, ವೈ, ಜಡ್ ಎಂದು ಮಂತ್ರಿಗಳ, ಶಾಸಕರ, ಅಧಿಕಾರಿಗಳ, ಪ್ರಭಾವಶಾಲಿಗಳ ಮಕ್ಕಳು ಮತ್ತು ಆಪ್ತೇಷ್ಟರುಗಳನ್ನು ಅರ್ಹತೆ ಇರಲಿ, ಇಲ್ಲದಿರಲಿ ನಿಯೋಗಕ್ಕೆ ಆರಿಸಿದರೆ ಇದನ್ನು ಯುವಕ ವೃಂದ, ಜನತೆ ಯಾರು ಒಪ್ಪಲಾರರು. ಯಾರು ಏನೇ ಹೇಳಲಿ, ಸರ್ಕಾರ ಈ ವಿಚಾರದಲ್ಲಿ ಎಡವಿರುವುದು ವಿಚಾರವಂತರೆಲ್ಲರಿಗೂ ಅರ್ಥವಾಗುತ್ತದೆ. ಏಕೆಂದರೆ ತನ್ನ ಆಯ್ಕೆಗಾಗಿ ಸರ್ಕಾರ ಕೆಲವು ಸ್ಥಾನಗಳನ್ನು ಇಟ್ಟುಕೊಂಡಿದ್ದು ದೂರದೃಷ್ಟಿಯ ಅಭಾವ-ಸ್ವಾರ್ಥದ ಪ್ರಭಾವವನ್ನು ತೋರಿಸುತ್ತದೆ. ರಾಜ್ಯದ ವಿಶ್ವವಿದ್ಯಾನಿಲಯಗಳ ಆಯ್ಕೆಯಲ್ಲಿ ಅನ್ಯಾಯ ನಡೆದಿದೆ, ಸರ್ಕಾರದ ಆಯ್ಕೆಗಂತೂ ಯಾವ ಆಧಾರವೂ ಇಲ್ಲ ಎಂದು ನನ್ನ ಮನಸ್ಸಿಗೆ ತಿಳಿದುಬಂದಾಗ ಆಗಸ್ಟ್ ೨೨ರಂದೇ ನಮ್ಮ ಉಪಕುಲಪತಿಗಳು, ಯುವಜನ ಕಲ್ಯಾಣ ಖಾತೆಯ ಸಂಚಾಲಕರು ಮತ್ತು

ಮುಖ್ಯ ಮಂತ್ರಿಗಳೊಡನೆ ಮಾತನಾಡಿದೆ. ಉಪಕುಲಪತಿಗಳು ನಮ್ಮ ಪಾತ್ರವೇನೂ ಇಲ್ಲವೆಂದರು. ಯುವಜನ ಕಲ್ಯಾಣ ಸಂಚಾಲಕರು ಸತ್ಯದ ತಲೆಯಮೇಲೆ ಹೊಡೆದಂತೆ ಅಪ್ಪಟ ಸುಳ್ಳು ಹೇಳಿದರು. ಮುಖ್ಯಮಂತ್ರಿಗಳು ನನಗೇನೂ ಗೊತ್ತಿಲ್ಲ, ಅನ್ಯಾಯವಾಗಿದ್ದರೆ ಅದನ್ನು ರದ್ದುಪಡಿಸುವುದೇ ಒಳ್ಳೆಯದೇನೋ, ಇದೆಲ್ಲಾ ತಲೆನೋವಿನ ಕೆಲಸ ಎಂದರು. ಅದಕ್ಕೆ ನಾನು ಕ್ಯಾನ್ಸಲ್ ಮಾಡುವುದು ಒಳ್ಳೆಯದು, ಇಲ್ಲದಿದ್ದರೆ ಪುನರ್ವಿಮರ್ಶೆ ಮಾಡಿ ಎಂದು ಹೇಳಿದೆ. ಅದಕ್ಕೆ ಅವರು ಏನು ಮಾಡುವುದು, ಕೆಲವು ಶಾಸಕರು ಮತ್ತಿತರರು ಬಂದು ಒತ್ತಾಯ ಮಾಡಿದ್ದರಿಂದ ಕೆಲವರನ್ನು ಸೇರಿಸಬೇಕಾಯಿತು ಎಂದು ಹೇಳಿದರು. ಅನ್ಯಾಯ ನಡೆದಿದೆ ಎಂಬುದರ ಬಗ್ಗೆ ನನ್ನ ಮಗನದೇ ಎಂದು ಉದಾಹರಣೆ ಕೊಟ್ಟೆ. ರಾಜ್ಯದ ಎಲ್ಲ ವಿಶ್ವವಿದ್ಯಾನಿಲಯಗಳ ಶ್ರೇಷ್ಠವಾಗಿ ಎಂದು ನಿಮ್ಮ ಯುವಜನ ಖಾತೆಯೇ ನಡೆಸಿದ ಯುವಜನೋತ್ಸವದಲ್ಲಿ ಬಹುಮಾನಿತನಾದ. ಕೇಂದ್ರ ಮತ್ತು ರಾಜ್ಯಸರ್ಕಾರಗಳು ನಡೆಸಿದ ಅನೇಕ ಪ್ರಬಂಧ ಸ್ಪರ್ಧೆಗಳ ವಿಜೇತ ರಾಜ್ಯದ ಎಲ್ಲ ಕಡೆಗಳಲ್ಲಿ ನಡೆದ ಚರ್ಚಾಸ್ಪರ್ಧೆಗಳಲ್ಲಿ ಮೊದಲ ಸ್ಥಾನ ಪಡೆಯುತ್ತಿರುವ ಅನೇಕ ನಿಜವಾದ ಯುವಜನ ಸಂಸ್ಥೆಗಳ ಕಾರ್ಯಕರ್ತ, ಪಠ್ಯೇತರ ಚಟುವಟಿಕೆಗಳಲ್ಲಿ ಅತ್ಯಂತ ಪ್ರಭಾವಶಾಲಿ ಎಂದು ಪರಿಗಣಿತನಾದ ಅವನು ಮತ್ತು ಇತರ ಅನೇಕ ಇಂಥ ಚಟುವಟಿಕೆಗಳಲ್ಲಿ ವಿಜೇತರಾದ ಯುವಕರಿಗೆ ಅನ್ಯಾಯವಾಗಿದೆ ಎಂದು ಹೇಳಿದೆ. ಆಗ ಮುಖ್ಯಮಂತ್ರಿಗಳು ನಿಮ್ಮ ಮಗನದ್ದು ಮೊದಲೇ ಹೇಳಿದ್ದರೆ ಸೇರಿಸಬಹುದಾಗಿತ್ತು ಎಂದರು. ನಾನು ನನ್ನ ವೈಯಕ್ತಿಕಕ್ಕೆ ಎಂದೂ ಏನೂ ಕೇಳಿಲ್ಲ, ಕೇಳುವುದೂ ಇಲ್ಲ, ಹಾಗೆ ಬೆಗ್ ಮಾಡಿದ್ದರೆ ಎಂದೋ ಮಂತ್ರಿಯಾಗುತ್ತಿದ್ದೆ, ನನ್ನ ಮಗ ಎಕ್ಸ್‌ಪೋ: ನೋಡುವುದಾದರೆ ಸಾಲ ಮಾಡಿ ಅವನನ್ನು ಕಳಿಸುತ್ತೇನೆ, ಆದರೆ ಅರ್ಹತೆ ಇದ್ದೂ ಅನ್ಯಾಯವಾಗಿರುವುದರಿಂದ ಹೇಳುತ್ತಿದ್ದೇನೆ. ಈ ಬಗ್ಗೆ ಪುನರ್ವಿಮರ್ಶೆ ಮಾಡುವುದು ಒಳ್ಳೆಯದು ಎಂದು ಹೇಳಿದೆ.

ಛೇರ್‌ಮನ್ :— ಅದು ಮುಗಿದುಹೋದ ಪ್ರಕರಣ, ಅದನ್ನು ಬಿಟ್ಟು ಬೇರೆ ವಿಷಯದ ಬಗ್ಗೆ ಮಾತನಾಡಿ.

ಶ್ರೀಮತಿ ನಾಗರತ್ನಮ್ಮ ಹಿರೇಮಠ :—ನನಗೆ ಕಂಡಿದ್ದು ಮತ್ತು ಗೊತ್ತಿದ್ದನ್ನು ಹೇಳಲೇಬೇಕು, ಹೇಳುತ್ತೇನೆ. ನಾನು ಮುಖ್ಯಮಂತ್ರಿಗಳಿಗೆ ತಿಳಿಸಿದ ಮೂರು ದಿವಸಗಳ ನಂತರವೂ ಸರ್ಕಾರ ಈ ಬಗ್ಗೆ ಏನೂ ಮಾಡದಿದ್ದುದರಿಂದ ನನ್ನ ಮಗ ಮತ್ತು ಅವನ ಸ್ನೇಹಿತ ಈ ಅನ್ಯಾಯದ ವಿರುದ್ಧ ಸಾರ್ವಜನಿಕ ಗಮನ ಸೆಳೆಯಲು ಒಂದು ಪತ್ರಿಕಾ ಹೇಳಿಕೆ ನೀಡಿ ಈ ಬಗ್ಗೆ ಸರ್ಕಾರ ತಾರತಮ್ಯ ಮಾಡಿದೆಯೆಂದೂ, ಅನ್ಯಾಯ ಸರಿಪಡಿಸದಿದ್ದರೆ ವಿದ್ಯಾರ್ಥಿಗಳು ಚಳುವಳಿ ನಡೆಸಬಹುದೆಂದೂ ಹೇಳಿದರು. ಅನಂತರ ಹಲವು ರಾಜಕೀಯ ಮುಖಂಡರು, ವಿದ್ಯಾರ್ಥಿ ಯುವಜನ ವಿಭಾಗಗಳು ಈ ಬಗ್ಗೆ ಹೇಳಿಕೆ ನೀಡಿದರು. ಆದರೆ ಮುಖ್ಯಮಂತ್ರಿಗಳು ನಾವು ಏನೂ ಮಾಡಿಲ್ಲ, ನಾವು ನಿಯೋಗವನ್ನು ಕಳಿಸಿಯೇ ಕಳಿಸುತ್ತೇವೆ, ಚಳುವಳಿ ಮಾಡಿಕೊಳ್ಳಲಿ ಬಿಡಿ ಎಂದದ್ದು ವಿದ್ಯಾರ್ಥಿಗಳನ್ನು ಕೆರಳಿಸಿತು. ಬಹುಶಃ ಪರಿಸ್ಥಿತಿಯ ತೀವ್ರತೆಯ ಅರಿವು ಅವರಿಗಾಗಿರಲಿಕ್ಕಿಲ್ಲ. ಅನಂತರ ಅದು ತೀವ್ರರೂಪ ತಳೆದು ವಿದ್ಯಾರ್ಥಿಗಳು ಮುಖ್ಯಮಂತ್ರಿಗಳನ್ನು ಭೇಟಿ ಮಾಡಿದಾಗ "I have committed a great blunder, forgive me" ಎಂದು ಹೇಳಿದರಂತೆ. ಇದರಿಂದ ವಿದ್ಯಾರ್ಥಿಗಳಿಗೆ ಸರ್ಕಾರ ತಮ್ಮ ನ್ಯಾಯಪೂರ್ಣ ಬೇಡಿಕೆಗೆ ಗಮನ ಕೊಡುವುದಿಲ್ಲ, ತಮ್ಮ ಬಲಪ್ರದರ್ಶನ ಮಾಡಿದಾಗ ಮಾತ್ರ ಬಗ್ಗುತ್ತಾರೆ ಎಂಬುದು ಸ್ಪಷ್ಟವಾಯಿತು. ಸ್ವಾಭಾವಿಕವಾಗಿ ಇಲ್ಲಿ ವಿದ್ಯಾರ್ಥಿಗಳು ದಾರಿ ತಪ್ಪಲು ಯಾರು ಕಾರಣ ಎಂಬುದನ್ನು ನಿಮ್ಮ ವಿವೇಚನೆಗೆ ಬಿಡುತ್ತೇನೆ. ನನಗೆ ತಿಳಿದುಬಂದಂತೆ ಮೊಟ್ಟಮೊದಲು ಇವರು ಕಳಿಸಬೇಕೆಂದಿದ್ದ ಪಟ್ಟಿಯಲ್ಲಿ ಮುಖ್ಯಚಿಸವರ ಪುತ್ರ-ಪುತ್ರಿ, ಇನ್ನೊಬ್ಬ ಸಚಿವರ ಪುತ್ರ, ಮತ್ತೊಬ್ಬ ಸಚಿವರ ಹತ್ತಿರದ ಸಂಬಂಧಿ, ಒಬ್ಬ ಉಪಸಚಿವರ ಪುತ್ರಿ, ಮತ್ತೊಬ್ಬರು ಉಪಸಚಿವೆಯರ ಪುತ್ರ ಹೀಗೆ ಹೆಚ್ಚು ಕಡಿಮೆ ರಾಜ್ಯದ ಮಂತ್ರಿಗಳ ಸಂಬಂಧಿಗಳಿದ್ದರೆಂದು ತಿಳಿದಿತ್ತು. ಈ ಬಗ್ಗೆ ಮುಖ್ಯಮಂತ್ರಿಗಳು, ಮಂತ್ರಿಗಳ ಮಕ್ಕಳು, ಅಧಿಕಾರಿಗಳ ಮಕ್ಕಳಾದ ಮಾತ್ರಕ್ಕೆ ಅವರು ಎಕ್ಸ್‌ಪೋಗೆ ಹೋಗಬಾರದೇ ಎಂದು ಕೇಳಿದ್ದರು. ಅಧಿಕಾರಿಗಳಿಗೆ ಮತ್ತು ಮಂತ್ರಿಗಳಿಗೆ ಬಡತನ ಇದೆಯೇ ಎಂದು ಕೇಳುತ್ತೇನೆ. ಬಡವರ ಮಕ್ಕಳನ್ನು ರೈತರ ಮಕ್ಕಳನ್ನು ಏತಕ್ಕೆ ಕಳಿಸಲಿಲ್ಲವೆಂದು ಕೇಳುತ್ತೇನೆ. ಅಧಿಕಾರ ಇದೆಯೆಂದುಕೊಂಡು ಅಧಿಕಾರವನ್ನು ದುರುಪಯೋಗ ಮಾಡಿಕೊಳ್ಳುವುದು ಸರಿಯಲ್ಲ. ಹಿಂದೆ ಮೈಸೂರು ಮಹಾರಾಜರು ಸರ್. ಎಂ. ವಿಶ್ವೇಶ್ವರಯ್ಯನವರನ್ನು ದಿವಾನರನ್ನಾಗಿ ನೇಮಕ ಮಾಡುವ ಮೊದಲು ಸರ್.ಎಂ.ವಿಶ್ವೇಶ್ವರಯ್ಯನವರು ತಮ್ಮ, ತಾಯಿ ಮತ್ತು ತಮ್ಮನಿಂದ ತಮ್ಮ ಸಂಬಂಧಿಗಳ್ಯಾರನ್ನೂ ಸರ್ಕಾರಿ ಹುದ್ದೆಗೆ ಶಿಫಾರಸ್ಸು ಮಾಡಬಾರದೆಂದು ಹೇಳಿ ಆ ಬಗ್ಗೆ ಅವರಿಂದ ಭರವಸೆ ಪಡೆದು ನಂತರ ದಿವಾನರಾದರಂತೆ. ಮಾತುಮಾತಿಗೂ ಇವರ ಹೆಸರನ್ನು ಹೇಳುವ ಈ ಮಂತ್ರಿಗಳು ಅವರ ನೀತಿಯನ್ನು ಸಹ ಅನುಸರಿಸಬೇಕು.

ಶ್ರೀ ವಿ. ಎಲ್. ಶಿವಪ್ಪ:— ಇವರು ಇನ್ನು ೭ ಜನ್ಮ ಎತ್ತಿದರೂ ಕೂಡ ಅವರ ನೀತಿಯನ್ನು ಅನುಸರಿಸುವುದಕ್ಕೆ ಆಗುವುದಿಲ್ಲ.

ಶ್ರೀಮತಿ ನಾಗರತ್ನಮ್ಮ ಹಿರೇಮಠ:— ಈ ಪ್ರಸಂಗದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಆಗಾಗ್ಗೆ ಕೊಟ್ಟಂತಹ ಹೇಳಿಕೆಗಳಿಂದ ನನಗೆ ಬಹಳ ವ್ಯಥೆಯಾಗಿದೆ. ವಿದ್ಯಾಭ್ಯಾಸಕ್ಕಾಗಿ ೪೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡುವಾಗ ಇದಕ್ಕೆ ೬ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದರಲ್ಲಿ ಯಾವ ಅನ್ಯಾಯವೂ ಇಲ್ಲ ಎಂದು ಮುಖ್ಯಮಂತ್ರಿಗಳು ಹೇಳಿದರು ನಮ್ಮ ಮಕ್ಕಳು ಉತ್ತಮ ಪ್ರಜೆಗಳಾಗಲು ವಿದ್ಯಾಭ್ಯಾಸಕ್ಕಾಗಿ ೪೦ ಕೋಟಿಗೆ ಬದಲು ೮೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದರೂ ಸಾಲದು. ಆದರೆ ಇದಕ್ಕೂ ಎಕ್ಸ್‌ಪೋಗೆ ಖರ್ಚು ಮಾಡಿದ್ದಕ್ಕೂ ಹೋಲಿಕೆ ಮಾಡುವುದು ಸರಿಯಲ್ಲವೆಂದು ಹೇಳುತ್ತೇನೆ. ರಾಜ್ಯಪಾಲರೂ ಕೂಡ ಬಹಿರಂಗವಾಗಿ ಆಯ್ಕೆಯಲ್ಲಿ ಅನ್ಯಾಯವಾಗಿದೆ ಎಂಬುದನ್ನು ಒಪ್ಪಿಕೊಂಡಿದ್ದಾರೆ. ಇಂತಹ ಅನ್ಯಾಯಗಳನ್ನು ನೀವು ಮಾಡುತ್ತಿದ್ದರೆ ನಿಮ್ಮನ್ನು ಆರಿಸಿ ಕಳಿಸಿದ ಜನತೆಗೆ ನೀವೇ ದ್ರೋಹ ಮಾಡಿದಂತಾಗುತ್ತದೆ. ನಿಮ್ಮ ಆತ್ಮ ವಂಚನೆ ಮಾಡಿಕೊಂಡಂತಾಗುತ್ತದೆ. ಆದ್ದರಿಂದ ತಪ್ಪನ್ನು ತಪ್ಪು ಎಂದು ಹೇಳಿ. ಅದರಿಂದ ನಿಮಗೇನೂ ಆಗುವುದಿಲ್ಲ. ಜನರ ಅಭಿಮಾನವಿದ್ದರೆ ಯಾವ ಪದವಿಯೂ ಬೇಡ, ಯಾರ ಸೀಟೂ ಬೇಡ, ಜನವೇ ನಿಮ್ಮನ್ನು ಹರಸಿ ಕಳಿಸುತ್ತಾರೆ. ಇಲ್ಲಿ ನೀವು ಮಾಡಿದ್ದನ್ನೆಲ್ಲಾ ನಾವು ಮೂಕರಂತೆ ನೋಡಿಕೊಂಡಿರುವುದಕ್ಕೆ ಮತ್ತು ಕೈಯೆತ್ತುವುದಕ್ಕೆ ನಾವು ಇಲ್ಲ. ಆದ್ದರಿಂದ ಇನ್ನುಮುಂದೆ ಈ ರೀತಿಯ ತಪ್ಪುಗಳಾಗದಂತೆ ಸರ್ಕಾರದವರು ನೋಡಿಕೊಳ್ಳುವುದು ಒಳ್ಳೆಯದು ಎಂದು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಹೆಚ್. ಎನ್. ನಂಜೇಗೌಡ (ಅರಕಲಗೂಡು):—ಮಾನ್ಯ ಅಧ್ಯಕ್ಷರೇ, ಈ ಸಪ್ಲಮೆಂಟರಿ ಡಿಮ್ಯಾಂಡುಗಳ ಬಗ್ಗೆ ನಡೆಯುತ್ತಿರುವ ಚರ್ಚೆಯಲ್ಲಿ ಭಾಗವಹಿಸುತ್ತಾ ನಾನು ಕೆಲವು ವಿಷಯಗಳನ್ನು ಇಲ್ಲಿ ಹೇಳಬೇಕಾಗಿದೆ. ಡಿಮ್ಯಾಂಡು ೩೦ ರಲ್ಲಿ ಕಬಿನಿ ಹಾಗು ಕಾವೇರಿ ನದಿ ಯೋಜನೆಗಳಿಗಾಗಿ ಒಂದೊಂದು ಡಿವಿಜನ್‌ಗಳನ್ನು ಮಾಡಬೇಕೆಂದು ಇದ್ದರು. ಇದರ ಜೊತೆಗೆ ಇಲ್ಲಿ ಪುನ: ಇನ್ನೊಂದು ಡಿವಿಜನ್ ತೆಗೆಯಬೇಕೆಂದು ಮಾಡಿರುವುದು ತುಂಬಾ ಸಂತೋಷ. ಈಗ ಇರತಕ್ಕ ಸಮಸ್ಯೆಯನ್ನು ಅರ್ಥ ಮಾಡಿಕೊಂಡರೆ ನಾವು ಯಾವ ವೇಗದಿಂದ ಈಗ ಇರುವ ನೀರಾವರಿ ಯೋಜನೆಗಳನ್ನು ಮುಗಿಸಬೇಕು ಎಂದು ಇದ್ದೇವೆಯೋ ಅದಕ್ಕೆ ಬಹುಶ: ಸರಕಾರ ಇನ್ನೂ ಮೂರು ನಾಲ್ಕು ಡಿವಿಜನ್‌ಗಳನ್ನು ಆದರೂ ಕಾವೇರಿ ಬೇಸಿನ್ ನಲ್ಲಿ ತೆಗೆಯಬೇಕು. ಹಾಗೆ ತೆಗೆದು ನಮ್ಮ ಸಂಸ್ಥಾನದಲ್ಲಿ ಇನ್ನೂ ಹೆಚ್ಚು ನೀರಾವರಿಗೆ ಅವಕಾಶ ಮಾಡಿಕೊಡಬೇಕು. ಈಗ ನಾವು ನೋಡುತ್ತಿರುವಂತೆ ದಿನ ಬೆಳಗಾದರೆ ಯಾವುದಾದರೊಂದು ಸುದ್ದಿ ಬರುತ್ತಲೇ ಇದೆ. ಈಗ ವರದಿಯಾಗಿರುವ ಪ್ರಕಾರ ಗೋದಾವರಿ ಕೃಷ್ಣ ನದಿ ನೀರಿನ ವಿವಾದದಂತೆ ಕಾವೇರಿ ನದಿ ನೀರಿನ ವಿವಾದವನ್ನು ಟ್ರಿಬ್ಯುನಲ್‌ಗೆ ತೆಗೆದುಕೊಂಡು ಹೋಗುವಂತೆ ಕಾಣುತ್ತದೆ. ಇದರ ಬಗ್ಗೆ ಕೇಂದ್ರದವರು ಯಾವ ರೀತಿಯಾಗಿ ಹೋಗುತ್ತಾರೆನ್ನುವುದು ನಮಗೆ ಇನ್ನೂ ಗೊತ್ತಾಗಿಲ್ಲ. ಮದ್ರಾಸು ಸರಕಾರದ ಒತ್ತಾಯದಿಂದ ಕೇಂದ್ರದವರು ಮೈಸೂರಿನ ಹಿತಕ್ಕೆ ವಿರೋಧವಾಗಿ ಹೋಗಬಹುದು ಎಂದು ಕಾಣುತ್ತದೆ. ಹೇಗಾದರೂ ಸರಿ ಎಂದು ನಮ್ಮ ಮೈಸೂರು ಸರಕಾರದವರು ತಮ್ಮ ಸ್ವಂತ ಹಿತವನ್ನು ರಕ್ಷಣೆ ಮಾಡಿಕೊಳ್ಳಲು ಎಲ್ಲ ನೀರಾವರಿ ಕಾರ್ಯಗಳನ್ನೂ ಮಾಡಬೇಕೆಂದು ಮಾಡುತ್ತಿದ್ದಾರೆ. ಮದ್ರಾಸಿನವರು ಕೇಂದ್ರದಲ್ಲಿರುವ ಶ್ರೀ ಕೆ. ಎಲ್. ರಾಯರ ಮೇಲೆ ಒತ್ತಾಯ ತರುತ್ತಿದ್ದಾರೆ ಎಂದು ಕೇಳುತ್ತೇವೆ. ಮದ್ರಾಸಿನವರು ೧೯೨೪ರ ಅಗ್ರಿಮೆಂಟಿಗೆ ಒಪ್ಪಬೇಕೆಂದು ಹೇಳುತ್ತಿದ್ದಾರೆ. ಇದಕ್ಕೆ ಕೇಂದ್ರದವರ ಒಂದು ಬೆಂಬಲವೂ ಇದೆ ಎನ್ನುವಂತೆ ಕಾಣುತ್ತೆ. ಆದರೆ ನಮ್ಮ ಮೈಸೂರು ಸರಕಾರ ಅಗ್ರಿಮೆಂಟಿಗೇನೂ ಬದ್ಧವಾಗಿರಬೇಕಿಲ್ಲ ಎಂದು ಹೇಳುತ್ತಿದ್ದಾರೆ. ಆದರೆ ಮದ್ರಾಸಿನವರು ಆರಬಿಟ್ರೇಷನ್ ಕ್ಲಾಸ್ ಅಗ್ರಿಮೆಂಟಿನೊಳಗೇ ಬರುತ್ತದೆ. ಇದು ಬಹು ಮುಖ್ಯ ಇದರಿಂದ ಯಾವ ನೀರಾವರಿ ಯೋಜನೆಗಳನ್ನು ಮಾಡಕೂಡದು ಎಂದು ಹೇಳುತ್ತಿದ್ದಾರೆ. ನನಗೆ ತಿಳಿದಂತೆ ಈ ಅಗ್ರಿಮೆಂಟು ವ್ಯಾಪ್ತಿಯಲ್ಲಿ ಇದು ಬರುವುದಿಲ್ಲ ಎಂದು ಅರ್ಥವಾಗುತ್ತೆ. ಈಗಾಗಲೇ ನಮ್ಮ ಸರಕಾರದವರು ಕೆಲವು ನೀರಾವರಿ ಯೋಜನೆಗಳನ್ನು ಈ ಕಾವೇರಿ ನದಿ ಬೇಸಿನ್‌ನೊಳಗೆ ಮಾಡಬೇಕೆಂದು ಕೇಂದ್ರಸರ್ಕಾರದವರಿಗೆ ಕಳುಹಿಸಿ ಬಹಳ ವರ್ಷಗಳಾದರೂ ಇನ್ನೂ ಅವಕ್ಕೆ ಟೆಕ್ನಿಕಲ್ ಕ್ಲಿಯರೆನ್ಸ್‌ನ್ನು ಕೊಟ್ಟಿಲ್ಲ. ಮದ್ರಾಸು ಸರಕಾರ ಮೇಲಿಂದ ಮೇಲೆ ಇದರ ಬಗ್ಗೆ ಒತ್ತಾಯ ತರುತ್ತಿರುವಂತೆ ಕಾಣುತ್ತದೆ. ಇದರಿಂದಾಗಿ ಇನ್ನೂ ಕೇಂದ್ರ ಸರಕಾರದವರು ಕ್ಲಿಯರೆನ್ಸ್ ಕೊಟ್ಟಿಲ್ಲ. ಇದಕ್ಕೆ ಇನ್ನು ಏನಾದರೂ ಕಾರಣ ಇದೆಯೋ ಎಂದು ಹುಡುಕುವುದಾದರೆ ಬಹುಶ: ಶ್ರೀ ಕೆ. ಎಲ್. ರಾವ್ ರವರು ಈ ಖಾತೆಯಲ್ಲಿರುವುದೇ ಇದಕ್ಕೆ ಕಾರಣ ಎಂದು ನನಗೆ ಭಾಸವಾಗುತ್ತದೆ. ಇಂದು ನಮ್ಮ ದೇಶದಲ್ಲಿ ಮೂರು ಜನ ಪ್ರಧಾನ ಮಂತ್ರಿಗಳಾದರು. ಆದರೆ ನಮ್ಮ ಕೆ. ಎಲ್. ರಾಯರ ಇಲಾಖೆ ಮಾತ್ರ ಅವರಿಂದ ಬದಲಾವಣೆಯೇ ಆಗಲಿಲ್ಲ. ಇನ್ನೂ ನೀರಾವರಿ

ಖಾತೆಯಲ್ಲೇ ಅವರ ಅಧಿಕಾರ ಇದೆ. ಮೈಸೂರು ಮಹಾರಾಷ್ಟ್ರದ ಗಡೀ ಸಮಸ್ಯೆ ಬಂದಿರುವುದರಿಂದ ಮಹಾರಾಷ್ಟ್ರಕ್ಕೆ ಸೇರಿದ ಮಂತ್ರಿಗಳು ಆ ಖಾತೆಯಲ್ಲಿದ್ದರೆ, ಅವರ ಪ್ರಭಾವ ಬೀರಬಹುದೆಂಬ ಅನುಮಾನ ಬರಬಹುದು ಎನ್ನುವ ಕಾರಣಕ್ಕಾಗಿ ಪ್ರಧಾನ ಮಂತ್ರಿಗಳು ಮಹಾರಾಷ್ಟ್ರಕ್ಕೆ ಸೇರಿದ ಶ್ರೀ ಚವಾಣ ರವರನ್ನು ಹಿಂದೆ ಇದ್ದ ಖಾತೆಯಿಂದ ಬೇರೆ ಖಾತೆಗೆ ಬದಲಾವಣೆ ಮಾಡಿದರು. ಅದೇ ರೀತಿ ಶ್ರೀ ಎಲ್. ಕೆ. ರಾಯರವರನ್ನು ಬದಲಾವಣೆ ಮಾಡಬೇಕಾಗಿತ್ತು. ಬದಲಾವಣೆ ಮಾಡುವುದು ಅವಶ್ಯವಾಗಿತ್ತು. ಅವರನ್ನು ಬದಲಾವಣೆ ಮಾಡದೇ ಇರುವುದರಿಂದಲೇ ಇಲ್ಲಿಯವರೆಗೂ ಕೃಷ್ಣ ನದಿ ವಿವಾದವಾಗಲೀ, ಇನ್ನಿತರ ನೀರಿನ ವಿವಾದಗಳೇ ಆಗಲೀ ಇದುವರೆವಿಗೂ ಬಗೆಹರಿಯದೇ ಹಾಗೇ ಇದೆ. ನಮ್ಮ ಸರಕಾರದವರು ಕೇಂದ್ರದಲ್ಲಿ ಏನೇ ಒತ್ತಾಯ ತರಲಿ ಇದುವರೆವಿಗೂ ಅವರೇ ಇಂಟೆರೆಸ್ಟೆಡ್ ಪಾರ್ಟಿ ಆಗಿರುವಾಗ ಅವರ ಮೇಲೆ ಏಕೆ ತಕ್ಕ ಕ್ರಮ ತೆಗೆದುಕೊಳ್ಳಲಿಲ್ಲ ಎಂದು ಇಲ್ಲಿ ಕೇಳಲು ಅಪೇಕ್ಷೆಪಡುತ್ತೇನೆ. ಪ್ರಧಾನಿಯವರು ಹಿಂದೆ ಶ್ರೀ ಚವಾಣರವರ ಮೇಲೆ ಇದೇ ರೀತಿಯ ಅನುಮಾನ ಬಂದುದರಿಂದ ಅವರನ್ನು ಗೃಹ ಖಾತೆಯಿಂದ ತೆಗೆದು ಬೇರೆ ಖಾತೆಗೆ ವರ್ಗಮಾಡಿರುತ್ತಾರೆ. ಆದರೆ ಅದೇ ನೀತಿಯನ್ನು ಶ್ರೀ ಕೆ. ಎಲ್. ರಾಯರ ಬಗ್ಗೆ ಏಕೆ ಅನುಸರಿಸಲಿಲ್ಲ ಎಂದು ಕೇಳಬೇಕಾಗಿದೆ. ಇದರಿಂದ ರಾಜ್ಯ ಸರಕಾರಗಳಿಗೆ ಕೇಂದ್ರ ಸರಕಾರದಲ್ಲಿ ನಂಬಿಕೆ ಬರುಬರುತ್ತಾ ಕಡಿಮೆಯಾಗುತ್ತಿದೆ. ಆದುದರಿಂದ ಶ್ರೀ ಕೆ. ಎಲ್. ರಾಯರವರನ್ನು ನೀರಾವರಿ ಖಾತೆಯಿಂದ ನಿವೃತ್ತಿ ಮಾಡಲು ತಕ್ಕ ಕ್ರಮ ಕೈಗೊಳ್ಳಬೇಕೆಂದು ಇಲ್ಲಿ ನಾನು ಒತ್ತಾಯ ಮಾಡುತ್ತೇನೆ ಅಲ್ಲಿ ಶ್ರೀ ಕೆ.ಎಲ್. ರಾವ್ ಇದ್ದರೆ ಅವರಿಂದ ನಮಗೆ ನ್ಯಾಯ ದೊರಕುವುದಿಲ್ಲಎನ್ನುವ ಅನುಮಾನ ನಮಗೆ ಉತ್ಪನ್ನವಾಗಿದೆ. ಅದಕ್ಕಾಗಿ ನಾನು ನಮ್ಮ ಪಕ್ಷದ ಮುಖಂಡರುಗಳಾದ ಶ್ರೀ ದೇವರಾಜ ಅರಸ್‌ರವರಿಗೆ ಹಾಗೂ ಶ್ರೀ ಸಿದ್ದವೀರಪ್ಪನವರಿಗೆ ಕೂಡ ಹೇಳುತ್ತಿದ್ದೇನೆ. ಅವರು ಕೇಂದ್ರದ ಮೇಲೆ ಒತ್ತಾಯ ತಂದು ಶ್ರೀ ಕೆ. ಎಲ್. ರಾಯರನ್ನು ಬದಲಾವಣೆ ಮಾಡಲು ಕ್ರಮತೆಗೆದುಕೊಳ್ಳಬೇಕೆಂದು ಇಲ್ಲಿ ಸೂಚನೆ ಮಾಡುತ್ತಿದ್ದೇನೆ. ಇದನ್ನು ಟ್ರಿಬ್ಯುನಲ್‌ಗೆ ಕಳುಹಿಸಬೇಕು ಎನ್ನುವುದರ ಬಗ್ಗೆ ಒಂದು ಮಾತನ್ನು ಹೇಳಬೇಕಾಗಿದೆ. ಇದರಲ್ಲೇನೂ ಅಂತಹ ಸಮಸ್ಯೆ ಇಲ್ಲ. ಏತಕ್ಕಾಗಿ ಟ್ರಿಬ್ಯುನಲ್‌ಗೆ ಹೋಗಬೇಕೆಂದು ಹೇಳುತ್ತಾರೋ ಅದು ನನಗೆ ಅರ್ಥವಾಗುತ್ತಿಲ್ಲ. ಮದ್ರಾಸಿಗೆ ನಮ್ಮ ರಾಜ್ಯದಿಂದ ಬರುವ ನೀರಿನ ಪಾಲನ್ನು ಕೇಳುವ ಪ್ರಶ್ನೆಯೇ ಇಲ್ಲ. ಸುಮ್ಮನೆ ಇದರಲ್ಲಿ ಮದ್ರಾಸಿಗೆ ಅನ್ಯಾಯವಾಗುತ್ತದೆ ಎನ್ನುವ ಒಂದು ಕುಂಟು ನೆಪ ಮಾಡಿಕೊಂಡು ಕೇಂದ್ರದವರು ಕೂಡ ಇದರ ಬಗ್ಗೆ ಸಾವಕಾಶದಿಂದ ಇದ್ದಾರೆ. ಇದೂ ಅಲ್ಲದೆ ಮದ್ರಾಸು ಸರಕಾರದವರು ಕೇಂದ್ರಕ್ಕೆ ಅನುಕೂಲವಾಗಿದ್ದಾರೆ. ಇದಕ್ಕಾಗಿ ಹೀಗೆ ಮಾಡುತ್ತಾರೆ ಎನ್ನುವ ಒಂದು ಅನುಮಾನವೂ ನಮಗೆ ಇಲ್ಲಿ ಬರುತ್ತಿದೆ. ಇದಕ್ಕಾಗಿ ನಮ್ಮ ಸರಕಾರದ ಮೇಲೆ ಏನಾದರೂ ದೋಷಾರೋಪಣೆ ಮಾಡಬೇಕೆಂದು ಈ ರೀತಿ ಮಾಡುತ್ತಿರುವಂತೆ ಕಾಣುತ್ತದೆ. ಎಲ್ಲಿಯವರೆಗೆ ಕೆ. ಎಲ್. ರಾಯರು ಈ ಖಾತೆಯಲ್ಲಿರುತ್ತಾರೋ ಅಲ್ಲಿಯವರೆಗೆ ನಮಗೆ ನ್ಯಾಯ ಸಿಗುವುದು ಕಷ್ಟ. ಈ ಖಾತೆಯಲ್ಲಿ ಅವರು ಇರಕೂಡದು. ಅಗ್ರಿಮೆಂಟ್‌ನಲ್ಲಿರುವ ರೂಲ್ಸ್ ಮತ್ತು ರೆಗ್ಯೂಲೇಷನ್ ಬಗ್ಗೆ ಒಂದು ವಿವಾದ ಎದ್ದಿದೆ. ಸಬ್ ಕ್ಲಾಸು ೧೫ ರಲ್ಲಿ ಏನು ಹೇಳುತಾರೆ ಎಂದರೆ:

If a dispute arises between Madras Government and Mysore Government regarding the interpreation or opearation or carrying out the provisions of the agreement, then the matter shall be referred to arbitration or if both parties agree to Government of India decision.

ಈ ರೀತಿ ಉಭಯ ಪಕ್ಷಗಳು ಸೇರಿ ಒಂದು ಒಪ್ಪಂದಕ್ಕೆ ಬರತಕ್ಕ ಕಾಲ ಮುಗಿದು ಎಷ್ಟೋ ದಿನಗಳಾದವು. ಆದರೆ ಆ ಅಗ್ರಿಮೆಂಟಿನಲ್ಲಿ ಏನೋ ಒಂದು ತೊಡಕಿದೆ ಅನ್ನತಕ್ಕ ಒಂದು ಅನುಮಾನವನ್ನು ಮನಸ್ಸಿನಲ್ಲಿಟ್ಟುಕೊಂಡು ನಮ್ಮ ಸರ್ಕಾರದವರು ನಾವೇನು ಮಾಡುವುದು ಅವರು ಟ್ರಿಬ್ಯುನಲ್ಲಿಗೆ ಹೋದರೆ ಎಂದು ಕೈಕಟ್ಟಿ ಕುಳಿತುಕೊಳ್ಳಬೇಕಾಗಿಲ್ಲ. ಅದಕ್ಕೆ ನಾವೇ ಮೊದಲು ಆರ್ಬಿಟ್ರೇಷನ್ನಿಗೆ ಹೋಗುವುದು ಉಚಿತವೆಂದು ನನಗೆ ಕಾಣುತ್ತಿದೆ. ಈ ದಿವಸ ಕೇಂದ್ರದವರೇ, ಶ್ರೀಮಾನ್ ಕೆ. ಎಲ್ ರಾವ್ ಅವರೇ ಮದ್ರಾಸಿನವರಿಗೆ ಟ್ರಿಬ್ಯುನಲ್ಲಿಗೆ ಹೋಗಲು ಪುಸಲಾಯಿಸುತ್ತಿದ್ದಾರೆಂದು ಕಾಣುತ್ತಿದೆ. ಅವರು ಹಾಗೆ ಮಾಡಿದರೆ ಅದು ಕಾನೂನು ಬಾಹಿರ ಆಗುತ್ತದೆ.

The tribunal cannot get jurisdiction when there is already a way out provided in the agreement itself

ಈ ಕಾರಣಗಳಿಂದ ಇದು ಕಾನೂನು ಬಾಹಿರವಾಗುವುದೊಂದೇ ಅಲ್ಲದೆ ಇದರಿಂದ ಮುಂದೆ ಇನ್ನೂ ಭೀಕರ ಪರಿಣಾಮಗಳಾಗಬಹುದು ಎಂದು ಸೂಚಿಸ ಬಯಸುತ್ತೇನೆ.

(ಶ್ರೀ ಎಚ್. ಎನ್. ನಂಜೇಗೌಡ)

ಆದರೆ ನಾವು ದಿನವಹಿ ಪತ್ರಿಕೆಗಳನ್ನು ಓದುತ್ತಿರುವುದರಲ್ಲಿ ನಮಗೆ ಗೊತ್ತಾಗುತ್ತಿರುವುದೇನೆಂದರೆ ನಮ್ಮ ಮುಖ್ಯ ಮಂತ್ರಿಗಳು ಮಾತ್ರ ಈ ವಿಚಾರದಲ್ಲಿ ಆಗಾಗ್ಗೆ ಒಂದೊಂದು ಹೇಳಿಕೆಯನ್ನು ಕೊಡುತ್ತಿದ್ದಾರೆ. ಆದರೆ ಅವರು ಅಷ್ಟನ್ನು ಮಾಡಿದರೆ ಸಾಲದು. ಅವರು ಈ ವಿಚಾರವನ್ನು ಟ್ರಿಬ್ಯುನಲ್ಲಿನ ಮುಂದೆ ತೆಗೆದುಕೊಂಡು ಹೋಗದರೆ ನಾವೇನು ಮಾಡುವುದು ಎಂದು ಇವರು ಸುಮ್ಮನೆ ಕೈಕಟ್ಟಿ ಕುಳಿತರೆಆಗುವುದಿಲ್ಲ. ಇಂಡಿಯನ್ ಆರ್ಬಿಟ್ರೇಷನ್ ಆಕ್ಟಿನ ಸೆಕ್ಷನ್ (೯) (ಬಿ)ನಲ್ಲಿ ಹೇಳಿರತಕ್ಕದ್ದರ ಅರ್ಥ ಏನೆಂದರೆ-ಮದ್ರಾಸಿನವರು ಒಪ್ಪಲಿ ಬಿಡಲಿ ನಮ್ಮ ಸರ್ಕಾರದವರು ಮೊದಲು ಆರ್ಬಿಟ್ರೇಟರನ್ನು ಅಪಾಯಿಂಟ್ ಮಾಡಬೇಕೆಂದು ಹಾಗೆ ಅಪಾಯಿಂಟ್ ಮಾಡಿಕೊಂಡ ಕೂಡಲೆ ಮದ್ರಾಸಿನವರಿಗೆ ಒಂದು ನೋಟೀಸನ್ನು ಮೈಸೂರು ಸರ್ಕಾರದವರುಕೊಟ್ಟರೆ ಸಾಕೆಂದು ಆದರಲ್ಲಿ ಹೇಳಿದೆ. ಆದ್ದರಿಂದ ನಾನೀ ಸಂದರ್ಭದಲ್ಲಿ ನಮ್ಮ ರಾಜ್ಯಸರ್ಕಾರದವರಲ್ಲಿ ಒತ್ತಾಯ ಮಾಡುವುದೇನೆಂದರೆ ಇವರು ಕೂಡಲೆ ಒಬ್ಬ ಆರ್ಬಿಟ್ರೇಟರನ್ನು ನೇಮಕ ಮಾಡಿ ಮದ್ರಾಸಿನ ಮುಖ್ಯ ಮಂತ್ರಿಗಳಿಗೆ ಒಂದು ನೋಟೀಸನ್ನು ಅಂದರೆ ಮದ್ರಾಸ್ ಸರ್ಕಾರಕ್ಕೆ ಒಂದು ನೋಟೀಸನ್ನು ಕಳುಹಿಸಬೇಕು ಎಂದು ಒತ್ತಾಯ ಮಾಡುತ್ತೇನೆ. ಆದರೆ ಮಾನ್ಯ ಮುಖ್ಯ ಮಂತ್ರಿಗಳು ಹೇಳುತ್ತಿರುವಂತೆ ನಾವು ಕೈಕಟ್ಟಿ ಕುಳಿತಿರುವಂಥ ಪರಿಸ್ಥಿಯೇನೂ ಬಂದಿಲ್ಲ. ನಾವು ಮೊದಲು ಆರ್ಬಿಟ್ರೇಟರನ್ನು ನೇಮಕ ಮಾಡಿದರೆ ಮುಂದೆ ಅವರೇನೂ ಮಾಡುವುದಕ್ಕಾಗುವುದಿಲ್ಲ. ಆದ್ದರಿದ ನಮಗೆ ಈಗ ಇರತಕ್ಕ ಅವಕಾಶವನ್ನು ನಮ್ಮ ಸರ್ಕಾರದವರು ಕೈಬಿಡದೆ ಇದನ್ನು ಉಪಯೋಗಿಸಿಕೊಳ್ಳಬೇಕೆಂದು ಹೇಳುತ್ತೇನೆ. ಇಲ್ಲವಾದರೆ ನಾಳೆ ನಮ್ಮ ಸರ್ಕಾರ ಹೆಚ್ಚಿನ ಒಂದು ಹೊಣೆಗಾರಿಕೆಗೆ ಜವಾಬ್ದಾರಿಗೆ ಗುರಿಯಾಗಬೇಕಾಗುತ್ತದೆ. ಈ ವಿಚಾರದಲ್ಲಿ ನಮ್ಮ ಲಾ ಸೆಕ್ರೇಟರಿಗಳನ್ನು ಕೇಳಿದರೆ ನನಗೆ ಇದರ ವಿಚಾರ ಗೊತ್ತಿಲ್ಲ ಎನ್ನುತ್ತಾರೆ. ಅತ್ತ ಅಡ್ವಕೇಟ್ ಜನರಲ್ಲರನ್ನು ಕೇಳಿದರೆ ಅವರೂ ಹೀಗೆ ಹೇಳುತ್ತಾರೆ. ಹೀಗೆ ಇನು ಯಾರಿಗೂ ಬೇಡದ ಒಂದು ಕೂಸಾಗಿದೆ. ಏನೋ ವಲ್ಲದ ಗಂಡನಿಗೆ ಮೊಸರನ್ನದಲ್ಲಿ ಕಲ್ಲುಸಿಕ್ಕಿತೆಂದ ಹಾಗೆ ಆಗಿದೆ ಇದರ ಬದುಕು.

(Mr. SPEAKER—in the chair.)

ಶ್ರೀ ಪಿ. ವಿ. ಐತಾಳ್ (ಸುರತ್ಕಲ್).—ಸ್ವಾಮಿ ಅಧ್ಯಕ್ಷರೇ, ನಮ್ಮ ಮುಂದೆ ಇರತಕ್ಕ ಡಿಮ್ಯಾಂಡ್‌ನಲ್ಲಿ ೨೭ರಲ್ಲಿ ೧೫ ಲಕ್ಷ೭೦ ಸಾವಿರ ರೂಪಾಯಿಗಳನ್ನು ಖರ್ಚುಮಾಡುವ ಒಂದು ಯೋಜನೆಯನ್ನು ಅಳವಡಿಸಿದ್ದಾರೆ. ಇಲ್ಲಿ ಈ ಹಣವನ್ನು ಖರ್ಚುಮಾಡುವುದು ಹಾಗಿರಲಿ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಿಜಲಿಂಗಪ್ಪನವರ ಚೇಲನಾದ ರಾಮಣ್ಣ ಸೆಟ್ಟಿ ಎನ್ನತಕ್ಕವರಿಗೆ ಬಹಳ ಬೆಲೆಬಾಳತಕ್ಕ ಭೂಮಿಯನ್ನು ಕೊಟ್ಟು ನಮ್ಮ ಮುಖ್ಯ ಮಂತ್ರಿಗಳು ಅಂದರೆ ಶ್ರೀ ವೀರೇಂದ್ರ ಪಾಟೀಲರು ಅಪಾರ ಹಣವನ್ನು ಲಂಚದ ರೂಪದಲ್ಲಿ ತೆಗೆದುಕೊಂಡಿದ್ದಾರೆಂದು ಅಲ್ಲಿ ಜನರಾಡಿಕೊಳ್ಳುತ್ತಿದ್ದಾರೆ. ರಾಮಣ್ಣ ಸೆಟ್ಟಿಯು ಅರುಣಾ ಡೈರಿಗೆ ೨೯೯ ಎಕರೆ ಭೂಮಿಯನ್ನು ಕೊಟ್ಟಿದ್ದಾರೆ. ಮತ್ತು ಮಂಗಳೂರು ಹಾರ್ಬರಿಗೆ ೯ ಮೈಲಿ ದೂರದಲ್ಲಿ ಶ್ರೀಮತಿ ಲೀಲಾವತಿ ರೈ ಅವರಿಗೆ ೧೫೩ ಎಕರೆ ಭೂಮಿಯನ್ನು ಒಂದುಕಡೆಯಲ್ಲೂ ಮತ್ತು ಅವರಿಗೆ ಅವರ ಕ್ಷೇತ್ರಕ್ಕೆ ೭ ಮೈಲು ದೂರದಲ್ಲಿ ೧೪೬ ಎಕರೆ ಭೂಮಿಯನ್ನು ಕೊಟ್ಟಿದ್ದಾರೆ. ಈ ಸಂಬಂಧದಲ್ಲಿ ಮುಖ್ಯ ಮಂತ್ರಿಗಳು ಲಂಚವನ್ನು ತೆಗೆದುಕೊಂಡಿದ್ದಾರೆಂದು ಜನರಾಡಿಕೊಳ್ಳುತ್ತಿದ್ದಾರೆ.

ಶ್ರೀಮತಿ ಲೀಲಾವತಿ ರೈ:—ಅಧ್ಯಕ್ಷರೆ, ನನ್ನದೊಂದು ಕ್ರಿಯಾಲೋಪ ಹೇಳುವುದಿದೆ. ಮಾನ್ಯ ಸದಸ್ಯರು ಶ್ರೀ ವಿರೇಂದ್ರಪಾಟೀಲರು ಲಂಚ ತೆಗೆದುಕೊಂಡು ಭೂಮಿಯನ್ನು ಕೊಟ್ಟಿದ್ದಾರೆಂದು ಹೇಳಿದರು.

ಶ್ರೀ ಪಿ. ವಿ. ಐತಾಳ್:—ನಾನು ಅವರ ಹೆಸರನ್ನು ಹೇಳಲಿಲ್ಲ. ಜನರು ಹಾಗೆ ಆಡಿಕೊಳ್ಳುತ್ತಿದ್ದಾರೆ ಎಂದು ಹೇಳಿದೆ

ಅಧ್ಯಕ್ಷರು:—ಮಾನ್ಯ ಸದಸ್ಯರು ಸಭೆಯಲ್ಲಿಲ್ಲದ ಸದಸ್ಯರ ಹೆಸರನ್ನು ಹೇಳಬಾರದು ಎಂದಿದೆ.

ಶ್ರೀಮತಿ ಲೀಲಾವತಿ ರೈ:—ಅವರು ಭೂಮಿಯನ್ನು ಕೊಟ್ಟಿದ್ದು ಹೌದು. ಆದರೆ ಅವರ ಲಂಚವನ್ನು ತೆಗೆದುಕೊಂಡಿಲ್ಲ. ಆದ್ದರಿಂದ ಜನರು ಹಾಗೆ ಆಡಿಕೊಳ್ಳುತ್ತಿದ್ದಾರೆಂದೂ ಹೇಳುವುದು ಕೂಡ ಸರಿಯಲ್ಲ ಎಂದು ಹೇಳುತ್ತೇನೆ.

ಅಧ್ಯಕ್ಷರು:—ಅದು ಪಾಯಿಂಟ್ ಆಫ್ ಆರ್ಡರ್ ಆಗುವುದಿಲ್ಲ.

SRI K. H. RANGANATH:—There is another point which I would like to bring to the notice of the Hon.ble Speaker. Whenever members make certain allegations, it has been pointed out by the Chair frequently that names should not be brought in here. Why should not names be mentioned? I would like to submit that if there is an allegation against some persons, Government is there to refute it. I do not understand why members are precluded from mentioning names when praticular pe rsons are being given lands? Why should we not mention names we if know about them.

6-00 P.M.

MR. SPEAKER:—The rule says that no allegation of a defamatory or incriminatory nature shall be made against any person.

SRI. D. DEVARAJ URS.—It is a fact that Government has given lands. Supposing I know that persons name , why should it not be mentioned? What is defamation Defamation will come is I am saying a thing which is not true. Let the Government say what a member is saying is not true.

ಅಧ್ಯಕ್ಷರು: ಹಾಗಲ್ಲ. ಯಾವ ಸದಸ್ಯರೂ ಡೆಫಮೇಟರಿ ಮತ್ತು ಇಂಕ್ರಿಮನೇಟರಿ ಹೇಳಿಕೆ ಮಾಡಬಾರದು.

ಶ್ರೀ ಪಿ. ವಿ. ಐತಾಳ.—ನಾನು ಹೇಳುವುದು ಎನೆಂದರೆ ನಮ್ಮ ಜಿಲ್ಲೆಯಲ್ಲಿ ಮನೆ ಮಾರುಗಳನ್ನು ಕಳೆದುಕೊಂಡಂಥಾವರು ವಸತಿ ಸೌಕರ್ಯ ಇಲ್ಲದೇ ಇರುವವರು ೨೦–೨೫ ಸೆಂಟು ಜಾಗ ಕೊಡಿ ಎಂದು ಎಷ್ಟು ಕೇಳಿದರೂ ಕಂದಾಯ ಮಂತ್ರಿಗಳು ಬಂದಾಗ ದಮ್ಮಯ್ಯ ಹಾಕಿದ್ದರೂ ಕೊಡಲಿಲ್ಲ. ಸಾವಿರಾರು ಎಕರೆ ಮೇಲ್ಪಟ್ಟು ಜಮೀನು ಹೊಂದಿರುವರಿಗೆ ಕೊಟ್ಟಿದ್ದಾರೆ. ಇತರರಿಗೆ Lan i is not available because it is within 20 milles from the Harbour project ಎಂದು ಹೇಳಿದ್ದಾರೆ. ಸಾವಿರಾರು ಅರ್ಜಿಗಳು ಉಂಟು. ನಮ್ಮಲ್ಲಿ ಮನೆಮಾರುಗಳನ್ನು ಕಳೆದುಕೊಂಡು ಕೇಳಿದರು ಅರ್ಧ–ಅರ್ಧ ಎಕರೆ ಕೊಡಿ ಎಂದು ಕೇಳಿದರೂ ಕೊಡುವುದಿಲ್ಲ .ಹೆಣ ಹುಗಿಯುವುದಕ್ಕೂ ೧೨ಅಡಿ ಕೊಡುವುದಿಲ್ಲ. ಆದರೆ ನಮ್ಮಲ್ಲಿ ಒಬ್ಬರು ರಾಮಣ್ಣಶೆಟ್ಟರು ಇದ್ದಾರೆ. ಅವರುಶ್ರೀಮಾನ್ ನಿಜಲಿಂಗಪ್ಪನವರ ಚೇಲ. ಅವರದ್ದು ಐಸ್‌ಕ್ರೀಮ್ ಫ್ಯಾಕ್ಟರಿಯನ್ನು ಉದ್ಘಾಟನೆ ಮಾಡಲಿಕ್ಕೆ ಶ್ರೀಮಾನ್ ನಿಜಲಿಂಗಪ್ಪನವರೂ ಮತ್ತು ಶ್ರೀಮಾನ್‌ನಾಗಪ್ಪ ಆಳ್ವರವರು ಇಬ್ಬರೂ ಬಂದಿದ್ದರು .ಆಗ ಶ್ರೀಮಾನ್ ನಿಜಲಿಂಗಪ್ಪನವರು ಹೇಳಿದರು ಅವರು ಮತ್ತು ರಾಮಣ್ಣ ಶೆಟ್ಟರು ಫ್ಯಾಮಿಲಿ ಫ್ರೆಂಡ್ ಇದ್ದ ಹಾಗೆ ಎಂದು. ಆ ಸಂದರ್ಭದಲ್ಲಿ ಶ್ರೀಮಾನ್ ನಾಗಪ್ಪ ಆಳ್ವ ರವರು ಹೇಳಿದರು ಚಾ ಚಾ ನೆಹರೂರವರಿಗೆ ಮಕ್ಕಳ ಮೇಲೆ ಪ್ರೀತಿ, ಮಕ್ಕಳಿಗೆ ಐಸ್‌ಕ್ರೀಂ ಮೇಲೆ ಪ್ರೀತಿ. ಅದಕ್ಕೋಸ್ಕರ ಐಸ್‌ಕ್ರೀಂ ಫ್ಯಾಕ್ಟರಿಗೆ ಪ್ರೋತ್ಸಾಹ ಕೊಡಬೇಕು ಎಂದು.

MR. SPEAKER:—How is it relevant.

SRI P. V. ITHAL:—The land which is near Mangalore costs lakhs of rupees in South Kanara. But these Ministers have given it to Sri Ramanna Shetty for a nominal price of Rs. 2. 15 per acre. Sri Nagappa Alva, President, Congress (O), put pressure for it. ಈಗ ನಿಜಲಿಂಗಪ್ಪನವರು ಕಾಂಗ್ರೆಸ್ ಅಧ್ಯಕ್ಷರಾಗಿದ್ದಾರೆ. ನಮಗೆ ಶ್ರೀ ಮಾನ್ ವೀರೇಂದ್ರ ಪಾಟೀಲರವರ ಮೇಲೆ ಸಂಶಯವಿಲ್ಲ, ಶ್ರೀಮಾನ್ ಕೌಜಲಗಿರಿಯವರ ಮೇಲೆ ಸಂಶಯವಿಲ್ಲ. ನಾವು ಅವರ ಮೇಲೆ ಏನಾದರೂ ಅಪಾದನೆ ಮಾಡುತ್ತೀವಾ? ಈ ಜಮೀನನ್ನು ಕೊಡುವುದಕ್ಕೆ ಶ್ರೀ ಮಾನ್ ನಿಜಲಿಂಗಪ್ಪನವರೇ ಕಾರಣರು. ಶ್ರೀ ನಿಜಲಿಂಪ್ಪನವರು ಹೇಳಿ ಕೊಡಿಸಿದ್ದಾರೆ.

Sri VEERENDRA PATIL (Chief Minister) :—Sir, the hon. Member may go ahead with his speech. I do not want to interrupt. But it is a well-established precedent and convention here in this House as also in all the Houses that we should not mention the names of th se who are no there to defend themselves.

(*Interruption*)

Sri VEERENDSA PATIL.—What is going on I cannot understand. I have not yet finished.

Sri K. H. PATIL:—An hon. Member today referred to the Hon Prime Minister and stated that she stated like this and that. How was he entitled to quote her, It is aginst rules Sri S. Nijalingappa is an Hon. Member of this House.

Sri VEERENDRA PATIL.—With your permission I am speaking. I do not object to anybody saying anything. If they want to speak anything after I complete my say, they are at liberty to do so. But I have not yet finished. What I was saying was that is a healthy convention and precedent accepted universally that we should not say anything against a person who is not here.

Sri D. DEVASAJA URS.—But is it a healthy convention not to observe rules and regulations while granting lands,

Sri VEERENDTA PATIL.—Hon. Friend Sri Devaraj Urs can have his say after I say something. That is why, I was saying that I have absolutey no intention at all to prevent my Hon. Friend to continue his speech. I want to point out happens if you allow mentioning names of those who are not here or who are not members of this House using defamatory langnages about those persons.

ಶ್ರೀ ಎಸ್. ಚನ್ನಯ್ಯ.—ನ್ಯಾಯ ಏನು ಹೇಳಬೇಕೋ ಅದನ್ನು ಹೇಳಲಿ. ಕೇಳುತ್ತೇವೆ.

Sri VEERENDRA PATIL.—I cannot understand these interuptions.

Mr. SPEAKER—I shall hear Sri Channiah also.

Sri VEERENDRA PATIL.—What I was sugoegsting was that it is for you to uphold that convention. And if this Hon. House feels that this House is at liberty to discuss anything about anybody - whetherhe is a member of this House or not it isall right. Today you may discuss something about a gentleman who is not a member of this House. Then it will be open to every member to discuss and mention the name ofanybody not only in India but in the world and say something about hat gentleman That is why, I was submitting humbly that it is for you to uphold this convention. It is also left to the House.

ಶ್ರೀ ಎಸ್. ಶಿವಪ್ಪ:—ಶ್ರೀಮಾನ್ ನಿಜಲಿಂಗಪ್ಪನವರು ಈ ಮನೆಯ ಸದಸ್ಯರು ಅವರ ಮೇಲೆ ಏನಾದರೂ ಹೇಳಿದರೆ ಅವರು ಸದಸ್ಯರಾಗಿರುವುದರಿಂದ ಅವರಿಗೆ ಏನಾದರೂ ಹೇಳಬೇಕಾದರೆ ಹೇಳುವುದಕ್ಕೆ ಅಧಿಕಾರವಿದೆ. ಅವರು ಸಭೆಯಲ್ಲಿ ಇಲ್ಲದೆ ಇದ್ದರೆ ಅದು ನಮ್ಮ ತಪ್ಪಲ್ಲ.

ಶ್ರೀ ಎಚ್. ಸಿದ್ದವೀರಪ್ಪ:—ಶ್ರೀ ಮಾನ್ ಐತಾಳರು ಮಾತನಾಡಿದ್ದದರಲ್ಲಿ ತಪ್ಪಿಲ್ಲ. ಕಾರಣವೇನೆಂದರೆ ಮಾನ್ಯಮಂತ್ರಿಗಳು ಹೇಳುವ ಪ್ರಕಾರ ನಾವೇನಾದರೂ ಅನುಸರಿಸಿದರೆ ಯಾರು ಏನು ತಪ್ಪು. ಮಾಡಿದರೂ ಅವರ ವಿಚಾರ ನಾವು ಮಾತನಾರಬಾರದು ಎಂದರೆ ಸರಿಯಾದ ಸಂಪ್ರದಾಯವಾಗುವುದಿಲ್ಲ ಒಂದು ವೇಳೆ ನಾವು ಇಲ್ಲಿ ಯಾರ ವಿಚಾರವಾಗಿಯಾದರೂ ಮಾತನಾಡಿದರೆ, ಹೊರಗಡೆ ಪ್ರೆಸ್‌ನಲ್ಲಿ ಬೇಕಾದರೆ ಈ ರೀತಿಯಾಗಿ ಅಸೆಂಬ್ಲಿ ನನ್ನ ವಿಚಾರ ಬಂದಿತ್ತು ಈ ವಿಷಯ ಸರಿಯಲ್ಲ ಎಂದು ಹೇಳತಕ್ಕ ಹಕ್ಕು ಅವರಿಗೆ ಇದೆ. ಅದನ್ನು ಯಾರು ತಪ್ಪಿಸುವುದಕ್ಕಾಗುವುದಿಲ್ಲ. ಈಗ ಇರತಕ್ಕ ಸತ್ಯವನ್ನು ಮಾತನಾಡಿದ್ದೇ ಆದರೆ ಈ ಹೊತ್ತು ಶ್ರೀಮಾನ್ ನಾಗಪ್ಪ ಆಳ್ವ ಅವರು ಮತ್ತು ಶ್ರೀ ಮಾನ್ ನಿಜಲಿಂಗಪ್ಪ ಅವರು ಇವರ ರಥದ ಎರಡು ಗಾಲಿಗಳು ಅವರು ಏನಾದರೂ ಒತ್ತಾಯ ಮಾಡಿದರೆ ಇವರು ಅದರ ಬಗ್ಗೆ ಮಾತನಾಡುವುದಕ್ಕೆ ಸಾಧ್ಯವಿಲ್ಲ. ಡೆಫಮೇಟರಿ ಆಗುತ್ತದೆ ಎಂದು ಮಾನ್ಯ ಮುಖ್ಯ ಮಂತ್ರಿಯವರು ಹೇಳಿದರು. ಡೆಫಮೇಟರಿ ಆಗುವುದಿಲ್ಲ ಇದಕ್ಕೆ ಜಟ್ಟಿಫಿಕೇಷನ್ ಏನು ಎಂದರೆ ಅದು ಸಿಂಪಲ್ ಎಲಿಮೆಂಟರಿ ವಿಚಾರ ಟ್ರೂತ್ ಈಸ್ ದಿ ಡಿಫೆನ್ಸ್ ಆಫ್ ಡೆಫಮೆಷನ್. ಕಳ್ಳತನ ಮಾಡಿದ್ದಾನೆ ಎಂದು ಹೇಳಿದರೆ ಡೆಫಮೇಷನ್ ಆಗುತ್ತದೆ. ಆದರೆ ಅದನ್ನು ಸಾಬೀತು ಮಾಡಿದರೆ ಅದು ಡೆಫಮೇಟರಿ ಆಗುವುದಿಲ್ಲ. ಆದುದರಿಂದ ಮಾನ್ಯ ಸದಸ್ಯರಾದ ಐತಾಳರು ಹೇಳುವುದರಲ್ಲಿ ತಪ್ಪಿಲ್ಲ, ಅವರು ಒಳ್ಳೆಯ ವಿಚಾರವನ್ನು, ಸತ್ಯವನ್ನು ಪ್ರತಿಪಾಲಿಸುತ್ತಿದ್ದಾರೆ. ಅವರಿಗೆ ಅವಕಾಶ ಕೊಡಬೇಕು.

MR. SPEAKER:—On what Demand is the Hon. member speaking?

SRI P. V. AITHAL:—On Demand No. 37

MR. SPEAKER:—All right. Now points have been raised and I must reply. Whatever may be the law on the subject we are not here to look at it as a lawyer. But I would only say that what the hon. Member Sri Siddaveerappa said is not the complete and correct proposition of law. Truth is not defence, but truth uttered in the interest of public is defence.

Now I would invite attention to rule 288. Whether it is in conformity with criminal law is not our point. Rule 288 says

"A member while speaking shall not..........

*

(vii) utter treasonable, seditious or defamatory words."

The next rule is Rule 289. It says;

"No allegation of a defamatory or incriminatory nature shall be made by a member against any person unless the member has given previous intimation to the Speaker and also to the Minister concerned so that the Minister may be able to make an investigation into the matter for the purpose of reply."

So this notice has to be given.

SRI B. BHASKAR SHETTY:—But he has not used any defamatory word.

Mr. Speaker:—Then the Hon. member said that he is speaking on Demand No 37. Now I will point out the scope of discussion of the demand.

ಶ್ರೀ ಎಚ್ ಸಿದ್ದವೀರಪ್ಪ:—ಸ್ಕೋಪ್ ಏನಾದರೂ ಇರಲಿ, ಏನು ಬೇಕಾದರೂ ಮಾತನಾಡಿ ಎಂದು ಹೇಳಿದ್ದೀರಿ.

ಶ್ರೀ ಬಿ. ಭಾಸ್ಕರ ಶೆಟ್ಟಿ:—ಸ್ಕೋಪ್, ಗೀಪ್ ಎಂದು ಏನೋ ತಾವು ಹೇಳುತ್ತ ಇದ್ದೀರಿ. ಈ ರೀತಿ ಮಾಡದೆ ಸದಸ್ಯರಿಗೆ ಮಾತನಾಡಲು ಅವಕಾಶ ಕೊಡಿ.

ಶ್ರೀ ವಿ. ಎಲ್. ಶಿವಪ್ಪ:—ಆಡಳಿತದಲ್ಲಿರುವ ಪಕ್ಷದವರಿಗೆ ತೃಪ್ತಿ ಪಡಿಸುವುದಕ್ಕೆ ಕಷ್ಟ ಪಡುತ್ತಿದ್ದೀರಲ್ಲ ಸ್ವಾಮಿ.

ಶ್ರೀ ಪಿ. ವಿ. ಐತಾಳ್:—ಸ್ವಾಮಿ ಯಾವ ಡೆಪ್ಯುಟಿ ಕಮಿಷನರು ಸುರತ್‌ಕಲ್‌ನ ಎರಡು ಎಕರೆ ಭೂಮಿಯನ್ನು ಕಾಂಗ್ರೆಸ್ ಮಂಡಲ ಅಧ್ಯಕ್ಷರಿಗೆ ಕೊಡಬೇಕೆಂದು ಶಿಫಾರಸು ಮಾಡಿದರೊ ಅದೇ ನಾಗೇಗೌಡ ಅವರು ೨೧-೧೦-೧೯೬೬ಕ್ಕೆ ೨೯೯ ಎಕರೆ ಇವರಿಗೆ ಕೊಡಬೇಕೆಂದು ಶಿಫಾರಸು ಮಾಡಿದರು. ೨೨ನೇ ತಾರೀಖು ಈಗಿನ ಡೆಪ್ಯುಟಿ ಕಮಿಷನರ್ ಆದ ಶ್ರೀ ರಾಮಕೃಷ್ಣ ಅವರಿಗೆ ಅವರು ಚಾರ್ಜ ಹ್ಯಾಂಡ್ ಓವರ್ ಮಾಡಿದ್ದಾರೆ. ಶ್ರೀ ನಾಗೇಗೌಡರು, ಬೊಂಬಾಯಿಗೆ ಟ್ರಂಕ್ ಟೆಲಿಫೋನ್ ಮಾಡಿ ನನಗೆ ಟ್ರಾನ್ಸ್‌ಫರ್ ಆಗಿದೆ. ನೀವು ಬನ್ನಿ ೨೯೯ ಎಕರೆ ರೆಕಮೆಂಡ್ ಮಾಡುತ್ತೇನೆ ಎಂದು ಅವರನ್ನು ಕರೆಸಿಕೊಂಡು ರೆಕ್‌ಮೆಂಡ್ ಮಾಡಿದ್ದಾರೆ. ಅವರಿಗೆ ಕೋಳಿ ಸಾರು ಊಟ ಸಿಕ್ಕಿದರೆ ಏನು ಬೇಕಾದರೂ ಶಿಫಾರಸು ಮಾಡುತ್ತಾರೆ. ಬೆಂಗಳೂರಿನ ಸುಭಾಸ್ ನಗರವನ್ನು ಬೇಕಾದರೂ ಕೊಡುವುದಕ್ಕೆ ರೆಕಮೆಂಡ್ ಮಾಡುತ್ತಾರೆ ಚಾರ್ಜ ಕೊಟ್ಟಾದ ಮೇಲೆ ಮಾರನೆ ದಿವಸ ಆಂಟಿ ಡೇಟ್ ಹಾಕಿ ನಾಗೇಗೌಡರು ಶಿಫಾರಸು ಮಾಡಿದ್ದಾರೆ. ಅಂಥ ಅಧಿಕಾರಿಗಳನ್ನು ದಯವಿಟ್ಟು ನಮ್ಮ ಜಿಲ್ಲೆಗೆ ಕಳುಹಿಸಬೇಡಿ. ನಂತರ ಗೋವ ಅಧಿವೇಶನವಾಯಿತು ಶಂಕರನಾರಾಯಣ ಕಾರ್ಪೊರೇಷನ್ನಿನ ನಾರಾಯಣ ಶೆಟ್ಟರೂ ಹೋದರು. ನಾಗಪ್ಪ ಆಳ್ವ ಅವರೂ ಹೋದರು. ಗೋವಾ ಅಧಿವೇಶನ ಮುಗಿಯಿತು. ಒಂದೊಂದು ಎಕರೆಗೆ ಹತ್ತು ಸಾವಿರ ರೂಪಾಯಿ ಕೊಡುತ್ತಾರೆ. ನಾನು ೨೬ ಸೆಂಟ್ ಜಮೀನನ್ನು ಒಂದು ಎಕರೆಗೆ ೬೦ ಸಾವಿರ ರೂಪಾಯಿ ಪ್ರಕಾರ ತೆಗೆದು ಕೊಂಡಿದ್ದೇನೆ. ಪಣಂಬೂರಿಗೆ ೩ ಮೈಲಿ ದೂರದಲ್ಲಿ ೧೨ ಎಕರೆ ಜಮೀನನ್ನು ಕೊಟ್ಟಿದ್ದಾರೆ, ಇಂಥ ಆಂಟಿ ಸೋಷಿಯಲಿಸ್ಟ್ ಆರ್ಡರುಗಳನ್ನು ನೂರಾರು ತೋರಿಸಬಲ್ಲೆ.

When a poor person from my constituency applied for 10 or 15 cents his application was rejected saying that the land is within 20 miles from the harbour area and that the land is required for future industrial development and publice purpose.

ನೀವು ಚಾಲೆಂಜ್ ಮಾಡಿದರೆ ಇಂಥ ಸಾವಿರಾರು ಆರ್ಡರುಗಳನ್ನು ತೋರಿಸುತ್ತೇನೆ. ಆದರೂ ಸಹಿತ ೨೯೯ ಎಕರೆಯನ್ನು ೩೦ ವರ್ಷಗಳ ಕಾಲ ಲೀಸಿಗೆ ಕೊಡಬೇಕೆಂದು ಮಾಡಿದ್ದಾರೆ.

As an honourable M. L. A. I paid the highest income tax in Mangalore, you can verify that as an hon. Advocate I will purchase these lands for Rs. 4 lakhs, these lands which your revenue authorities have recommended as useless. I will purchase those lands as an hon. Member of this House and also as an hon. Advocate of South Kanara. I challenge the Government through the speaker I will purchase these 299 acres of hopeless lands which Mr. Koujalgi has said as worthless for Rs. 4 lakhs.

ಇವರ ಹತ್ತಿರ ಬಂದು ಹೇಳಿದೆ ಆ ಜಮೀನು ಕೊಡಬೇಡಿ. ಅನ್ಯಾಯ ಮಾಡಬೇಡಿ ಮಂಗಳೂರಿನ ಸಮೀಪದ ಪ್ರತಿಯೊಂದು ಅಂಗುಲ ಭೂಮಿಯೂ ಬಹಳ ಬೆಲೆ ಬಾಳತಕ್ಕದು ಎಂದು ಸುರತ್ಕಲ್

ಸಮೀಪದಲ್ಲಿ ಸುಮಾರು ನೂರು ಎಕರೆ ಜಾಗವನ್ನು ಎಷ್ಟೋ ಬಡವರ ಜಾಗವನ್ನು ಪಣಂಬೂರು ಬಂದರು ಸಂಬಂಧದಲ್ಲಿ ಸ್ಥಳಾಂತರಗೊಳ್ಳುವ ಜನರ ಪುನರ್ನಿವೇಶನಕ್ಕೋಸ್ಕರ ಸ್ವಾಧೀನ ಪಡಿಸಿಕೊಂಡಿದ್ದೀರಿ. ಈ ಜಾಗವನ್ನು ರೀಹ್ಯಾಬಿಲಿಟೇಷನ್ನಿಗೆ ಕೊಡಬಾರದಾಗಿತ್ತೇ? ಬಡ ಜನರು ಎಷ್ಟೋ ಪ್ರತಿಭಟಿಸಿದರು. ಅಲ್ಲಿರುವ ಸ್ಪೆಷಲ್ ಡೆಪ್ಯುಟಿ ಕಮಿಷನರು ಶಿಫಾರ್ಸು ಮಾಡಿದರು. ಬಡವರ ಹೊಲ ರೀಹ್ಯಾಬಿಲಿಟೇಷನಿಗೆ ಕೊಟ್ಟ ಸರಕಾರಿ ಜಮೀನನ್ನು ಸರಕಾರಿ ಪಕ್ಷದ ಚೇಲಾಗಳಿಗೆ ಕೊಡುತ್ತಿದ್ದಾರೆ ಹೀಗೆ ಕೊಟ್ಟಿರುವುದನ್ನು ವಜಾಮಾಡದಿದ್ದರೆ ಮುಖ್ಯಮಂತ್ರಿಗಳ ಮತ್ತು ರೆವಿನ್ಯೂ ಮಂತ್ರಿಗಳ ಮೇಲೆ ಸಂಶಯ ಬರುವುದು. ಸುರತ್ಕಲ್‌ನ ಮೈದಾನದಲ್ಲಿ ಎರಡು ಎಕರೆ ಕೊಟ್ಟಾಗ ರೆವಿನ್ಯೂ ಮಂತ್ರಿಗಳ ಮೂಲಕ ಕೊಟ್ಟಾಗೆ ಅನ್ಯಾಯವೆಂದು ತಿಳಿದಮೇಲೆ ವಜಾಮಾಡಿರುವುದಕ್ಕೆ ಮಂತ್ರಿಗಳಿಗೆ ವಂದಿಸುತ್ತೇನೆ. ಎರಡು ಎಕರೆಯನ್ನು ಸುರತ್ಕಲ್ ಮಂಡಲ ಕಾಂಗ್ರೆಸ್ ಅಧ್ಯಕ್ಷರಿಗೆ ಕೊಡಬೇಕೆಂದು ತೀರ್ಮಾನವಾದಾಗ ಯಾವರೀತಿ ಅದನ್ನು ಕ್ಯಾನ್ಸಲ್ ಮಾಡಿದರೊ ಅದೇ ರೀತಿಯಲ್ಲಿ ೨೯ ಎಕರೆಗಳನ್ನು ಎಕರೆಗೆ ೨ ರೂಪಾಯಿ ೨೫ ಪೈಸೆಗಳಂತೆ ನಾಮಿನಲ್ ರೆಂಟಿಗೆ ಕೊಟ್ಟಿರುವುದನ್ನು ಕ್ಯಾನ್ಸಲ್ ಮಾಡಬೇಕು. ಹಾಗೆ ಕ್ಯಾನ್ಸಲ್ ಮಾಡದಿದ್ದರೆ ನಮ್ಮ ಜನರ ಸಂಶಯವೆಂದಿಗೂ ಹೋಗುವುದಿಲ್ಲ ಎಂದು ಧೈರ್ಯದಿಂದ ಹೇಳುತ್ತೇನೆ. ಒಂದು ಇಂಚಿನಷ್ಟೂ ಜಾಗವಿಲ್ಲದಿರುವ ಬಡವರು ಅರ್ಜಿ ಕೊಟ್ಟರೆ ಅವರಿಗೆ ಜಮೀನು ಕೊಟ್ಟಿಲ್ಲ. ಇದು ಯಾವ ಸಮಾಜವಾದ? ಅದೇ ಊರಿನವರು ೧೦ ಸೆಂಟ್ ಜಾಗ ಕೇಳಿದರೆ ಕೊಡುವುದಿಲ್ಲ, ಎಷ್ಟೋ ಜನರಿಗೆ ನೆರಳಿಗೆ ಜಾಗವಿಲ್ಲ. ಹಾಗಿರುವಾಗ ೨೯ ಎಕರೆಗಳನ್ನು ಒಬ್ಬರಿಗೆ ಕೊಡುವುದು ಸರಿಯೇ. ಎಮ್ಮೆ ಸಾಕುವುದಕ್ಕೆ ಮೊದಲು ಪ್ರಾಶಸ್ತ್ಯ ಕೊಡಬೇಕೋ ಅಥವಾ ಮನುಷ್ಯರಿಗೆ ಮೊದಲು ಪ್ರಾಶಸ್ತ್ಯ ಕೊಡಬೇಕೋ.

ಇನ್ನು ಎಕ್ಸ್‌ಪೋ ಬಗ್ಗೆ ಒಂದೆರಡು ಮಾತು. ಇದು ಅಧ್ಯಕ್ಷರಿಗೆ ಸಂಬಂಧಪಟ್ಟ ವಿಷಯ. ಪುಟ ೩೩ ಮತ್ತು ೩೪ ರಲ್ಲಿರುವಂತೆ ಡೋರ್ ನಂಬರು ೫೧೭ಕ್ಕೆ ಸಂಬಂಧಪಟ್ಟಂತೆ ಆರು ಅರ್ಜಿ ಉಂಟು. ಎಸ್ ಆನಂದ್, ಹರ್ಷೆಡ್ ಕಂಟ್ರಾಕ್ಟರ್, ಸಂಗುನಾಥ್, ಪ್ರತಾಪಕುಮಾರ್, ಎನ್ ಪೂರ್ಣಿಮ, ಕೆ ಜೀವರಾಜ ಆಳ್ವ ಮುಂತಾದವರ ಅರ್ಜಿಗಳಿವೆ. ಅವುಗಳಿಗೆಲ್ಲಾ ಡೋರ್ ನಂಬರು ೫೧೭ ಎಂದಿದೆ. ಬೋಗಸ್ ಅಸೋಸಿಯೇಷನ್ ಮಾಡಿಕೊಂಡು ೬ ಅರ್ಜಿ ಕಳಿಸಿದ್ದಾರೆ, ಜೀವರಾಜ ಆಳ್ವ ಕಾಂಗ್ರೆಸ್ ಅಧ್ಯಕ್ಷರ ಮಗ. ಹೀಗೆ ಕಳಿಸಿರುವುದು ಸರಿಯೇ ಅಧ್ಯಕ್ಷರಿಗೆ ಅವರ ಊರಿನಲ್ಲಿ ಒಂದು ಚೂರು ಮರ್ಯಾದೆಯಿಲ್ಲ. ಅವರನ್ನು ನಂಬಿ ಶ್ರೀ ಕೌಜಲಗಿಯವರು ಹೊಂಡಕ್ಕೆ ಬಿದ್ದರು. ಅವರ ಹೆಸರು ಹೋಯಿತು. ಮುಖ್ಯಮಂತ್ರಿಗಳು ಸಹ ಹೊಂಡಕ್ಕೆ ಬಿದ್ದರು. ಇಂಥವರ ಮಾತುಗಳನ್ನು ಕೇಳಿ ಹಾಳಾಗಬಾರದು.

‡ Sri **P. B. NANDIHALLI** (Uchagaon):—Mr. Speaker, Sir, I rise to oppose the Supplementary Demands before the House. Demand No. 17 pertains to Expo-70. I am very sorry to read this under the Head "Education". Government have sent people who are representatives of capitalists to foreign countries. The Government should think about the poor people living in forest areas and rural areas who are starving without food and those who are not enjoying the democratic rights, and help them instead of sending people to foreign countries.

Coming to Demand No. 21-Rural Development, I cannot see any plan of Rural development before the Government. Backward villages and villages in the forest area are entirely neglected. We are demanding equal rights for the poor people, backward people and people who are living in villages.

Inspite of so many requests and so many representations and our speeches on the floor of the House, the Government is purposely neglecting our Marathi areas.

6-30 p. m.

About rural Development, the Government is not taking interest in developing our Marathi area. The sites for the village

(SRI T. B. NANDIHALLI)

extension schemes have not been given and the Government is not taking action inspite of our repeated requests. For example, we are requesting for the last 15 years the Government to make provision for the extension of Bagewadi Village. Still the Government has not taken any decision. The people of another Village are demanding sites for extension of the Village. But the Government is rejecting their demand. I therefore request the Hon. Minister for Revenue to look into the matter and see the demands of the people for extension of the villages are met.

Sir, the Dispensaries in our area are completely neglected. There is no stock of medicines. Even if there is stock, the stock of medicines is being misused. In this connection I mention there is a demand for a Dispensary in Yellur Village. I request the Health Minister to sanction a Dispensary for Yellur Village. I also request him to sanction a Dispensary to Handiganur Village which is surrounded by so many villages.

There are not sufficient roads in my Constituency.

In Demand No. 26, theGovernment has provided relief to educated unemployed-Graduates, post-graduates, and Diploma holders. They want to give assistance of Rs. 150 and 100 to those twhose who have an annual income of not exceeding Rs.5000/-If the Government is truthful to to the socialism, they should look to the needs of others also. They should not put a stop at an annual income of Rs. 5000/-. It should be be increased.

About Demand No. 33, I want to say something., and it is about Bellary Nala. If you take up this and execute it, it would give great relief to the people of this area. I therefore request the Government to take up this scheme immediately and help the concerned people there.

† ಶ್ರೀ ಡಿ. ಎಸ್. ನಾಡಕರ್ಣಿ (ಅಂಕೋಲ) :— ಅಧ್ಯಕ್ಷರೇ, ಫ್ಲಡ್ ರಿಲೀಫ್ ಕೆಳಗೆ ನಮ್ಮ ಜಿಲ್ಲೆಯಲ್ಲಿ ಆಗಿರುವಂತಹ ಲುಕ್ಸಾನಿಗೆ ಪರಿಹಾರ ಕೊಡಬೇಕೆನ್ನುವ ಬಗ್ಗೆ ಕೆಲವು ವಿಷಯಗಳನ್ನು ಹೇಳಬಯಸುತ್ತೇನೆ. ಮಳೆ ಬಂದು ನಮ್ಮಲ್ಲಿ ನೆರೆಯ ಹಾವಳಿಯಿಂದ ಬಹಳ ನಷ್ಟವಾಗಿದೆ, ಇದರ ಯಾದಿಯನ್ನು ಸಂಬಂಧಪಟ್ಟ ಮಂತ್ರಿಗಳಿಗೆ ಕೊಡುತ್ತೇನೆ. ಅವರು ಲುಕ್ಸಾನಾಗಿರತಕ್ಕವರಿಗೆ ಸರಿಯಾದ ಪರಿಹಾರವನ್ನು ಒದಗಿಸಿಕೊಡಬೇಕೆಂದು ಹೇಳುತ್ತೇನೆ.

ಅರಣ್ಯ ಖಾತೆಯ ವಿಷಯ ಹೇಳುವುದಾದರೆ, ಅರಣ್ಯ ಕೂಲಿಗಾರರ ಸಂಘಗಳು ನಾವು ಮುಂಬೈ ರಾಜ್ಯದಲ್ಲಿ ಇದ್ದಾಗ ಅನೇಕವು ಇದ್ದವು. ಅವರಿಗೆ ಅಲ್ಲಿ ಕೆಲಸ ಸಿಕ್ಕುತ್ತಾಇತ್ತು. ಅಂತಹ ೬೦೦ ಕುಟುಂಬಗಳು ಅಲ್ಲಿ ಇವೆ. ಕೆಲವು ಕಂಟ್ರಾಕ್ಟದಾರರು ಬಂದು ಮಂತ್ರಿಗಳ ಹತ್ತಿರ ಹೇಳಿಕೊಂಡು ಅಲ್ಲಿನ ಕೆಲಸ ಕಾರ್ಯಗಳನ್ನು ಅವರು ತೆಗೆದು ಕೊಂಡಿರುವುದರಿಂದ ಆ ಜನಗಳಿಗೆ ಕೂಲಿ ಸಿಕ್ಕದೇ ಹೋಗಿದೆ. ಕಂಟ್ರಾಕ್ಟ್ದಾರರು ಅವರ ಕೂಲಿಗಳನ್ನು ಕರೆದುಕೊಂಡು ಬಂದು ಕೆಲಸ ಮಾಡಿಸಿಕೊಳ್ಳುತ್ತಾರೆ. ಇದರಿಂದಾಗಿ ಮಳೆಗಾಲದಲ್ಲಿ ಈ ಜನರು ಕೂಲಿ ಕೆಲಸ ಇಲ್ಲವೇ ಉಪವಾಸ ಇರಬೇಕಾದ ಪರಿಸ್ಥಿತಿ ಒದಗಿದ. ಅರಣ್ಯ ಖಾತೆಯ ಮಂತ್ರಿಗಳು ಇನ್ನಾದರೂ ಅವರಿಗೆ ಕೂಲಿ ಸಿಕ್ಕುವಂತಹ ಒಂದು ಅವಕಾಶವನ್ನು ಮಾಡಿಕೊಡಬೇಂದು ಹೇಳುತ್ತೇನೆ. ಕಾರವಾರ ಜಿಲ್ಲೆಯಲ್ಲಿ ಸಾಗುವಳಿಗೆ ಭೂಮಿ ಕೊಡುವುದಿಲ್ಲ, ಇಂಡಸ್ಟ್ರೀ ಮಾಡಲಿಕ್ಕೆ ಕೊಡುವುದಿಲ್ಲ, ಅಲ್ಲಿ ಕೆಲಸ ಮಾಡಿ ಕೂಲಿ ಮಾಡುವವರಿಗೆ ಕೂಲಿಯನ್ನು ಕೂಡ ಕೊಡದಿದ್ದರೆ

ಜನರು ಸುಮ್ಮನೆ ಇರಲಿಕ್ಕೆ ಇಲ್ಲ. ೮೮ ಪರ್ಸೆಂಟ್ ಅರಣ್ಯ ಭೂಮಿಯಿಂದ ಪ್ರತಿಫಲ ತೆಗೆದುಕೊಳ್ಳುತ್ತಾ ಇರಬೇಕಾದರೆ ಕಷ್ಟಪಟ್ಟು ಕೆಲಸ ಮಾಡತಕ್ಕವರಿಗೆ ಕೂಲಿ ಸಹ ಸಿಕ್ಕುವುದಕ್ಕೆ ಅವಕಾಶವಿಲ್ಲ ಅಂದರೆ ಜನರು ಸರ್ವಥಾ ಕೇಳುವುದಿಲ್ಲವೆಂದು ಸರ್ಕಾರದವರಿಗೆ ಸಾರಿ ಹೇಳುತ್ತಾ ಇದ್ದೇನೆ. ಇಷ್ಟೇ ಅಲ್ಲ ಹರಿಜನರ ಪೈಕಿ ೭೦ ವರ್ಷ ವಯಸ್ಸಿನ ಮುದುಕಿ ಅರ್ಜಿ ಕೊಟ್ಟು ಪೆನ್ಷನ್ ಬೇಡಿದರೆ ಇದುವರೆಗೂ ಸಿಕ್ಕಿಲ್ಲ, ಇದೇ ರೀತಿ ೧೫ ಅರ್ಜಿಗಳು ಪೆಂಡಿಂಗ್ ಇವೆ. ಅವರಿಗೆ ಪೆನ್‌ಷನ್ ಸಿಕ್ಕಬೇಕಾದರೆ ಆಫೀಸರುಗಳಿಗೆ ಲಂಚ ಕೊಡಬೇಕಾಗುತ್ತದೆ. ಸಂಬಂಧಪಟ್ಟ ಮಂತ್ರಿಗಳಿಗೆ ವಿವರಗಳನ್ನು ಕೊಡುತ್ತೇವೆ ದಯವಿಟ್ಟು ಇದನ್ನೆಲ್ಲಾ ಸರಿಪಡಿಸಿಬೇಕೆಂದು ಹೇಳುತ್ತೇನೆ.

ಒಂದು ವಿಚಾರವನ್ನು ಮಾನ್ಯ ಅರ್ಥ ಮಂತ್ರಿಗಳ ಗಮನಕ್ಕೆ ತರುತ್ತೇನೆ. ಈಚೆಗೆ ಹೊಸದಾಗಿ ಕಾರ್ಪೊರೇಷನ್‌ಗಳನ್ನು, ಬೋರ್ಡ್‌ಗಳನ್ನು ರಚನೆಮಾಡಿ ಹೊಸ ಹೊಸದಾಗಿ ಅಲ್ಲಿ ಬಂಡವಾಳ ಹೂಡುತ್ತಾ ಇದ್ದೀರಿ. ಈವೊತ್ತಿನ ದಿವಸ ಎನ್.ಜಿ.ಇ.ಎಫ್.ಗೆ ಹೊಸದಾಗಿ ಒಂದು ಕೋಟಿ ರೂಪಾಯಿ ಕೊಡಬೇಕೆಂದು ಮನಸ್ಸು ಮಾಡಿದ್ದೀರಿ. ಎನ್.ಜಿ.ಇ.ಎಫ್.ನಲ್ಲಿ ಆಗುತ್ತಿರುವ ಮೋಸ ತಮಗೆ ಗೊತ್ತಿಲ್ಲ. ೬ ಸಾವಿರ ಟನ್ ಉಕ್ಕಿನಲ್ಲಿ ಒಂದು ಸಾವಿರ ಟನ್ ಉಕ್ಕು ಖರ್ಚಾಗದೆ ಹಾಗೇ ಇತ್ತು. ಅದನ್ನು ೧೯೬೭ನೇ ಇಸವಿಯಲ್ಲಿ ಬಹಳ ಕಡಿಮೆ ಬೆಲೆಗೆ ಮಾರಿದ್ದಾರೆ. ಅಲ್ಲಿ ಅದನ್ನು ಪೇಪರಿನಲ್ಲಿ ಅಡ್ವರ್‌ಟೈಜ್‌ಮೆಂಟ್ ಮಾಡಿಲಿಲ್ಲ, ಟೆಂಡರನ್ನೂ ಸಹ ಕರೆಯಲಿಲ್ಲ. ಹರಾಜು ಸಹ ಹಾಕಲಿಲ್ಲ. ೧೯೬೭ನೇ ಇಸವಿಯಲ್ಲಿ ಉಕ್ಕಿನ ಬೆಲೆ ಬಹಳ ಜಾಸ್ತಿ ಇತ್ತು. ಇದನ್ನು ಮಾರಿದ್ದರೆ ಕೊನೆಪಕ್ಷ ಮೂರು ಲಕ್ಷ ರೂಪಾಯಿಗಳ ಲಾಭ ಬರುತ್ತಿತ್ತು. ನೆಗೋಸಿಯೇಷನ್ ಮೂಲಕ ಒಂದು ಲಕ್ಷ ೨೧ ಸಾವಿರಕ್ಕೆ ಮಾರಿರಬೇಕಾದರೆ ಈ ಮ್ಯಾನೇಜಿಂಗ್ ಡೈರೆಕ್ಟರವರಿಗೆ ಎಷ್ಟು ಲಂಚ ಬಂದಿದೆಯೋ ಗೊತ್ತಿಲ್ಲ. ಈ ತರಹ ಕಾರ್ಪೊರೇಷನ್, ಬೋರ್ಡುಗಳನ್ನು ಮಾಡಿರುವುದು ಅಧಿಕಾರಿಗಳು ಲಂಚ ತಿನ್ನುವುದಕ್ಕೆ ಅವಕಾಶ ಮಾಡಿಕೊಟ್ಟಂತಾಗಿದೆ. ಇವೊತ್ತಿನ ದಿವಸ ಸರಕಾರದ ಹಣವನ್ನು ನಾನಾ ರೀತಿಯಲ್ಲಿ ಲೂಟಿ ಮಾಡುತ್ತಾ ಇದ್ದಾರೆ. ಹೊಸದಾಗಿ ಜನಗಳು ಕೊಟ್ಟ ತೆರಿಗೆಯನ್ನು ಲೂಟಿ ಮಾಡುವುದಕ್ಕೆ ಅವಕಾಶ ಕೊಟ್ಟರೆ, ನಮ್ಮ ಜವಾಬ್ದಾರಿಯನ್ನು ನಿರ್ವಹಿಸಿದಂತಾಗುವುದಿಲ್ಲ. ಹೆಚ್ಚಿಗೆ ಹೇಳುವುದಿದ್ದರೂ ಇಷ್ಟನ್ನು ಹೇಳಿ ನನ್ನ ಮಾತುಗಳನ್ನು ಮುಕ್ತಾಯ ಮಾಡುತ್ತೇನೆ.

ಶ್ರೀ ಎಸ್. ಹಮೀದ್ ಷಾ :— ಅಧ್ಯಕ್ಷರೇ ಈಗ ಹಣಕಾಸಿನ ಮಂತ್ರಿಗಳು ಸಪ್ಲಿಮೆಂಟರಿ ಬಜೆಟನ್ನು ನಮ್ಮ ಮುಂದೆ ಇಟ್ಟಿದ್ದಾರೆ ಅದನ್ನು ನೋಡಿದರೆ ಬಹಳ ಆಶ್ಚರ್ಯವಾಗುತ್ತದೆ. ಡಿಮ್ಯಾಂಡ್ ನಂಬರ್ ೯ರ ಬಗ್ಗೆ ಹೇಳಬೇಕೆಂದರೆ ಬಹಳ ಆಶ್ಚರ್ಯವಾದಂಥ ಒಂದು ಮಾತನ್ನು ಹೇಳುತ್ತೇನೆ. ಓಟರ್ ಲಿಸ್ಟನ್ನು ಬರೆಯುವದಕ್ಕೆ ಯಾವ ತರಹದ ಜನರನ್ನು ಕಳುಹಿಸಬೇಕು, ಯಾರು ಹೋಗುತ್ತಾರೆ ಎಂದು ಕೇಳುವವರೇ ಇಲ್ಲ. ಹೆಸರುಗಳನ್ನು ಬರೆಯುವಾಗ ಸ್ಪಷ್ಟವಾಗಿ ಬರೆಯುವುದಿಲ್ಲ ನನ್ನ ಕ್ಷೇತ್ರದಲ್ಲಿ ಒಂದು ಮುದುಕಿಯ ಹೆಸರನ್ನು ಉಜಾರಬಡ್ಡಿ ಎಂದು ಬರೆದಿದ್ದಾರೆ. ಈ ರೀತಿ ಓಟರ್ ಲಿಸ್ಟಿನಲ್ಲಿ ಬರೆದಿದ್ದಾರೆ. ಅದರ ಬಗ್ಗೆ ಸ್ವಲ್ಪ ಗಮನ ಕೊಡಬೇಕೆಂದು ಹೇಳುತ್ತೇನೆ. ಆದುದರಿಂದ ಅಲ್ಲಿ ಓಟರ್ ಲಿಸ್ಟನ್ನು ಬರೆಯಲು ಒಳ್ಳೆಯ ಜನಗಳನ್ನು ಕಳುಹಿಸಬೇಕೆಂದು ಕೇಳುತ್ತೇನೆ.

ಇನ್ನು ಡಿಮ್ಯಾಂಡ್ ನಂ ೧೭ರ ಬಗ್ಗೆ ಹೇಳುತ್ತಾ ಈಗಾಗಲೇ ಎಕ್ಸ್‌ಪೋ-೭೦ ಬಗ್ಗೆ ಸಾಕಷ್ಟು ಚರ್ಚೆ ಮಾಡಿದ್ದಾರೆ. ಆದರೆ ಒಂದು ಮಾತನ್ನು ಮಾತ್ರ ನಾನು ಇಲ್ಲಿ ಹೇಳುತ್ತೇನೆ. ಮುಖ್ಯ ಮಂತ್ರಿಗಳು ಇಲ್ಲಿಇದ್ದಿದ್ದರೆ ಕೇಳುತ್ತಿದ್ದೆ. ತಮ್ಮ ಕಾಲದಲ್ಲಿ ಸಿವಿಲ್ ಏರಿಯಾ ಕಡೆ ಒಂದೆರಡು ಹೈಸ್ಕೂಲುಗಳನ್ನು ಎಕ್ಸ್‌ಪೋಗೆ ವೆಚ್ಚವಾದ ಹಣದಲ್ಲಿ ಕಟ್ಟಿಸಿಕೊಟ್ಟಿದ್ದರೆ ನಿಮಗೆ ಒಂದು ಒಳ್ಳೇ ಕೀರ್ತಿ ಬರುತ್ತಿತ್ತು. ಆದರೆ ತಾವು ಅದನ್ನು ಮಾಡಲಿಲ್ಲ. ಎಕ್ಸ್‌ಪೋಗೆ ಜನಗಳನ್ನು ಕಳುಹಿಸಿ ತಮ್ಮ ಒಳ್ಳೆಯ ಹೆಸರನ್ನು ಕೆಡಿಸಿಕೊಂಡಿದ್ದಾರೆ.

ಇದನ್ನು ಸ್ವಲ್ಪ ಯೋಚನೆ ಮಾಡಿ ಇನ್ನು ಹೆಲ್ತ್ ಡಿಪಾರ್ಟಮೆಂಟ್ ವಿಷಯ ಹೇಳಬೇಕೆಂದರೆ ಅದಕ್ಕಿಂತ ಹೊಲಸು ಡಿಪಾರ್ಟ್‌ಮೆಂಟ್ ಇನ್ನು ಯಾವುದೂ ಇಲ್ಲ.ಬೌರಿಂಗ್ ಆಸ್ಪತ್ರೆಯಲ್ಲಿ ಇರುವ ಮುಖ್ಯ ಡಾಕ್ಟರ್ ಎಂದರೆ ಡೈರೆಕ್ಟರು ಏನು ಮಾಡಿದ್ದಾರೆ ಎಂದರೆ, ಒಂದು ಗ್ಲೂಕೋ ಫ್ಯಾಕ್ಟರಿ ಮಾಡಿದ್ದಾರೆ.

ಅದನ್ನು ಬಿಟ್ಟು ಅವರು ಬೇರೆ ಯಾವ ಒಳ್ಳೆಯ ಕೆಲಸವನ್ನು ಮಾಡಲಿಲ್ಲ. ಡಾಕ್ಟರ್ ದೇಸಾಯಿಯವರನ್ನು ಈಗ ಎನ್‌ಕ್ವೈರಿ ಮಾಡುವುದಕ್ಕೆ ಹಾಕುತ್ತೇವೆಂದು ಹೇಳುತ್ತಾರೆ. ಆ ಆಸ್ಪತ್ರೆಯಲ್ಲಿ ಹೇಗೆ ಡಾ॥ ದೇಸಾಯಿಯವರು ಪ್ರೈವೇಟ್ ಆಪರೇಷನ್ಸ್ ಮಾಡುತ್ತಾ ಇದ್ದಾರೋ ನನಗೆ ಗೊತ್ತಿಲ್ಲ.

(ಶ್ರೀ ಎಸ್. ಹಮೀದ್ ಷಾ :—)

(*Interruptions*)

ನನ್ನ ಭಾಷೆಯಾದ ಉರ್ದುವಿನಲ್ಲಿ ಮಾತನಾಡಿದರೆ ಮಾನ್ಯ ಸದಸ್ಯರಿಗೆ ಅರ್ಥವಾಗುವುದಿಲ್ಲ ಎಂದು ಕನ್ನಡದಲ್ಲಿ ಮಾತನಾಡಿದರೂ ಮಾನ್ಯ ಸದಸ್ಯರಿಗೆ ಸಹನೆ ಇಲ್ಲದಹಾಗೆ ಕಾಣುತ್ತದೆ. ಆದುದರಿಂದ ೩೪ ಲಕ್ಷ ಪ್ರಜೆಗಳ ಭಾಷೆಯಾದ ಉರ್ದುವಿನಲ್ಲೇ ನನ್ನ ಭಾಷಣವನ್ನು ಮುಗಿಸುತ್ತೇನೆ.

(Hon. Member concluded his speech in Urdu).

(SRI D. DEVARAJ URS rose.)

MR. SPEAKER:—I would request the hon. Member not to insist on speaking at this late hour.

SRI. D. DEVARAJ URS:—I am not thinking of making a speech. I only want to make just one point and I will not take more than two or three minutes.

MR SPEAKER :—I request him not to press.

SRI D. DEVARAJ URS ;—This is the only occasion when I can speak about it.

SRI D.B. KALMANKAR :—After the discussion on the Supplementary Demands is over, the Appropriation Bill will be introduced and there after a day or two will have to be allotted for its consideration.

೭. ೦೦ P.M

ಶ್ರೀ ಎಸ್. ಎಸ್ ಅರಕೇರಿ (ಬಳ್ಳೊಳ್ಳಿ) :— ಮಾನ್ಯ ಅಧ್ಯಕ್ಷರೆ, ನಾನು ಮಾನ್ಯ ಅರ್ಥ ಮಂತ್ರಿಯವರ ಗಮನಕ್ಕೆ ಒಂದೆರಡು ವಿಚಾರಗಳನ್ನು ತರಬಯಸುತ್ತೇನೆ.

ಈಗ ಡಿಮ್ಯಾಂಡ್ ನಂ. ೧೭ ಎಕ್ಸ್‌ಪೋ ೭೦ ಗೆ ಸಂಬಂಧಪಟ್ಟದ್ದು. ಅದರ ಬಗ್ಗೆ ಇಲ್ಲಿ ಪೋಸ್ಟ್ ಮಾರ್ಟಂ ನಡೆಯುತ್ತಿದೆ. ನಾನು ಅದರ ಬಗ್ಗೆ ಒಂದು ಪಾಯಿಂಟ್ ಮಾತ್ರ ಹೇಳುತ್ತೇನೆ. ಸುಮಾರು ೧೪೦ ಜನ ಯುವಕರನ್ನು ಎಕ್ಸ್‌ಪೋ ೭೦ ಕ್ಕೆ ಕಳುಹಿಸಿದ್ದಾರೆ. ಅದರಲ್ಲಿ ಕೇವಲ ಎರಡು ಹರಿಜನರು ಮಾತ್ರ ಇದ್ದಾರೆ. ನ್ಯಾಯವಾಗಿ ಮೈಸೂರು ಸರ್ಕಾರದವರು ಕೊನೇಪಕ್ಷ ೨೫ ಹರಿಜನ-ಗಿರಿಜನ ವಿದ್ಯಾರ್ಥಿಗಳನ್ನಾದರೂ ಇದಕ್ಕೆ ಕಳಿಸಬೇಕಾಗಿತ್ತು. ಇದಕ್ಕೆ ೬ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ನನಗೆ ಮಾನ್ಯ ರಾಮಕೃಷ್ಣ ಹೆಗಡೆಯವರ ಬಗ್ಗೆ ಬಹಳ ಗೌರವ ಇದೆ. ಅದರೆ, ಈ ವಿಷಯವನ್ನು ತೀರ್ಮಾನ ಮಾಡುವಾಗ ಈ ರೀತಿ ಕೇವಲ ಇಬ್ಬರನ್ನು ಕಳಿಸುವುದಕ್ಕೆ ಏಕೆ ತೀರ್ಮಾನ ಮಾಡಿದರೆಂದು ನನಗೆ ಗೊತ್ತಾಗಿಲ್ಲ. ಇಂತಹ ಉದಾಸೀನ ಮನೋಭಾವ ಏಕೆ ಮಾಡಿದರು? ಇನ್ನು ಮುಂದಾದರೂ ಈ ರೀತಿ ಅನ್ಯಾಯ ಆಗದ ಹಾಗೆ ನೋಡಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನೊಂದು ವಿಷಯ ಏನೆಂದರೆ ಮೈಸೂರು ಹರಿಜನ-ಗಿರಿಜನ ಹೌಸಿಂಗ್ ಕಾರ್ಪರೇಶನ್ ಇದೆ. ಇದರ ಬಗ್ಗೆ ೬ ತಿಂಗಳ ಹಿಂದೆಯೇ ಹೇಳಿದ್ದೇನೆ. ಮೈಸೂರು ರಾಜ್ಯದಲ್ಲಿ ೧೦ ಸಾವಿರ ಹರಿಜನರಿಂದ ಅರ್ಜಿ ಬಂದಿದೆ ಮೂರುವರೆ ಕೋಟಿ ರೂಪಾಯಿಗಳನ್ನು ಒದಗಿಸಿ ಈ ಹೌಸಿಂಗ್ ಕಾರ್ಪರೇಶನ್ ಪ್ರಾರಂಭ ಮಾಡಿದ್ದಾರೆ. ಆ ಮೂರುವರೆ ಕೋಟಿ ರೂಪಾಯಿ ಹಂಚಿ ೫ ವರ್ಷವಾಯಿತು. ಎರಡನೇ ಇನ್‌ಸ್ಟಾಲ್‌ಮೆಂಟ್ ತಂದು ಕೊಡಿ ಎಂದು ಕೇಳಿದಾಗ, ಎಲ್ ಐ ಸಿ ಚೇರ್‌ಮೆನ್ ಹತ್ತಿರ ಮಾತಾಡಿ ಆದಷ್ಟು ಜಾಗ್ರತೆ ಈ ಸಮಸ್ಯೆಯನ್ನು ಬಗೆಹರಿಸುತ್ತೇವೆಂದು ಹೇಳಿದ್ದರು. ಆದರೆ ಕಳೆದ ೬ ತಿಂಗಳಿಂದಲೂ ಯಾವ ರೀತಿಯಲ್ಲೂ ಇದನ್ನು ಮಾಡಿಲ್ಲ. ಅರ್ಥಿಕ ಮಂತ್ರಿಯವರು ಮುಂಬಾಯಿಗೆ ಹೋದರೋ ಏನೊ, ಗೊತ್ತಿಲ್ಲ. ೧೦ ಸಾವಿರ ಅರ್ಜಿಗಳು ಹಾಗೆಯೇ ಬಿದ್ದಿವೆ. ಸುಮಾರು ಒಂದು ಕೋಟಿ ರೂಪಾಯಿ ಬ್ಯಾಂಕಿನಲ್ಲಿ ಇಟ್ಟುಕೊಂಡರ

ಕೊಟ್ಟಿದ್ದಾರೆ. ಈ ಪರಿಸ್ಥಿತಿಯಲ್ಲಿ ಅರ್ಧ ಕಟ್ಟಿದಂತಹ ಮನೆಗಳು ಬೀಳುವ ಪರಿಸ್ಥಿತಿಯಲ್ಲಿವೆ. ಈ ರೀತಿ ಮಾಡಿದರೆ ನಮ್ಮ ಹರಿಜನರ ಉದ್ಧಾರವಾಗುವುದಾದರೂ ಹೇಗೆ? ಆದ್ದರಿಂದ ಇನ್ನು ಮೂರುವರೆ ಕೋಟಿ ತಂದು ಅರ್ಧ ಮನೆ ಕಟ್ಟಿದವರಿಗೆ ಕೊಡುತ್ತೀರಾ ಎಂದು ಕೇಳುತ್ತೇನೆ. ಈ ರೀತಿಯ ಅನ್ಯಾಯವನ್ನು ಹರಿಜನರಿಗೆ ಮಾಡಬೇಡಿ.

ಡಿಮ್ಯಾಂಡ್ ನಂ. ೯ ರಲ್ಲಿ ಕಂಟಿನ್‌ಜೆನ್ಸಿ ಫಂಡಿನಿಂದ ಇಲೆಕ್ಷನ್ ಫಂಡಿಗಾಗಿ ಮತ್ತು ಬೇರೆ ಕಾರ್ಯ ಗಳಿಗೆ ೧೫ ಲಕ್ಷ ದುಡ್ಡು ತೆಗೆದಿಟ್ಟಿದ್ದಾರೆ. ಡಿಮ್ಯಾಂಡ್ ೪೪ ರಲ್ಲಿ ಅನೇಕ ಅಡ್ಜಸ್ಟ್‌ಮೆಂಟ್‌ಗಳನ್ನು ಮಾಡಿದ್ದಾರೆ. ಇದು ಏಕೆ ಮಾಡುತ್ತಿದ್ದಾರೆಂದು ನನಗೆ ಅರ್ಥವಾಗುತ್ತಿಲ್ಲ.

ಇನ್ನು ಈ ಸಹಕಾರ ಚಳುವಳಿಯು ನಮ್ಮಲ್ಲಿ ನಡೆಯುತ್ತಿದೆ. ಸಹಕಾರ ಮಂತ್ರಿಯವರು ಸಹಕಾರ ಸಂಸ್ಥೆಗಳಲ್ಲಿ ಎರಡು ಪರ್‌ಸೆಂಟ್ ಹರಿಜನ-ಗಿರಿಜನ ಪ್ರತಿನಿಧಿಗಳನ್ನು ಇಡುತ್ತೇವೆಂದು ಹೇಳಿದ್ದರು. ಆದರೆ ಆದರೆ ಅವರು ತಂದಂತಹ ಅಮೆಂಡ್‌ಮೆಂಟನ್ನು ನೋಡಿದಾಗ, ಅದರಲ್ಲಿ ಯಾವ ರೀತಿಯ ಪ್ರಾತಿನಿಧ್ಯಕ್ಕೂ ಪ್ರಾವಜನೇ ಇಲ್ಲ. ಇದು ಬಹಳ ಅನ್ಯಾಯವಾದಂತಹ ಕೆಲಸವಾಗಿದೆ. ಇವತ್ತು ಎಕ್ಸ್‌ಪೋಗೆ, ಮತ್ತು ಇತರ ಬೇರೆ ಕಾರ್ಯಗಳಿಗೆ ಲಕ್ಷಗಟ್ಟಲೆ ಹಣವನ್ನು ಖರ್ಚು ಮಾಡುತ್ತಿದ್ದೀರಿ. ಆದರೆ ಹರಿಜನರಿಗೆ ಯಾವ ಹೆಚ್ಚಿನ ಹಣವನ್ನು ಖರ್ಚು ಮಾಡುತ್ತಿಲ್ಲ. ಈ ಫಂಡನ್ನು ಹರಿಜನರಿಗೆ ಏಕೆ ಉಪಯೋಗಿಸಬಾರದು? ಸರ್ಕಾರ ಇವತ್ತು ಖಜಾನೆಯ ಹಣವನ್ನು ಕಳ್ಳರ ಹಾಗೆ ಲೂಟಿ ಮಾಡುತ್ತಿದೆ. ಇದನ್ನು ಬಹಳ ದಿವಸ ಮಾಡಿದರೆ, ನಾವು ಸುಮ್ಮನೆ ಇರುವುದಿಲ್ಲ. ಇದಕ್ಕೆ ಉಗ್ರವಾದ ಪ್ರತಿಭಟನೆಯನ್ನು ಮಾಡುವುದಲ್ಲದೆ. ಮೈಸೂರು ಇಡೀ ರಾಜ್ಯದಲ್ಲಿ ಅಲ್ಲದೆ ಇಡೀ ಭಾರತದಲ್ಲೇ ರಾಜ್ಯಭಾರವನ್ನು ಹರಿಜನರೇ ನೋಡುವಂತೆ ಮಾಡುತೇವೆ. ಹರಿಜನ-ಗಿರಿಜನರಿಗೆ ನೀವು ಏನೂ ಸಹಾನುಭೂತಿಯನ್ನು ತೋರಿಸುತ್ತಿಲ್ಲ. ಮಾನ್ಯ ರಾಮಕೃಷ್ಣ ಹೆಗಡೆಯವರು ಮುಂದಾದರೂ ಇವರಿಗೆ ಅನುಕೂಲ ಮಾಡಿ ಕೊಡಲಿ ಎಂದು ಹೇಳಿ ಅಧ್ಯಕ್ಷರು ಪದೇ ಪದೇ ಬೆಲ್ ಹೊಡೆಯುವುದರಿಂದ, ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಸಿ ಎಂ. ಎಸ್. ಶಾಸ್ತ್ರಿ. (ಚಿಕ್ಕಮಗಳೂರು) :—ಸನ್ಮಾನ್ಯ ಅಧ್ಯಕ್ಷರೇ ಈಗ ಈ ಸಭೆಯ ಮುಂದಿರುವ ಸಪ್ಲಿಮೆಂಟರಿ ಬಡ್ಜೆಟ್ ಎಸ್ಟಿಮೇಟಿನ ಮೇಲೆ ಮಾತನಾಡುತ್ತಾ, ನಾನು ಒಂದೆರಡು ವಿಷಯಗಳನ್ನು ಹೇಳಬಯಸುತ್ತೇನೆ. ಇದರಲ್ಲಿ ಡಿಮ್ಯಾಂಡ್ ನಂಬರ್ ೯ ರಲ್ಲಿ ಮತದಾರರ ಪಟ್ಟಿಗಳನ್ನು ತಯಾರುಮಾಡುವುದಕ್ಕೋಸ್ಕರವಾಗಿ ಇಟ್ಟಿರತಕ್ಕಂಥ ಖರ್ಚು ೧೨ ಲಕ್ಷ ರೂಪಾಯಿಗಳು ಏನಿದೆ ಅದನ್ನು ಸ್ವಲ್ಪ ಕಡಿಮೆಮಾಡಿ ೮ ಲಕ್ಷ ರೂಪಾಯಿಗಳಿಗೆ ಇಳಿಸಿದ್ದೇವೆ ಎಂದು ತೋರಿಸಿದ್ದಾರೆ. ಇದರಲ್ಲಿ ಏನಾಗುತ್ತದೆ ಎಂದರೆ ಹಣಮಾತ್ರ ಖರ್ಚಾಗುತ್ತಿದೆಯೇ ಹೊರತು ಮತದಾರ ಪಟ್ಟಿ ಸರಿಯಾದ ರೀತಿಯಲ್ಲಿ ತಯಾರಾಗುತ್ತಿಲ್ಲಎಂದು ನಾನು ಇದನ್ನು ಸಂಬಂಧಪಟ್ಟ ಮಾನ್ಯ ಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ. ಒಂದು ಕೆಲಸವನ್ನು ಮಾತ್ರ ಸರ್ಕಾರದವರು ಬಹಳ ಚೆನ್ನಾಗಿ ಮಾಡುತ್ತಿದ್ದಾರೆ ಅದು ಏನೆಂದರೆ ಡಿಮ್ಯಾಂಡಿನಲ್ಲಿ ಹಣ ಏನಿದೆ ಅದು ಮಾತ್ರ ಖರ್ಚಾಗುತ್ತದೆ ಆದರೆ ವರ್ಷೇ ವರ್ಷೇ ಹಿಂದಿನ ವರ್ಷದ ಪಟ್ಟಿಯನ್ನೇ ಮುಂದಿನ ವರ್ಷಕ್ಕೂ ಪ್ರಿಂಟ್‌ಮಾಡಿಸಿ ಕೊಡುತ್ತಿದ್ದಾರೆ. ಈ ಕೆಲಸ ಆಗಬೇಕಾದರೆ ಮತದಾರರ ಪಟ್ಟಿ ಏನಿದೆ ಅದು ಸರಿಯಾದ ರೀತಿಯಲ್ಲಿ ಆಗಬೇಕು. ಮತದಾರರ ಪಟ್ಟಿಯಿಂದ ಯಾರ ಹೆಸರನ್ನು ತೆಗೆಯ ಬೇಕೋ ಅದನ್ನು ತೆಗೆದು ಯಾರ ಹೆಸರನ್ನು ಸೇರಿಸಬೇಕೋ ಆ ಹೆಸರನ್ನು ಸೇರಿಸಬೇಕು. ಇಲ್ಲದೇ ಹೋದರೆ ಈ ಬಾಬಿಗೆ ಹಣ ಮಾತ್ರ ಖರ್ಚಾಗುತ್ತದೆ. ಸರಿಯಾದ ಮತದಾರರ ಪಟ್ಟಿ ತಯಾರಾಗುವುದಿಲ್ಲ. ಇದು ಬಹಳ ಅನ್ಯಾಯ ಇದನ್ನು ಸರಿಪಡಿಸಬೇಕೆಂದು ನಾನು ಹೇಳುತ್ತೇನೆ.

ಎಕ್ಸ್‌ಪೋ—೭೦ರ ಹಗರಣದ ಬಗ್ಗೆ ಕೆಲವು ವಿಷಯಗಳನ್ನು ಈ ಮನೆಯ ಗಮನಕ್ಕೆ ತರುವುದಕ್ಕೆ ನಾನು ಇಷ್ಟಪಡುತ್ತೇನೆ. ಈ ಎಕ್ಸ್‌ಪೋ ಪ್ರವಾಸಕ್ಕೋಸ್ಕರ ೬-೭ ಲಕ್ಷ ರೂಪಾಯಿಗಳನ್ನು ಬಡ ಬೋರೇಗೌಡನ ಹಣದಿಂದ ಖರ್ಚು ಮಾಡಿದ್ದಾರೆ. ಬಡಬೋರೇಗೌಡನ ಮಕ್ಕಳನ್ನು ಎಷ್ಟು ಜನರನ್ನು ಎಕ್ಸ್‌ಪೋ ಪ್ರದರ್ಶನಕ್ಕೆ ಕಳುಹಿಸಿದ್ದೀರಿ? ಇದು ಜನತಾ ಸರ್ಕಾರ, ಬಡವರನ್ನು ಉದ್ಧಾರ ಮಾಡುತೇವೆ ಎಂದು ಹೇಳತಕ್ಕ ಮಾತು ಹೇಳೀನಿವು ಮಾಡಿರತಕ್ಕ ಕೆಲಸ ಏನು? ಮಂತ್ರಿಗಳ ಮಕ್ಕಳು, ದೊಡ್ಡ ದೊಡ್ಡ ಕಾಂಗ್ರೆಸ್ ಲೀಡರ ಮಕ್ಕಳು, ಎಂ.ಎಲ್.ಎ.ಗಳ ಮಕ್ಕಳು, ಮತ್ತು ಅಧಿಕಾರಿಗಳ ಮಕ್ಕಳನ್ನು ಎಕ್ಸ್‌ಪೋ ಪ್ರದರ್ಶನಕ್ಕೆ ಕಳುಹಿಸಿದ್ದೀರಿ. ಇಷ್ಟು ಹಣವನ್ನು ಖರ್ಚು ಮಾಡುವಾಗ ರೈತನ ಪರಿಸ್ಥಿತಿ ಏನಿದೆ ಎನ್ನುವುನ್ನು ವಿಚಾರ ಮಾಡಿದ್ದೀರಾ ೭ ಲಕ್ಷ ರೂಪಾಯಿಗಳನ್ನು ರೈತನ ಮಕ್ಕಳ ವಿದ್ಯಾಭ್ಯಾಸಕ್ಕೋಸ್ಕರ ಖರ್ಚು ಮಾಡಿದ್ದರೆ ಎಷ್ಟು ಅನುಕೂಲವಾಗುತ್ತಿತ್ತು ಎಂಬುದನ್ನು ಯೋಚನೆಮಾಡದೆಎಕ್ಸ್‌ಪೋ ಪ್ರದರ್ಶನಕ್ಕೆ ನಿಯೋಗಕಳುಹಿಸಿ ಇಡೀ ಮೈಸೂರು ರಾಜ್ಯಕ್ಕೇ, ಇಡೀ ಹಿಂದೂಸ್ಥಾನಕ್ಕೆ ಒಂದು ಕೆಟ್ಟ ಹೆಸರನ್ನು ತಂದಿದ್ದೀರಿ. ಇದರಿಂದ ನಿಮಗೆ ಗೌರವ ಬಂದಿಲ್ಲ. ಎಕ್ಸ್‌ಪೋ ಪ್ರದರ್ಶನಕ್ಕೆ ಕಳುಹಿಸಿದಂತಹವರು

(ಶ್ರೀ ಸಿ, ಎಂ, ಎಸ್. ಶಾಸ್ತ್ರಿ)

ಏನೇನು ಮಾಡಿದ್ದಾರೆ ಎಂಬುದನ್ನು ಹೇಳುವುದಾದರೆ ಎಕ್ಸ್‌ಪೋ ಪ್ರದರ್ಶನಕ್ಕೆ ಹೋಗಿದ್ದವರು ಒಬ್ಬರು ಅಮೆರಿಕಾ ಡಾಲರನ್ನು ಹೊಂದಿದ್ದರು ಎಂಬ ಆಪಾದನೆಯಮೇಲೆ ಅವರನ್ನು ಮದ್ರಾಸಿನಲ್ಲಿ ಪೋಲೀಸ್‌ನವರು ಹಿಡಿದು ಹಾಕಿದರು. ಅವರ ಮೇಲೆ ರಿಮಾರ್ಕ್ಸ್ ಪಾಸು ಮಾಡಿದ್ದಾರೆ. ಮತ್ತು ಜಪಾನಿಗೆ ಹೋದ ಒಬ್ಬರನ್ನು ವಾಪಸ್ಸು ಕಳುಹಿಸಿದ್ದಾರೆ. ಎಕ್ಸ್‌ಪೋ ಪ್ರದರ್ಶನಕ್ಕೆ ಡಿಲಿಗೇಟ್ಸ್‌ಗಳನ್ನು ಕಳುಹಿಸುವುದಕ್ಕೆ ೭ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದು ಹೋಗಲಿ ಆದರೆ ಈ ಪ್ರದರ್ಶನಕ್ಕೆ ಕಳುಹಿಸತಕ್ಕವರನ್ನು ಆಯ್ಕೆ ಮಾಡಿದ ವಿಧಾನ ಸರಿಯಿಲ್ಲ ಎಂದು ರಾಜಕೀಯ ಮುಂದಾಳುಗಳು ಮತ್ತು ಎಲ್ಲರೂಕೂಡ ಹೇಳಿದ್ದಾರೆ. ವಿದ್ಯಾವಂತರು, ವಿದ್ಯಾರ್ಥಿಗಳು ಹೇಳಿದ್ದಾರೆ. ಮತ್ತು ವಿದ್ಯಾರ್ಥಿಗಳು ಹಾಗೂ ಮತ್ತೆ ಕೆಲವರು ಎಕ್ಸ್‌ಪೋ ಪ್ರದರ್ಶನಕ್ಕೆ ನಿಯೋಗವನ್ನು ಕಳುಹಿಸಬೇಡಿ ಎಂದು ಹೇಳಿದರೂ ಕೂಡಸರ್ಕಾರದವರ ನಿಯೋಗವನ್ನು ಜಪಾನಿಗೆ ಕಳುಹಿಸಿ ೭ ಲಕ್ಷ ರೂಪಾಯಿಗಳನ್ನು ಖರ್ಚು ಮಾಡುವುದರ ಜೊತೆಗೆ ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಇದ್ದ ಸೆನೆಟ್ ಹಾಲಿಗೆ ಸರ್ಕಾರದವರು ಬೆಂಕಿ ಹಾಕುವ ಹಾಗೆ ಮಾಡಿದರು ಎಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ನೀವು ಮಾಡಿದ ತಪ್ಪಿಗಾಗಿ ಇಡೀ ಮೈಸೂರು ದೇಶದಲ್ಲಿ ವಿದ್ಯಾರ್ಥಿಗಳ ಹೋರಾಟ ನಡೆಯಿತು. ಇನ್ನುಮುಂದಾದರೂ ಕೂಡ ಇಂಥಾ ಸಂದರ್ಭಗಳು ಬಂದಾಗ ಸರ್ಕಾರದವರು ಮುನ್ನೆಚ್ಚರಿಕೆ ವಹಿಸಬೇಕು ಎಂದು ನಾನು ಹೇಳುತ್ತೇನೆ.

ಈಗ ಸರ್ಕಾರದವರು ಇನ್ನೊಂದು ರೀತಿಯಲ್ಲಿ ಹಣ ಖರ್ಚು ಮಾಡುವುದಕ್ಕೆ ಹೊರಟಿದ್ದಾರೆ ಅದು ಏನೆಂದರೆ ಡಿಮ್ಯಾಂಡ್ ನಂಬರ ೩೮ರಲ್ಲಿ ಖೆಡ್ಡಾಕ್ಕೋಸ್ಕರ ೬,೭೫, ೮೫೬ ರೂಪಾಯಿಗಳನ್ನು ಕೇಳಿದ್ದಾರೆ. ಹಿಂದೆ ಖೆಡ್ಡಾವನ್ನು ನಡೆಸಿದಾಗ ಏನೇನು ಅನಾಹುತವಾಯಿತು ಎಂಬುದನ್ನು ಜ್ಞಾಪಕದಲ್ಲಿ ಇಟ್ಟುಕೊಂಡು ಮುಂದಿನ ಖೆಡ್ಡ ನಡೆಸಬೇಕು. ನಿಜವಾಗಿಯೂ ಹೆಚ್ಚಿನ ಹಣವನ್ನು ಪೋಲು ಮಾಡವುದಕ್ಕೆ ಅವಕಾಶವನ್ನು ಕೊಡದೆ ನ್ಯಾಯವಾದ ರೀತಿಯಲ್ಲಿ ಹಣವನ್ನು ಖರ್ಚುಮಾಡಿ ಖೆಡ್ಡಾವನ್ನು ನಡೆಸಬೇಕು ಎಂದು ನಾನು ಹೇಳುತ್ತೇನೆ.

ಮಿಸಲೇನಿಯಸ್ ಡಿಮ್ಯಾಂಡಿಗೆ ಸಂಬಂಧಪಟ್ಟಹಾಗೆ ಹೇಳುವುದಾದರೆ ನಮ್ಮ ರಾಜ್ಯದಲ್ಲಿ ಲಾ ಅಂಡ ಆರ್ಡರ ಎಷ್ಟರಮಟ್ಟಿಗೆ ಕುಸಿದು ಬಿದ್ದಿದೆ ಎನ್ನುವ ಬಗ್ಗೆ ನಾನು ಹೇಳುತ್ತೇನೆ.

ಚಿಕ್ಕಬಳ್ಳಾಪುರದಲ್ಲಿ ಏನು ದುರ್ಘಟನೆಯು ನಡೆಯಿತು ಅದು ಪ್ರಜಾಪ್ರಭುತ್ವದಲ್ಲಿ ನಡೆಯಕೂಡದಾಗಿತ್ತು. ಅಂಥಾ ಒಂದು ಅನ್ಯಾಯನಡೆದಿದೆ. ಹೆಣ್ಣುಮಕ್ಕಳನ್ನು ಪೋಲೀಸ್ ಪೇದೆತಲೆ ಕೂದಲು ಕತ್ತರಿಸಿ ಬರೀ ಬೆತ್ತಲೆಯಲ್ಲಿ ಮೆರವಣಿಗೆ ಮಾಡಿದಮೇಲೆ ಪ್ರಜಾಪ್ರಭುತ್ವ ಏತಕ್ಕೆ ಇರಬೇಕು? ಇಂಥಾ ಒಂದೂ ಅಕೃತ್ಯನಡೆದ ಮೇಲೆ ಪ್ರಜಾಪ್ರಭುತ್ವದಲ್ಲಿ ಲಾ ಅಂಡ್ ಆರ್ಡರ್ ಇದೆಯೇ ಎಂದು ನಾನು ಹೇಳುತ್ತೇನೆ. ಇಂಥಾ ದುರ್ಘಟನೆಗಳು ದೇಶದಲ್ಲಿ ಎಷ್ಟೋ ಕಡೆಗಳಲ್ಲಿನಡೆಯುತ್ತಿದೆ. ಕೆಲವು ಸಾರ್ವಜನಿಕರ ಗಮನಕ್ಕೆ ಬರುತ್ತಿವೆ. ಕೆಲವು ಸಾರ್ವಜನಿಕರ ಗಮನಕ್ಕೆ ಬರುವುದಿಲ್ಲ.ಇದರ ಬಗ್ಗೆ ಸರ್ಕಾರದವರು ಎಚ್ಚರಿಕೆಯನ್ನು ವಹಿಸದೇ ಹೋದು ದೇಶದಲ್ಲಿ ದೊಡ್ಡ ಕ್ರಾಂತಿಎದ್ದೀತೆಂದು ನಾನು ಸರ್ಕಾರಕ್ಕೆ ಎಚ್ಚರಿಕೆಯನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ. ಚಿಕ್ಕಮಗಳೂರಿನಲ್ಲಿ ನಡೆದಂತಹ ಒಂದುದರ್ಘಟನೆಯ ಬಗ್ಗೆ ನಾನು ಮಾನ್ಯ ಮುಖ್ಯ ಮಂತ್ರಿಗಳ ಗಮನಕ್ಕೆ ತಂದಿದ್ದೇನೆ. ಒಬ್ಬ ವರ್ತಕರನ್ನು ಯಾವುದೇ ಒಂದು ಕಾರಣದಿದ ಅವನನ್ನು ತಪ್ಪಿತಸ್ಥನೆಂದು ಮಾಡಿ ಅವನನ್ನು ಜೀಪಿನಲ್ಲಿ ಕರೆದುಕೊಂಡು ಹೋಗಿ ಮನಸೋ ಇಚ್ಛೆ ಹೊಡೆದು ಒಂದು ಕಡೆ ಬಿಸಾಟು ಹೋಗಿದ್ದಾರೆ. ಒಂದು ಸಂದರ್ಭದಲ್ಲಿ ನಮ್ಮ ಪಕ್ಷದ ತಾಲ್ಲೂಕಬೋರ್ಡ್ ಅಧ್ಯಕ್ಷರು ಒಂದು ಬಹಿರಂಗ ಸಭೆಯ ಮುಂದೆ ಇದ್ದಾಗ ಪೋಲೀಸಿನವರು ಹೋಗಿ ಆ ಸಭೆಯನ್ನು ನಡೆಸಬಾರದು ಎಂದು ಕೆಲವರಿಂದ ಕಲ್ಲು ಹಾಕಿಸಿದರು. ಇಂಥಾ ಕೆಲಸಗಳನ್ನು ಮಾಡುತ್ತಾ ಹೋದರೆ ದೇಶದಲ್ಲಿ ಅನರ್ಥವಾಗುತ್ತದೆ. ಈ ಸಂದರ್ಭದಲ್ಲಿ ನಾನು ಒಂದೂ ಸಲಹೆಯನ್ನು ಮಾಡುತ್ತೇನೆ. ಅದೇನೆಂದರೆ ನಿಮ್ಮ ಮೆಜಾರಿಟಿ ಇದೆ ನಿಮಗೆ ಎಷ್ಟು ದುಡ್ಡು ಬೇಕೊ ಅಷ್ಟು ದುಡ್ಡನ್ನು ನ್ಯಾಯವಾದ ರೀತಿಯಲ್ಲಿ ತೆಗೆದುಕೊಳ್ಳಿ. ಆದರೆ ಈ ಡಿಮ್ಯಾಂಡುಗಳ ಮುಖಾಂತರ ಹಣವನ್ನು ಕೇಳುವ ಸೋಗಿನಲ್ಲಿ ದೇಶದ ಹಣವನ್ನು ದುರ್ವಿನಿಯೋಗ ಮಾಡುವುದನ್ನು ನಾನು ಒಪ್ಪುವುದಿಲ್ಲ. ಈ ಡಿಮ್ಯಾಂಡುಗಳನ್ನು ನಾನು ವಿರೋಧಿಸುತ್ತೇನೆ.

ಮಾನ್ಯ ಮುಖ್ಯ ಮಂತ್ರಿಗಳ ಗಮನಕ್ಕೆ ನಾನು ಒಂದು ವಿಷಯವನ್ನು ತರಬಯಸುತ್ತೇನೆ. ಅದರೆ. ಏನೆಂದರ ಪತ್ರಿಕೆಗಳೂ ಏನಿವೆ ಆ ಪತ್ರಿಕೆಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕು ಎಂದು ನಾನು ಬರೆದಿದ್ದೇನೆ ರಣಭೇರಿ ಎನ್ನುವ ಒಂದು ಪತ್ರಿಕೆಯಲ್ಲಿ ಮುಖ್ಯ ಮಂತ್ರಿ ವೀರೇಂದ್ರಪಾಟೀಲ್, ಸಚಿವ ರಾಮಕೃಷ್ಣ ಹೆಗಡೆಯವರು ನಗರದ ಕೋಟ್ಯಾಧೀಶ್ವರ ಬೀರು, ಬ್ರಾಂದಿ, ವಿಸ್ಕಿ ತಯಾರಕರ ಜೋಬಿನಲ್ಲಿ ಎಂದು ಬರೆದಿದ್ದಾರೆ. ಇದು ನಿಜವಾದರೆ ಒಪ್ಪಿಕೊಳ್ಳಿ ಇಲ್ಲವಾದರೆ ಪತ್ರಿಕೆಯ ಮೇಲೆ ಕ್ರಮ ತೆಗೆದುಕೊಳ್ಳಿ ವರಿಗೆ ಸರಿಯಾದ ರೀತಿಯಲ್ಲಿ ಪ್ರಾಯಶ್ಚಿತ್ತ ಮಾಡಬೇಕು, ಇಲ್ಲದಿದ್ದರೆ ಅವರು ಬರೆದಿದ

ತಕ್ಕದ್ದು ಸರಿ ಎಂದರೆ ಅದನ್ನು ಒಪ್ಪಿಕೊಳ್ಳಿ, ಎಂದು ಪ್ರಾರ್ಥನೆ ಮಾಡಿಕೊಂಡು ಅಧ್ಯಕ್ಷರು ಈಗಾಗಲೇ ಬೆಲ್ಲು ಹೊಡೆಯುತ್ತಿದ್ದಾರೆ. ಆದ್ದರಿಂದ ಇಷ್ಟಕ್ಕೇ ನನ್ನ ಭಾಷಣವನ್ನು ನಿಲ್ಲಿಸಿ ನನಗೆ ಎರಡು ನಿಮಿಷ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನು ಮುಗಿಸುತ್ತೇನೆ.

SRI D. DEVARAJ URS (Hunsur) : Sir, I Just want to bring to the notice of this Hon. House and the Government the anomalous orders Government now and then make. I am now speaking with particular reference to the Order made by the Government constituting a Consultative Committees for Medium and Minor Irrigation. These Committees ought to be constituted in accordance with the provisions of the Irrigation Act in each Taluk. There is a provision of the Act relating to these committees and Government have to honour it. Accordingly, on 31st March 1970 they have passed an Order constituting this Consultative Committee for Hunsur Taluk. Likewise in Mysore District, I am given to understand, Committees have been formed in all the Taluks. According to this Order of 31st March 1970, Government has been pleased to reconstitute the said Consultative Committee for the period commencing from 15th August 1970 to 15th August 1973 for a period of three years with the following officials and non-officials. I read only the relevent names of non-officials, leaving the officials. They are : Sriyuths : (1) C.L. Shivanna president of the Taluk Development Board, (2) B. L. Mari Gowda, Agriculturist, (3) D. Kariyappa Gowda, Taluk Development Board, Hunsur, (4) D. Devaraj Urs, (5) Thimmappa Gowda, Chingunda. After some months what happened to this Government or the concerned Minister or the concerned Department ? This Government Order was changed. The principal reason, according to my comprehension, to change this Order and pass another Order is purely political–Political in the sense that this Government thought that they should put their henchmen who, perhaps, are going to support them and their party. So, what they have done subsequently is, again on 21st July of the same year 1970, they passed another order in modification of the previous Order, wherein they have stated: In partial modification of the Government Order of 31st March 1970, Government is Pleased to substitute the following non-officials in place of the names mentioned against each in the Consultstive Committee for Hunsur Taluk for the period from 1st April 1970. The first Order is dated 31st March 1970 and in that Order the Committee is constituted from 15th August 1970. The second Order is dated 21st July 1970 and it states that the Committee is constituted from 1sth April 1970. What are the names affected ? The substitution is as follows: (1) Sri Hutche Gowda, Taluk Development Board, Hunsur, *vice* Sri D. Kariyappa Gowda, (2) Sri Siddaveerappa, another Taluk Board member, *vice* Sri Thimmappa Gowda. It is something like transfers of officers. Fortunately or unfortunately, I was not displaced from the Committee;

(**Sri Devaraj Urs** (Hunsur) :—

Having once constituted the Committee for a period of three years what made this Government to change this Order purely from the point of view of putting their own men that too only these two persons ? I fail to understand. I need not have taken serious notice of it had it not been for the fact that this has been done only with reference to my constituency, namely, Hunsur Taluk. It has been done throughout Mysore District in every Taluk. If it is like that in the entire Mysore State, it is still worse.

Here is Hon. Chief Minister. I am sorry the Hon. Minister for public works is not here. perhaps the Minister for public works does not know what a Government Order is. I wonder whether he can understand the implications of this Order. He is well-known for putting his signature. He is satisfied if he is given a car with flag, monthly salary and house. He can look after his industrial estate and his lands. He knows nothing of the P. W. D. and what is happening in the Department and in the State. They have removed certain names from these committees and put the names of their supporters and people belonging to their party. They have replaced the names of those who have come over to us and who are supporting our organisation. Is this the way the Government should function ? Is it in good taste? What does it show ? Once this Committee is constituted for a period of three years, I wonder what right have they to change those names, unless a person is dead or ill or something else has happened to him. Those gentlemen are quite alive and are in flesh and blood. Is it a crime to change their political party or political opinions and go to some other party ? Why should they be changed ? If this is the way Government were to function, I am afraid we will very soon come to a position where we may have to agitate openly against the Government and its maladministration. That is all what I wanted to say. Thank you for the time you were pleased to give.

ಶ್ರೀ ವಿ. ಎಲ್. ಶಿವಪ್ಪ : (ತಿಪಟೂರು):—ಮಾನ್ಯ ಅಧ್ಯಕ್ಷರೇ, ನಮ್ಮ ಮುಂದೆ ಮಂಡಿಸಿರತಕ್ಕಂಥ ಸಪ್ಲಿಮೆಂಟರಿ ಎಸ್ಟಿಮೇಟಿನಲ್ಲಿರುವ ೨೩ ಮತ್ತು ೪೪ನೇ ಡಿಮ್ಯಾಂಡ್‌ಗಳೆರಡನ್ನು ಸಹ ಸೇರಿಸಿ ನಾನು ವಿರೋಧ ಮಾಡುತ್ತಾ ಆ ಬಗ್ಗೆ ಕೆಲವು ವಿಚಾರಗಳನ್ನು ಹೇಳುತ್ತೇನೆ. ಜನರು ಸರ್ಕಾರಕ್ಕೆ ಕೊಡತಕ್ಕಂಥ ದುಡ್ಡು ಏನಿದೆ ಅದು ಸರಿಯಾದ ರೀತಿಯಲ್ಲಿ ಖರ್ಚಾಗಬೇಕು. ಹಣವನ್ನು ಸರಿಯಾದ ರೀತಿಯಲ್ಲಿ ಸರ್ಕಾರದವರು ಖರ್ಚು ಮಾಡುತ್ತಾರೆಂಬ ದೃಷ್ಟಿಯಿಂದ ನಾವುಗಳು ನಿಮಗೆ ಅಧಿಕಾರ ಕೊಟ್ಟಿರುತ್ತೇವೆ. ಆದರೆ ಅಧಿಕಾರ ಇದೆಯೆಂಬ ಕಾರಣದಿಂದ ಸರ್ಕಾರದವರು ತಮಗೆ ಇಷ್ಟಬಂದಂತೆ ಯೋಗ್ಯವಲ್ಲದ ರೀತಿಯಲ್ಲಿ ಖರ್ಚು ಮಾಡುವುದು ಸರಿಯಲ್ಲ. ಇವತ್ತು ಲಕ್ಷಾಂತರ ಜನರು ಕಷ್ಟದಿಂದ ಜೀವನ ಮಾಡುತ್ತಿರುವಾಗ ಸರ್ಕಾರದವರು ವಿನಾಕಾರಣ ವ್ಯರ್ಥವಾಗಿ ಹಣ ಖರ್ಚು ಮಾಡುತ್ತಿರುವುದು ಸರಿಯೇ ಎಂಬುದನ್ನು ಸರ್ಕಾರದವರೆ ವಿಚಾರ ಮಾಡಬೇಕು. ಮತ್ತು ಈಗ ಕೇಳಿರತಕ್ಕಂಥ ಹಣವನ್ನು ಖರ್ಚು ಮಾಡಲು ನಾವು ಒಪ್ಪಿಗೆ ಕೊಡುವುದು ಸರಿಯೇ ಎಂಬುದನ್ನು ಸಹ ನಾವು ವಿಚಾರ ಮಾಡಬೇಕಾಗಿದೆ. ಸುಮಾರು ೫೦ ಪ್ರೈಮರಿ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್‌ಗಳಿಗೆ ೧೨,೧೫,೦೦೦ ಸಾವಿರ ರೂಪಾಯಿಗಳನ್ನು ಹಂಚಬೇಕೆಂದು ಮಾಡಿದ್ದೀರಿ. ತಮಗೆ ಎಲ್ಲಿ ಆಪ್ತರು ಮತ್ತು ಸಂಬಂಧಿಗಳು ಇದ್ದಾರೋ ಅಂತಹ ಬ್ಯಾಂಕ್‌ಗಳಿಗೆ ಮಾತ್ರ ಈ ಹಣವನ್ನು ಹಂಚಿಕೊಡುವುದಕ್ಕೆ ಹೊರಟ್ಟಿದ್ದೀರಿ. ಹಣ ಕೊಡುವುದಾದರೆ ರಾಜ್ಯದಲ್ಲಿರತಕ್ಕಂತಹ ಎಲ್ಲ ಪ್ರೈಮರಿ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್‌ಗಳಿಗೂ ಕೂಡ ಕೊಡಬೇಕು ಈ ೫೦

ಬ್ಯಾಂಕ್‌ಗಳಿಗೆ ಮಾತ್ರ ಕೊಡುತ್ತಿರುವುದಕ್ಕೆ ಕಾರಣವೇನು ? ಈ ಹಣವನ್ನು ರಿಜರ್ವ್ ಬ್ಯಾಂಕ್‌ನಿಂದ ಪಡೆದು ಕೊಡುತ್ತಿದ್ದೀರಿ. ಈ ಹಣಕ್ಕೆ ಮೊದಲ ಎರಡು ವರ್ಷ ಬಡ್ಡಿ ಇಲ್ಲ, ಮೂರನೆಯ ವರ್ಷ ಶೇಕಡ ೨ರಂತೆ ಬಡ್ಡಿ ಇದೆ. ಇಂತಹ ಒಂದು ಅನುಕೂಲವನ್ನು ಚೆನ್ನಾಗಿ ಕೆಲಸ ಮಾಡುತ್ತಿರುವ ಎಲ್ಲಾ ಬ್ಯಾಂಕ್‌ಗಳಿಗೂ ಮಾಡಿಕೊಡಬೇಕು ಇದರ ಜೊತೆಗೆ ಹೊಸದಾಗಿ ಮೂರು ಸೊಸೈಟಿಗಳು ಪ್ರಾರಂಭವಾಗುವುದಕ್ಕೆ ಅನುಮತಿ ಕೊಟ್ಟು ಆ ಸೊಸೈಟಿಗಳಿಗೆ ಲಕ್ಷಾಂತರ ರೂಪಾಯಿಗಳನ್ನು ನಾನಾ ರೂಪದಲ್ಲಿ ದಗಿಸುವುದಕ್ಕೆ ಏರ್ಪಾಡು ಮಾಡಿದ್ದೀರಿ. ಈಗ ಯಾವ ರಾಜಕೀಯ ಕಾರಣಕ್ಕಾಗಿ ಇವರನ್ನು ಸೇರಿಸಿ ಕಮಿಟಿ ಪ್ರೆಸಿಡೆಂಟರನ್ನಾಗಿ ಮಾಡಲು ಇಲ್ಲಿನ ಜನರನ್ನು ತಯಾರು ಮಾಡುತ್ತಿದ್ದಾರೆ? ಇದೇಕೆ ಹೀಗೆ ಮಾಡುತ್ತಾರೆ ಎನ್ನುವುದು ನಮಗೆ ಅರ್ಥವಾಗುತ್ತಿಲ್ಲ. ಕೋಅಪರೇಷನ್ ತತ್ವವನ್ನು ಯಶಸ್ವಿಯಾಗಿ ತರಬೇಕಾದರೆ ಇದರಲ್ಲಿ ಆಸಕ್ತಿಯುಳ್ಳವರು ಇದ್ದರೆ ಇವು ಚೆನ್ನಾಗಿ ನಡೆಯುತ್ತವೆ ನಮಗೆಲಾ ಚೆನ್ನಾಗಿ ಗೊತ್ತಿದೆ ಇದುವರೆಗೂ ಸಹಕಾರ ಈ ಶಾಖೆಯಲ್ಲಿ ರಿಜಿಸ್ಟ್ರಾರರವರಾಗಿದ್ದು ಶ್ರೀ ನಾಡಗೌಡರ ಬೆಂಬಲಿಗರಾಗಿದ್ದ ಶ್ರೀಮಾನ್ ಜಮಖಂಡಿಮಠರವರು ಯಾವ ರೀತಿ ಕೆಲಸಮಾಡಿದ್ದಾರೆನ್ನುವುದು ಎಲ್ಲ ಜನರಿಗೂ ಚೆನ್ನಾಗಿ ಗೊತ್ತಿದೆ. ಉದಾಹರಣೆಯಾಗಿ ಹೇಳಬೇಕಾದರೆ ಸುಮಾರು ಎಂಟು ಕೋಟಿ ರೂಪಾಯಿಗಳ ವ್ಯವಹಾರ ಮಾಡುತ್ತಿರುವ ರೆಗ್ಯುಲೇಟೆಡ್ ಕಮಿಟಿ ತಿಪಟೂರಿನಲ್ಲಿದೆ. ಇಲ್ಲಿಗೆ ಇದುವರೆಗು ಸರಿಯಾಗಿ ಕೆಲಸ ಮಾಡಲು ಒಬ್ಬರು ಸೆಕ್ರಟರಿಯನ್ನು ಹಾಕಲಿಲ್ಲ. ಅನೇಕಸಾರಿ ಇದರ ಬಗ್ಗೆ ನಾನೂಕೂಡ ಸರಕಾರಕ್ಕೆ ಮನವಿಗಳನ್ನು ಕೊಟ್ಟಿದ್ದಾಯಿತು. ಅಲ್ಲದೆ ನಾನು ಮುಖ್ಯ ಮಂತ್ರಿಗಳನ್ನು ಕಂಡು ಇಲ್ಲಿಗೆ ಬೇಗನೆ ಒಬ್ಬರು ಸೆಕ್ರಟರಿಗಳನ್ನು ಹಾಕಬೇಕೆಂದು ಒತ್ತಾಯಮಾಡಿ ಬಂದಾಗ ಹಾಸನದಲ್ಲಿದ್ದವರನ್ನು ಇಲ್ಲಿಗೆ ಪೋಸ್ಟ್ ಮಾಡಬೇಕೆಂದು ಮಾಡಿದರು. ಹಿಂದೆ ನಾಲ್ಕೂವರೆ ವರ್ಷಗಳ ಕಾಲ ನಮ್ಮ ತಿಪಟೂರಿನಲ್ಲಿದ್ದವರೇ ಹಾಸನದಲ್ಲಿದ್ದವರು. ಇವರಿಂದ ಇಲ್ಲದ ಕಷ್ಟಗಳು ಜನರಿಗೆ ಆಗುತ್ತಿತ್ತು ಇವರ ಹೆಸರು ಶ್ರೀ ಜಗದೀಶ್ ಎಂದು. ಇವರನ್ನೇ ಪುನಃ ಇಲ್ಲಿಗೆ ಪೋಸ್ಟ್ ಮಾಡಿದರೆ ಇಲ್ಲಿನ ವ್ಯವಹಾರಗಳು ಸರಿಯಾಗಿ ನಡೆಯುತ್ತವೆಯೋ ? ನಾವೆಲ್ಲ ಸರಕಾರದ ಕಡೆಗೆ ಇವರನ್ನು ಇಲ್ಲಿಂದ ಬೇಗನೆ ವರ್ಗ ಮಾಡಬೇಕೆಂದು ಹೇಳಿ ಒತ್ತಾಯ ತಂದಿದ್ದೆವು. ಇವರಿಂದ ಇಲ್ಲಿನ ಜನಕ್ಕೆ ಯಾವ ಉಪಯೋಗವೂ ಇಲ್ಲ. ಇವರಿಂದ ನಿಜವಾಗಿಯೂ ಇಲ್ಲಿನ ಜನ ಉಳಿಯುವುದಕ್ಕಾಗುವುದಿಲ್ಲ. ಇವರು ಮಾಡಿರುವ ತಪ್ಪುಗಳು ಹಾಗೂ ವ್ಯವಹಾರಗಳನ್ನು ಸರಿಪಡಿಸಬೇಕಾದರೆ ಮುಂದಿನ ಜನ್ಮ ಬಂದರೂ ಕೂಡ ಬಗೆಹರಿಸಲು ಆಗುವುದಿಲ್ಲ. ಇಂತಹ ವ್ಯವಹಾರಗಳನ್ನು ಮಾಡುವ ಮತ್ತು ನೀತಿ ತಪ್ಪುವ ಜನ ಇವರು ಎಂದು ಇಲ್ಲಿ ಹೇಳುತ್ತಿದ್ದಾರೆ. ಇವರಿಂದ ಸಹಕಾರದ ನೀತಿ ಉಳಿಯುತ್ತದೆಯೇ? ಅಲ್ಪಸ್ವಲ್ಪ ವ್ಯತ್ಯಾಸ ಇದರೆ ಇದನ್ನು ಸರಿ ಮಾಡಬಹುದು.

7-30 P.M.

ಶ್ರೀ ರಾಮಕೃಷ್ಣ ಹೆಗಡೆ :—ಶ್ರೀ ಜಗದೀಶ್ ಎನ್ನುವವರನ್ನು ಇಲ್ಲಿಗೆ ಪೋಸ್ಟುಮಾಡಿಲ್ಲ. ಬೇರೆಯವರನ್ನು ಪೋಸ್ಟು ಮಾಡಬೇಕೆಂದು ಆರ್ಡರು ಮಾಡಲಾಗಿದೆ.

ಶ್ರೀ ವಿ. ಎಲ್. ಶಿವಪ್ಪ:—ಬಹಳ ಸಂತೋಷ. ಇವರ ಬಗ್ಗೆ ಒಂದು ಪ್ರಪೋಸಲ್ಲು ಶ್ರೀ ಜಮಖಂಡಿ ಮಠರವರು ಇದ್ದಾಗ ಇತ್ತು ಎಂದು ಕೇಳಿದ್ದೆವು ಮತ್ತು ಇವರನ್ನೇ ಇಲ್ಲಿಗೆ ಪೋಸ್ಟು ಮಾಡುತ್ತಾರೆಂದೂ ತಿಳಿದಿತ್ತು ಇದಕ್ಕಾಗಿ ಇಲ್ಲಿ ಹೇಳಬೇಕಾಯಿತು. ಮಾನ್ಯ ಮಂತ್ರಿಗಳು ಇವರನ್ನು ಹಾಕುವುದಿಲ್ಲ ಎಂದು ಹೇಳಿದುದನ್ನು ಕೇಳಿ ನಮಗೆ ಬಹಳ ಸಂತೋಷವಾಗಿದೆ. ಇವರಿರುವವರೆಗೂ ಇಲ್ಲಿ ಯಾವ ನ್ಯಾಯವು ಹಾಗೂ ನೀತಿಯೂ ಉಳಿದಿಲ್ಲ.

ಇನ್ನು ಡಿಮ್ಯಾಂಡು ೪೮ ರಲ್ಲಿ ಬಿಲ್ಡಿಂಗುಗಳ ಬಗ್ಗೆ ಹಣ ಖರ್ಚು ಮಾಡಿರುವುದರ ಬಗ್ಗೆ ಹಣ ಕೇಳುತ್ತಿದ್ದಾರೆ ಇದೇ ಸಂದರ್ಭದಲ್ಲಿ ಒಂದು ವಿಚಾರ ಇಲ್ಲಿ ತರಬೇಕಾಗಿದೆ. ನಮ್ಮ ತಾಲ್ಲೂಕು ಹಾಗೂ ಪಂಚಾಯತಿಯಲ್ಲಿರುವ ಚೇರ್ಮನ್ನರವರು ಎರಡು ಸೈಟುಗಳನ್ನು ಸರಕಾರಕ್ಕೆ ಕೊಟ್ಟರು. ಇದರಲ್ಲಿ ಒಂದನ್ನು ವೆಟರ್ನರಿ ಡಾಕ್ಟರಿಗಾಗಿ ಬಿಲ್ಡಿಂಗು ಕಟ್ಟಬೇಕು ಮತ್ತು ಇನ್ನೊಂದು ರೆವಿನ್ಯೂ ಇಲಾಖೆಯವರ ಬಿಲ್ಡಿಂಗಿಗಾಗಿ ಕಟ್ಟಬೇಕು ಎಂದು ಮಾಡಲಾಗಿತ್ತು ಮತ್ತು ಇದಕ್ಕಾಗಿ ದುಡ್ಡು ಕೂಡ ಸರಕಾರದಿಂದ ಮಂಜೂರಾಗಿತ್ತು. ಇದು ಫಾರೆಸ್ಟ್ ಇಲಾಖೆಗೆ ಸೇರಿದ ಪ್ರದೇಶವಾಗಿರುವುದರಿಂದ ಇದರಲ್ಲಿ ಮುಂದೆ ತೊಂದರೆಬರಹುದು ಎಂದು ಇದರ ಬಗ್ಗೆ ಇಲ್ಲಿನ ಡೆಪ್ಯುಟಿ ಕಮಿಷನರು ವಿಚಾರ ಮಾಡಿ ಆರ್ಡರು ಮಾಡಬೇಕೆಂದು ಕೇಳಿದಾಗ ಡೆಪ್ಯುಟಿ ಕಮಿಷನರ್‌ರವರು ನಾನೇನೂ ಹೇಳುವುದಕ್ಕಾಗುವುದಿಲ್ಲ ಎಂದು ಹೇಳಿದರು. ಪಿ. ಡಬ್ಲ್ಯು. ಡಿ. ಇಲಾಖೆಯ ಎಕ್ಸಿಕ್ಯುಟಿವ್ ಇಂಜನಿಯರರವರೇ ಸರಿಯಾಗಿ ವಿಚಾರ ಮಾಡಬೇಕೆಂದೂ ತಿಳಿಸಿದರು. ಕಟ್ಟಡಗಳನ್ನು ಕಟ್ಟುವ ಕೆಲಸಪ್ರಾರಂಭ ವಾದಮೇಲೆ ಇದರ ಬಗ್ಗೆ ಇಲ್ಲಿನ ಜನರಿಂದ

(ಶ್ರೀ ವಿ. ಎಲ್. ಶಿವಪ್ಪ)

ಒತ್ತಾಯ ಬಂದಮೇಲೆ ಮುಖ್ಯ ಮಂತ್ರಿಗಳ ಪ್ರೈವೇಟು ಸೆಕ್ರಟರಿಗಳು ಒಂದು ಫೋನ್ ಮೆಸೇಜನ್ನು ಇಲ್ಲಿನ ಡೆಪ್ಯುಟಿ ಕಮಿಷನರಿಗೆ ಕಳುಹಿಸಿ ಈ ಕೆಲಸವನ್ನು ತಡೆಯಬೇಕೆಂದು ಸೂಚನೆ ಕೊಟ್ಟು ಕಳುಹಿಸಿದ್ದಾರೆ. ಮುಖ್ಯ ಮಂತ್ರಿಗಳ ಪ್ರೈವೇಟು ಸೆಕ್ರಟರಿಗಳು ಡೈರೆಕ್ಷನ್ ಕೊಟ್ಟಿದ್ದಾರೆ ನಾವೇನೂ ಮಾಡುವಂತಿಲ್ಲ ಎಂದು ಡೆಪ್ಯುಟಿ ಕಮಿಷನರ್‌ರವರು ಹೇಳಿದರು. ಸರಕಾರದ ಪಿ. ಡಬ್ಲ್ಯು. ಡಿ. ಇಲಾಖೆಯಲ್ಲಿ ಎಂದೂ ಹೀಗೆ ನಡೆದಿಲ್ಲ, ಸರಕಾರದ ಆಡಳಿತ ಒಬ್ಬರು ಪ್ರೈವೇಟು ಸೆಕ್ರಟರಿಗಳಿಂದ ನಡೆಯುತ್ತದೆ ಎಂದರೆ, ಸರಕಾರದಲ್ಲಿ ಯಾವ ನೀತಿ ನಿಯಮಗಳೂ ಇಲ್ಲವೇ ಎಂದು ನಾನು ಇಲ್ಲಿ ಕೇಳಬೇಕಾಗಿದೆ. ನಿಜವಾಗಿಯೂ ಇದು ಸರಕಾರದ ನೀತಿಯೇ? ಇದಕ್ಕೇನೂ ಒಂದು ಇತಿ ಮಿತಿ ಇರಬೇಡವೇ? ಇದನ್ನು ನೀವಾದರೂ ಈಗ ಯೋಚನೆ ಮಾಡುತ್ತೀರಾ? ಇಂದು ನಿಮ್ಮ ರಾಜ್ಯದ ಆಡಳಿತಕ್ಕಾಗಿ ಸುಮಾರು ೨೩೫ ಕೋಟಿ ರೂಪಾಯಿಗಳಷ್ಟು ಖರ್ಚು ಮಾಡುತ್ತಿರುವ ನಿಮ್ಮಲ್ಲಿ ಯೋಗ್ಯರಾದ ಜನರು ಇರಲಿಲ್ಲವೇ? ನಿಮ್ಮ ಆಡಳಿತವನ್ನು ರಕ್ಷಣೆ ಮಾಡಿಕೊಳ್ಳುತ್ತಾ ಹೋದರೆ ಇದು ಬಹು ಗಂಭೀರವಾದ ಮಾತು. ನಮ್ಮ ದೇಶದ ಜನರ ನಂಬಿಕೆಯನ್ನು ಪಡೆದು ಆಡಳಿತ ನಡೆಸಲು ಬಂದಿರುವ ಇಂತಹ ಮುಖ್ಯ ಮಂತ್ರಿಗಳು ನಮ್ಮ ದೇಶದಲ್ಲಿ ಇನ್ನೆಂದಿಗೂ ಬರುವುದಿಲ್ಲ. ನಿಮ್ಮ ಹಿನ್ನೆಲೆಯನ್ನು ನೋಡಿದರೆ ಶಿವ ಶಿವಾ, ಇನ್ನು ಏಸು ಜನ್ಮಗಳು ಎತ್ತಿ ಬಂದರೂ ಇಂತಹ ಜನ ಬರುವುದಿಲ್ಲ, ನೀವು ಮಾಡುತ್ತಿರುವ ಕೆಲಸಗಳು ನಿಮ್ಮ ಮನಸ್ಸಾಕ್ಷಿಯಾಗಿ ಮಾಡುತ್ತಿದ್ದೀರಾ ಎನ್ನುವುದನ್ನು ನೀವೇ ನೋಡಿಕೊಳ್ಳಬೇಕು. ಆಡಳಿತ ನಡೆಸಲು ನಿಮಗೆ ರಕ್ಷಣೆ ಇದೆ ಎಂದು ನಿಮಗೆ ಜನ ಕೊಡತಕ್ಕ ಹಣವನ್ನು ದುರುಪಯೋಗವಾಗಲು ಅವಕಾಶ ಕೊಡಬಾರದು. ನಿಮಗೆ ಕೊಟ್ಟಿರುವ ಹಣವನ್ನು ಸದುಪಯೋಗವಾಗಿ ಖರ್ಚು ಮಾಡಬೇಕು ಎಂದು ವಿನಯಪೂರ್ವಕವಾಗಿ ತಮ್ಮಲ್ಲಿ ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀಮತಿ ಚಂಪಾಬಾಯಿಬೋಗಲೆ (ಕಾಗವಾಡ):—ಮಾನ್ಯ ಅಧ್ಯಕ್ಷರೇ, ಪರಿಶಿಷ್ಟ ಜನಾಂಗದವರ ಬಗ್ಗೆ ಹೆಚ್ಚಿನ ಪ್ರಾಶಸ್ತ್ಯ ಕೊಡಬೇಕೆಂದು ನಾವು ಸರಕಾರಕ್ಕೆ ಹೇಳುತ್ತಲೆ ಬರುತ್ತಿದ್ದೇವೆ. ಇದರ ಬಗ್ಗೆ ಸರಕಾರ ಗಮನ ಕೊಡುತ್ತಿಲ್ಲ. ಇಲ್ಲಿ ಅಡಿಷನಲ್ ಡಿಮ್ಯಾಂಡುಗಳನ್ನು ತಂದು ಹಣ ಬೇಕೆಂದು ಕೇಳುತ್ತಾರೆ. ಸರಕಾರಕ್ಕೆ ಅಧಿಕಾರ ಇದೆ ಎಂದು ಹೀಗೆ ಡಿಮ್ಯಾಂಡುಗಳನ್ನು ತರುತ್ತಾರೆ ಮತ್ತು ಇದಕ್ಕೆ ಕಾನೂನು ಕೂಡ ಇದೆ. ಹಿಂದೆ ಶ್ರೀಮಾನ್ ನಾಡಗೌಡರು ನಮ್ಮ ಪರಿಶಿಷ್ಟ ಜನಾಂಗದವರ ಬಗ್ಗೆ ಕೆಲವು ವಿಚಾರಗಳನ್ನು ತಿಳಿಸಬೇಕೆಂದು ಕೇಳಿ ಅವರು ಜವಾಬು ಕೊಡಬೇಕೆಂದು ಕೇಳಿದರೂ ಅದಕ್ಕೆ ಅವರು ಜವಾಬು ಕೊಡಲಿಲ್ಲ. ನ್ಯಾಯವಾಗಿ ನಮಗೆ ಕಾನೂನಿನಲ್ಲಿ ಏನೇನು ರಕ್ಷಣೆಗಳಿವೆಯೋ ಅವನ್ನು ದೊರಕಿಸಿಕೊಡಬೇಕೆಂದು ನಾವು ಕೇಳಿದರೂ ಅದಕ್ಕೆ ಸರಿಯಾದ ಜವಾಬು ಇಲ್ಲಿಯವರೆಗೂ ಕೊಡಲಿಲ್ಲ. ನೀವಾದರೂ ಇದರ ಬಗ್ಗೆ ಸಿಂಹಾವಲೋಕನ ಮಾಡಿ ನನಗೆ ಸರಿಯಾದ ಜವಾಬನ್ನು ಕೊಡಿಸಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ರಾಮಕೃಷ್ಣ ಹೆಗ್ಗಡೆ(ಹಣಕಾಸು ಯೋಜನೆ ಮತ್ತು ಯುವಕ ಕಲ್ಯಾಣ ಶಾಖೆಗಳ ಸಚಿವರು):—ಮಾನ್ಯ ಅಧ್ಯಕ್ಷರೇ, ಪೂರಕ ಬೇಡಿಕೆಗಳ ಮೇಲೆ ಮುಖ್ಯವಾದ ಟೀಕೆಗಳು ಯಾವುದೂ ಇಲ್ಲ. ಎಲ್ಲಾ ವಾಡಿಕೆಯಾದವು. ಸರಕಾರ ಪೂರಕ ಬೇಡಿಕೆಗಳನ್ನು ತರಕೂಡದು ಮತ್ತು ಈ ಮನೆಯ ಒಪ್ಪಿಗೆ ಇಲ್ಲದೆ ದುಡ್ಡನ್ನು ಖರ್ಚು ಮಾಡಿಬಿಡುತ್ತಾರೆ ಮತ್ತು ಇದರಲ್ಲಿ ಅನೇಕ ಬಾಬುಗಳನ್ನು ಈ ಮನೆಯ ಮುಂದೆ ಮೊದಲೇ ತಂದಿದ್ದರೆ ಇದು ಆಗುತ್ತಿರಲಿಲ್ಲವೋ ಎಂದೂ ಹೇಳಿದರು. ಇದೂ ಕೂಡ ಪ್ರತಿ ಸಲ ಬರತಕ್ಕ ಟೀಕೆಯೇ ಆಗಿ ಬಿಡಿದೆ. ಒಂದು ಮಾತನ್ನು ಇಲ್ಲಿ ಸಭೆಯ ಗಮನಕ್ಕೆ ತರಬೇಕಾಗಿದೆ. ಸರಕಾರದಲ್ಲಿ ಕಂಟೆಂಜೆನ್ಸಿ ಫಂಡ್ ಎಂದು ಇದೆ. ಸರಕಾರಕ್ಕೆ ಕಾನೂನು ಪ್ರಕಾರ ನಾಲ್ಕು ಕೋಟಿಯವರೆಗೆ ಇದರಲ್ಲಿರುವ ದುಡ್ಡನ್ನು ಖರ್ಚು ಮಾಡಲು ಅವಕಾಶ ಇದೆ. ಮತ್ತು ಈ ಮನೆಯವರೇ ಇದಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ. ಸುಮಾರು ನಾಲ್ಕು ಕೋಟಿಯಷ್ಟು ಖರ್ಚು ಮಾಡಿದರೂ ಇದರ ಒಂದೊಂದು ಪೈಸೆಗೂ ಈ ಸಭೆಯ ಒಪ್ಪಿಗೆ ಪಡೆಯಲೇ ಬೇಕು. ಇಲ್ಲದಿದ್ದರೆ ಸರಕಾರ ರಾಜೀನಾಮೆ ಕೊಡಬೇಕಾಗುತ್ತದೆ. ಈ ತರಹದ ಟೀಕೆಯನ್ನು ಇಲ್ಲಿ ಮಾಡುವುದರಿಂದ ಇದರಲ್ಲಿ ಸ್ವಲ್ಪವು ಅರ್ಥವಿಲ್ಲ ಎನ್ನುವುದನ್ನು ಇಲ್ಲಿ ಹೇಳಬಯಸುತ್ತೇನೆ. ಶ್ರೀಮಾನ್ ಸಿದ್ದವೀರಪ್ಪನವರು ಹಣಕಾಸಿನ ಪರಿಸ್ಥಿತಿ ಬಗ್ಗೆ ಹೇಳುತ್ತಾ ಸರಕಾರ ಬಹಳವಾಗಿ ಸಾಲಮಾಡುತ್ತಿದೆ. ಇಂತಹ ಸಾಲಕ್ಕೆ ಇತಿಮಿತಿಯೇ ಇಲ್ಲ ಎಂದು ಹೇಳಿದರು. ಬೇಕಾದಷ್ಟು ಸಾಲ ಇದೆ. ನಿಜ ಈ ವಿಚಾರದಲ್ಲಿ ನಮ್ಮ ವಾರ್ಷಿಕ ಬಡಜಟನ್ನು ಈ ಸಭೆಯ ಮುಂದೆ ತಂದಾಗ ಇದರ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ಸಾಲ ಮಾಡದೆ ನಮ್ಮ ರಾಜ್ಯದ ಅಭಿವೃದ್ಧಿ ಕೆಲಸಗಳ ಜವಾಬುದಾರಿ ನಿರ್ವಹಿಸುವುದು ಸಾಧ್ಯವಿಲ್ಲ ನಾವು ಒಬ್ಬರೇ ಸಾಲ ಮಾಡುತ್ತಿಲ್ಲ. ಬೇರೆ ಇತರ ರಾಜ್ಯಗಳವರೂ ಸಾಲ ಮಾಡುತ್ತಾರೆ. ಮೈಸೂರು ಸರಕಾರ ಮಾತ್ರವಲ್ಲ. ಸಾಲ ಮಾಡುವುದು, ಕೇಂದ್ರ ಸರಕಾರವೂ ಸಾಲ ಮಾಡುತ್ತದೆ. ನಮ್ಮ ಆಡಳಿತದ ಅವಧಿಯಲ್ಲಿ ನಮ್ಮ ಶಕ್ತಿ ಹಾಗೂ ರಿಸೋರ್ಸಸ್‌ಗಳು ಕಡಿಮೆ ಇರುವಾಗ ಇರತಕ್ಕ ರಿಸೋರ್ಸಸ್‌ಗಳನ್ನೆಲ್ಲಾ ಸಾಕಾದಷ್ಟು

ಉಪಯೋಗ ಮಾಡಿಕೊಳ್ಳಲೇ ಬೇಕಾಗುತ್ತದೆ. ಹಿಂದಿನ ಬಜೆಟ್ ಅಧಿವೇಶನದಲ್ಲಿ ನಾನು ಹೇಳಿದ ಹಾಗೆ, ಸಾಲವನ್ನು ಜನರ ಹಿತಕ್ಕಾಗಿ ಮತ್ತು ಅಭಿವೃದ್ಧಿಗಳನ್ನು ಮಾಡುವುದಕ್ಕಾಗಿ ಮಾಡಿದ್ದೇವೆ ಮತ್ತು ನಮ್ಮ ಪಂಚವಾರ್ಷಿಕ ಯೋಜನೆಗಳನ್ನು ಕಾರ್ಯಗತ ಮಾಡುವುದಕ್ಕಾಗಿ ಮಾಡಿದ್ದೇವೆ. ಈ ಬೇಡಿಕೆಗಳಲ್ಲಿ ಬಹಳ ಉಗ್ರವಾದ ಟೀಕೆಗಳು ಬಂದಿರುವುದು ಅದರಲ್ಲೂ ಮುಖ್ಯದಾದುದು ಸಹಕಾರ ಸಂಘಗಳ ಮೇಲೆ ಸರಕಾರದ ಹಣ ಕೊಟ್ಟಿರುವುದರ ಬಗ್ಗೆ. ಸದಸ್ಯರು ಹೇಳಿದಂತೆ ಸಹಕಾರ ಸಂಘಗಳು ಎಲ್ಲ ಕೆಟ್ಟ ಸಂಘಗಳು ಆಗಿರುವುದಿಲ್ಲ. ಇದರಲ್ಲಿ ಒಳ್ಳೆಯ ಸಂಘಗಳೂ ಇರುತ್ತವೆ. ಕೆಟ್ಟ ಸಂಘಗಳ ಬಗೆಗೇ ಇಲ್ಲಿ ಎತ್ತಿ ಹೇಳುವುದು ಒಳ್ಳೆಯದಲ್ಲ. ಇವೆಲ್ಲಾ ಪ್ರಜಾಪ್ರಭುತ್ವದ ತತ್ವಕ್ಕೆ ಅನುಸಾರವಾಗಿಯೇ ಸೇವೆ ಸಲ್ಲಿಸುತ್ತಿವೆ. ಇವುಗಳಲ್ಲಿ ಕೆಲಸ ಮಾಡುವವರು ಎಲ್ಲ ಕಡೆಯಲ್ಲಿಯೂ ಒಳ್ಳೆಯವರಾಗಿರುವವರೇ ಆರಿಸಿ ಬರುತ್ತಾರೆ ಎಂದು ಹೇಳುವುದು ಕಷ್ಟ. ಇವೆಲ್ಲ ದೃಷ್ಟಿಯಿಂದ ಸರಕಾರ ಈ ಸಂಘಗಳಿಗೆ ಸಬ್‌ಸಿಡಿ ಕೊಡುವುದನ್ನು ಅರ್ಧದಷ್ಟು ಕಡಿಮೆ ಮಾಡಿ ಬರುವ ವರ್ಷದಿಂದ ಇದನ್ನು ಮತ್ತಷ್ಟು ಕಡಿಮೆ ಮಾಡಬೇಕೆಂದು ಸರಕಾರ ಆಲೋಚನೆ ಮಾಡುತ್ತಿದೆ ಮತ್ತು ಮುಂದೆ ಇದನ್ನು ಪೂರ್ತಿಯಾಗಿ ನಿಲ್ಲಿಸಬೇಕೆಂದೂ ಇದ್ದೇವೆ.

ಈ ಸಹಕಾರ ಸಂಸ್ಥೆಗಳಿಗೆಂದೇ ಕೇಂದ್ರ ಸರ್ಕಾರದವರೇನಾದರೂ ಹಣವನ್ನು ಕಳುಹಿಸಿದರೆ ಅದನ್ನು ಈ ಸಂಸ್ಥೆಗಳಿಗೇ ವಿನಿಯೋಗಿಸಬೇಕಾಗುತ್ತೆ ಇಲ್ಲವಾದರೆ ಅಷ್ಟು ಹಣ ನಮ್ಮ ರಾಜ್ಯಕ್ಕೆ ಲ್ಯಾಪ್ಸಾಗಿ ಅದು ಬೇರೆ ರಾಜ್ಯಕ್ಕೆ ಹೋಗುತ್ತದೆ. ಆದ್ದರಿಂದ ಅಂಥ ಸಹಾಯವನ್ನು ನಾವು ಕೊಡದೆ ನಿಲ್ಲಿಸುವುದಕ್ಕಾಗುವುದಿಲ್ಲ.

ಇನ್ನು ಭದ್ರಾ ಷುಗರ್ ಫ್ಯಾಕ್ಟರಿಗೆ ಯಾರೋ ಒಬ್ಬ ಸದಸ್ಯರು ೫ ಲಕ್ಷ ರೂಪಾಯಿಗಳನ್ನು ಷೇರ್ ಬಂಡವಾಳವಾಗಿ ಹಾಕುವುದಕ್ಕೆ ಬಂದಿದ್ದರೆಂದು ಹೇಳಿದ್ದಾರೆ. ಆ ವಿಚಾರವೇನೂ ನನಗೆ ತಿಳಿಯದು. ಆದರೆ ನಾವು ಅದರಲ್ಲಿ ಹಾಕಿರತಕ್ಕ ಷೇರ್ ಬಂಡವಾಳ ೫ ಲಕ್ಷ ೫೦ ಸಾವಿರ ರೂಪಾಯಿಗಳು ಮಾತ್ರ. ಹಾಲಿ ಅದನ್ನು ನಡೆಸತಕ್ಕ ಮ್ಯಾನೇಜ್ ಮೆಂಟಿನವರು ಇಂತಿಷ್ಟು ಹಣವನ್ನು ಹಾಕಬೇಕು ಎಂಬ ಒಪ್ಪಂದದ ಪ್ರಕಾರ ಹಣವನ್ನು ಹಾಕಿದೆ. ಇನ್ನು ಆ ಮ್ಯಾನೇಜ್‌ಮೆಂಟಿನವರು ತಮ್ಮ ಷೇರ್ ಬಂಡವಾಳವನ್ನು ಹೆಚ್ಚಿಸದಿದ್ದರೆ ಸರ್ಕಾರದವರು ಹಣವನ್ನು ಕೊಡುವುದಕ್ಕಾಗುವುದಿಲ್ಲ ಎಂಬುದನ್ನು ನಾನು ಖಂಡತುಂಡವಾಗಿ ತಿಳಿಸಿದ್ದೇನೆ. ಇನ್ನು ಆ ಕಾರ್ಖಾನೆಯಲ್ಲಿ ಸದಸ್ಯರು ಯಾರು ಯಾರು ಇದ್ದಾರೆಂಬುದು ಇಲ್ಲಿಯ ಸದಸ್ಯರೆಲ್ಲರಿಗೂ ಗೊತ್ತಿದೆ. ಇದಾದ ಮೇಲೆ ಇನ್ನು ಆ ಹುಬ್ಬಳ್ಳಿ ಸಹಕಾರ ನೂಲಿನ ಕಾರ್ಖಾನೆಯ ಬಗ್ಗೆ ಎರಡು ಮಾತುಗಳನ್ನಾಡಬೇಕಾಗಿದೆ ಆ ಕಾರ್ಖಾನೆ ಅನೇಕ ವರ್ಷಗಳಿಂದ ಕೆಲಸ ಮಾಡದೆ ಅದನ್ನು ಮುಚ್ಚತಕ್ಕ ಸ್ಥಿತಿಗೆ ಬಂದಿತ್ತು. ಅದಕ್ಕಾಗಿ ಆ ಬಾಬಿನಲ್ಲಿ ಅರಿತುನುರಿತ ಎಕ್ಸ್‌ಪರ್ಟುಗಳನ್ನು ಕರೆಸಿ ವಿಚಾರ ವಿನಿಮಯ ನಡೆಸಿ ಅದನ್ನು ನಾವು ಇನ್ನು ನಡೆಸತಕ್ಕ ಸ್ಥಿತಿಯಲ್ಲಿ ಇಲ್ಲದಿದ್ದ ಕಾರಣ ಅದನ್ನು ಬೇರೆ ಯಾರಿಗಾದರೂ ವಹಿಸಬೇಕೆಂಬ ತೀರ್ಮಾನಕ್ಕೆ ಬರಲಾಯಿತು. ಆ ವಿಚಾರವನ್ನು ಸಂಬಂಧಪಟ್ಟ ಇಲಾಖೆಯವರಿಗೆ ತಿಳಿಸಿ ಅದನ್ನು ಬಹಿರಂಗ ಪ್ರಕಟಣೆ ಮಾಡಿಸಿದ್ದರಿಂದ ಮೂರು ನಾಲ್ಕು ಜನರು ಮುಂದೆ ಬಂದರು. ಅವರಲ್ಲಿ ನಮಗೆ ಯಾರು ಹೆಚ್ಚಿನ ಬಾಡಿಗೆಯನ್ನು ಕೊಡುತ್ತೇವೆಂದು ಒಪ್ಪಿಕೊಂಡರೋ ಅಂಥವರನ್ನು ಅದರ ಮ್ಯಾನೇಜ್‌ಮೆಂಟಿನಲ್ಲಿಟ್ಟಿದ್ದೇವೆ ಆದ್ದರಿಂದ ಆ ಮ್ಯಾನೇಜ್‌ಮೆಂಟನ್ನು ವಹಿಸಿಕೊಂಡಿರತಕ್ಕವರಿಗೂ ನಮಗೂ ಯಾವ ಸಂಬಂಧವೂ ಇಲ್ಲ. ಅವರು ಯಾವ ಮಂತ್ರಿಗಳ ಸಂಬಂಧೀಕರೂ ಅಲ್ಲ, ಸ್ನೇಹಿತರೂ ಅಲ್ಲ. ಆದ್ದರಿಂದ ತತ್ಸಂಬಂಧದಲ್ಲಿ ಮಾಡಿರತಕ್ಕ ಟೀಕೆಗಳೆಲ್ಲವೂ ನಿರಾಧಾರವಾದವು.

ಇನ್ನು ಎಕ್ಸ್‌ಪೋ- ೭೦ ರ ಹಗರಣದಲ್ಲಿ ಉಗ್ರವಾದ ಟೀಕೆಗಳು ಬಂದಿವೆ. ಇದರ ಬಗೆ ಬೇಕಾದಷ್ಟು ಚರ್ಚೆಯಾಗಿದೆ. ಇದರಲ್ಲಿ ತಪ್ಪೇನಾದರೂ ಇದ್ದರೆ ನೋಡಬೇಕೆಂದು ಅದಕ್ಕೆ ಒಬ್ಬರನ್ನು ನೇಮಕ ಮಾಡಬೇಕೆಂದೂ ತೀರ್ಮಾನವಾಗಿದೆ. ಆದರೆ ಆ ಡೆಲಿಗೇಷನ್ನನ್ನು ಕಳುಹಿಸಿದ್ದರಿಂದ ನಮಗೇನೂ ವ್ಯಥೆಯಿಲ್ಲ. ಅದಕ್ಕಾಗಿ ನಮಗೆ ೪ ಲಕ್ಷ ರೂಪಾಯಿಗಳೇನೋ ಖರ್ಚಾಗಿದೆ ಅದನ್ನು ನಾನು ಒಂದು ವೇಸ್ಟೇಜ್ ಎಂದು ಪರಿಗಣಿಸುವುದಿಲ್ಲ. ನಿಜ ಆ ಹಣವನ್ನು ಈ ಬಾಬಿಗೆ ತಪ್ಪಿಸಿ ಕಾಲೇಜಿನ ಬೇರಾವುದಾದರೂ ಬಾಬಿಗೆ ಬಳಸಬಹುದಿತ್ತೆಂದು ಕೆಲವರ ವಾದ. ಆದರೆ ನಮ್ಮ ತರುಣರು ಪರದೇಶಗಳಿಗೆ ಹೋಗಿ ಬಂದರೆ ಅವರ ವಿಷನ್ ಜಾಸ್ತಿಯಾಗಿ ಅವರ ಅಭಿವೃದ್ಧಿಗೆ ಅನುಕೂಲವಾಗುವುದೆಂದು ಅವರನ್ನು ಕಳುಹಿಸಲಾಯಿತು. ಅದರ ಬಗ್ಗೆ ನಾನು ಇನ್ನು ಹೆಚ್ಚು ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಸಾಕಷ್ಟು ಆಗಲೇ ಹೇಳಿದ್ದೇನೆ.

ಇನ್ನು ಬೆಂಗಳೂರಿನ ಮಿಲ್ಕ್ ಸಪ್ಲೆ ಡೈರಿ ವಿಚಾರವನ್ನು ಶ್ರೀ ಸಿದ್ದವೀರಪ್ಪನವರು ಪ್ರಸ್ತಾಪ ಮಾಡಿದ್ದಾರೆ. ಅದಕ್ಕೆ ೧೫ ಲಕ್ಷ ರೂಪಾಯಿಗಳನ್ನು ಕೊಡುವಂತೆ ಇದೇ ಮಾನ್ಯ ಸಭೆಯಲ್ಲಿ ಅಪ್ರೂವಾಗಿತು. ಆದರೆ ಆಗ ಆ ಮೊಬಲಗೇನಿತ್ತು ಅದನ್ನು ಬಿಲ್ಡಿಂಗ್ ಹೆಡ್ಡಿಗೆ ಸೇರಿಸಲಾಗಿತ್ತು. ಅದು ಮಿಸ್‌ಕ್ಲಾಸಿಫಿಕೇಷನಾಗಿತ್ತು. ಆ ಹಣವನ್ನು ಮಂಜೂರು ಮಾಡಿದ್ದದ್ದು ಬೇರೆ ಬಾಬಗೆ- ಅಂದರೆ ಮಿಷನರಿಗಳ್ಳುವುದಕ್ಕೆ. ಅದು ಆಗ ತಪ್ಪಾಗಿದ್ದದವುದನ್ನು ಈಗ ಸರಿಪಡಿಸಿ ಮತ್ತೆ ತಂದಿದೆ. ಅಷ್ಟೇ. ಆದ್ದರಿಂದ ಇದೊಂದು ಹೊಸ ಐಟಂ ಅಲ್ಲ.

(ಶ್ರೀ ರಾಮಕೃಷ್ಣ ಹೆಗ್ಗಡೆ)

ಇನ್ನು ಖೆಡ್ಡಾ ಆಪರೇಷನ್ ವಿಚಾರದಲ್ಲಿ ಸಲಹೆಗಳನ್ನು ಮಾಡಿದ್ದಾರೆ. ಅದನ್ನು ಸಂಬಂಧಪಟ್ಟ ಮಾನ್ಯ ಮಂತ್ರಿಗಳು ಗಮನಿಸುತ್ತಾರೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಶ್ರೀ ಸಿದ್ಧವೀರಪ್ಪನವರು ಪೇಪರ್ ಮಿಲ್ಸ್ ವಿಚಾರವಾಗಿ ಟೀಕೆ ಮಾಡಿದ್ದಾರೆ. ಅದರಲ್ಲಿ ನಮ್ಮ ಬಂಡವಾಳ ಇರುವುದು ನೂರಕ್ಕೆ ಹತ್ತರಷ್ಟು ಮಾತ್ರ.
ಆದರೆ ಆರ್ಟಿಕಲ್ ಆಫ್ ಅಸೋಸಿಯೇಷನ್ ಪ್ರಕಾರ ಗವರ್ನ್ಮೆಂಟ್ ನಾಮಿನ ಅಧ್ಯಕ್ಷರು ಮತ್ತು ಮ್ಯಾನೆಜಿಂಗ್ ಡೈರೆಕ್ಟರಿರುತ್ತಾರೆ. ಆ ಕಂಪನಿಯೊಳಗೆ ಗವರ್ನ್ಮೆಂಟ್ ಷೇರು ಇರುವುದನ್ನು ಯಾರಿಗೂ ಮಾರಲಿಕ್ಕೆ ಸಿದ್ಧವಾಗಿಲ್ಲ, ಮಾರಬೇಕು ಎಂದು ಯೋಚನೆ ಮಾಡಿಲ್ಲ ಆದರೆ ಬಾಕಿಷೇರುಗಳು ಎಲ್.ಐ.ಸಿ, ಮತ್ತು ಇತರ ಸಂಸ್ಥೆಗಳ ಕೈಯ್ಯಲ್ಲಿ ಬಹಳ ಮಟ್ಟಿಗೆ ಪಬ್ಲಿಕ್‌ನಲ್ಲಿ ಹಂಚಿಹೋಗಿದೆ. ೧೦-೧೫ ಪರ್ಸೆಂಟ್‌ನಷ್ಟು ಮೊತ್ತದ ಷೇರು ಯಾರೊಬ್ಬ ವ್ಯಕ್ತಿಯ ಹತ್ತಿರವು ಇಲ್ಲ. ಯಾರಾದರೂ ವ್ಯಕ್ತಿಗಳುತಮ್ಮಲ್ಲಿದ್ದ ಷೇರನ್ನು ಯಾರಿಗಾದರೂ ಮಾರ್ಕೆಟ್ಟಿನಲ್ಲಿ ಮಾರಾಟ ಮಾಡಿದ್ದರೆ ಅದನ್ನು ನಾವು ಪ್ರಿವೆಂಟ್ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಆದರೂ ನಾವು ಎಚ್ಚರಿಕೆಯಿಂದ ನೋಡುತ್ತಿದ್ದೇವೆ, ಎಷ್ಟರಮಟ್ಟಿಗೆ ಅದನ್ನು ತಪ್ಪಿಸಲಿಕ್ಕೆಆಗುತ್ತದೆ ಅದನ್ನು ತಪ್ಪಿಸಲಿಕ್ಕೆ ಪ್ರಯತ್ನ ಮಾಡುತ್ತೇವೆ.

ಸರ್ಕಾರದ ಷೇರುಗಳನ್ನು ಮಾರಾಟ ಮಾಡುತ್ತೀರಾ. ಯಾವರೀತಿ ಮಾರಾಟ ಮಾಡುತ್ತೀರಿ ಎಂದು ಎಲ್.ಐ.ಸಿ ಯವರು ಕೇಳಿದರು. ಈ ಷೇರುಗಳು ನಾವು ಮಾರಾಟ ಮಾಡುವುದಿಲ್ಲ, ಮಾರಬಾರದು ಎನ್ನುವುದು ನಮ್ಮ ನೀತಿ ಇದೆ ಎಂದು ತಿಳಿಸಿದ್ದೇವೆ. ಇಷ್ಟು ಮಾತ್ರ ಈ ವಿಚಾರದಲ್ಲಿ, ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಎಚ್. ಸಿದ್ಧವೀರಪ್ಪ:— ೧,೯೦,೦೦೦ ಷೇರುಗಳನ್ನು ತೆಗೆದುಕೊಂಡರೆ ನಿಮಗಿಂತ ೭೦ ಸಾವಿರ ಷೇರುಗಳು ಜಾಸ್ತಿಯಾಗುತ್ತವೆ, ಆದ್ದರಿಂದ ಹಾಗೆ ಆಗುವುದನ್ನು ಕಂಟ್ರೋಲ್ ಮಾಡುವುದಕ್ಕೆ ಅವಕಾಶವಿಲ್ಲವೇ?

ಶ್ರೀ ರಾಮಕೃಷ್ಣ ಹೆಗಡೆ:— ಎಲ್.ಐ.ಸಿ. ಷೇರುಗಳನ್ನು ಕೊಂಡುಕೊಳ್ಳಬಹುದು. ಆದರೆ ಅವರು ಮಾರಾಟ ಮಾಡಲಿಕ್ಕೆ ಒಪ್ಪಬೇಕು. ಅಲ್ಲದೆ ನಾವು ಖರೀದಿ ಮಾಡುವುದಾದರೆ ಬೇರೇಯವರು ಎಷ್ಟಕ್ಕೆ ಕೇಳಿದ್ದಾರೆ ಅದಕ್ಕಿಂತ ಹೆಚು ಕೊಟ್ಟರೆ ಮಾತ್ರ ಅವರು ಮಾರಾಟ ಮಾಡುತ್ತಾರೆ. ಅವರು ಸಿಕ್ಕಾಪಟ್ಟೆ ರೇಟ್ ಹೇಳಿದರೆ ಅಷ್ಟು ದುಡ್ಡು ಕೊಟ್ಟು ತೆಗೆದುಕೊಳ್ಳುವುದಕ್ಕೆ ಎನು ಕಾರಣ, ಯಾರ ಮಾತು ಕೇಳಿ ತೆಗೆದುಕೊಂಡಿರಿ ಎನ್ನುವ ಆಕ್ಷೇಪಣೆ ಬರಬಹುದು. ಅದೂ ಅಲ್ಲದೆ ಎಲ್.ಐ.ಸಿ. ಪಬ್ಲಿಕ್ ಸೆಕ್ಟಾರ್ ಆಗಿರುವುದರಿಂದ ಅವರು ಏಕೆಮಾರಬೇಕು? ಇದರ ಬಗ್ಗೆ ನಾವು ಜಾಗ್ರತೆಯಾಗಿದ್ದೇವೆ ಎಂದು ಮಾತ್ರ ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಮಾನ್ಯ ಅರಕೇರಿ ಅವರು ಹರಿಜನ ಮತ್ತು ಗಿರಿಜನ ಹೌಸಿಂಗ್ ಕಾರ್ಪೊರೇಷನ್ ವಿಚಾರದಲ್ಲಿ ಹೇಳಿದರು, ಎಲ್.ಐ.ಸಿ ಯಿಂದ ಮೂರುವರೆ ಕೋಟಿರೂಪಾಯಿ ತಂದು ಹಂಚಿದರು. ಈ ದುಡ್ಡೆಲ್ಲ ಖರ್ಚಾಗಿದೆ ಪುನಃ ದುಡ್ಡು ಕೊಡುವುದಕ್ಕೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ಎಂದುಕೇಳಿದರು. ನಾವು ೨೦ ಲಕ್ಷರೂಪಾಯಿ ಹೆಚ್ಚು ಹಣವನ್ನು ಕ್ಯಾಪಿಟಲ್‌ಗೆ ಕೊಟ್ಟಿದ್ದೇವೆ. ಎಲ್.ಐ.ಸಿ. ಯಿಂದ ಹೆಚ್ಚು ಹಣ ಸಾಲವಾಗಿ ಪಡೆಯುವುದಕ್ಕೆ ಅನುಕೂಲವಾಗಬೇಕೆಂಬ ದೃಷ್ಟಿಯಿಂದ ೨೦ ಲಕ್ಷರೂಪಾಯಿ ಹೆಚ್ಚಾಗಿ ಕೊಟ್ಟಿದ್ದೇವೆ ಕಳೆದ ಸಲ ನಾನು ಬೊಂಬಾಯಿಗೆ ಹೋಗಿದ್ದಾಗ ಎಲ್.ಐ.ಸಿ ಅಧ್ಯಕ್ಷರ ಹತ್ತಿರ ಮಾತನಾಡಿದೆ, ಒಂದು ಕೋಟಿರೂಪಾಯಿ ನಷ್ಟು ಹಣ ಕೊಡುತ್ತೇವೆಂದು ಅವರು ಹೇಳಿದ್ದಾರೆ, ಅಫಿಷಿಯಲ್ ಆಗಿ ಪತ್ರವನ್ನು ಬರೆದಿದ್ದೇವೆ. ಅಲ್ಲಿಂದ ಹಣ ತಂದಮೇಲೆ ಅದನ್ನು ಹಂಚುತ್ತೇವೆಂದು ಮಾನ್ಯ ಸದಸ್ಯರಿಗೆ ಹೇಳ ಬಯಸುತ್ತೇನೆ,

ಮಾನ್ಯಅಧ್ಯಕ್ಷರೇ, ಈ ಪೂರಕ ಬೇಡಿಕೆಗಳಲ್ಲಿ ಮೊದಲು ಇಷ್ಟೊಂದು ವಿವರವಾದ ಎಕ್ಸ್‌ಪ್ಲನೇಶನ್. ಕೊಡತಕ್ಕ ಸಂಪ್ರದಾಯವಿರಲಿಲ್ಲ. ಕಳೆದ ಕೆಲವು ವರ್ಷಗಳಿಂದ ಪ್ರತಿಯೊಂದು ಬಾಬಿನ ಮೇಲೆ ಏಕೆ ಖರ್ಚು ಮಾಡಲಾಯಿತು ಎನ್ನುವುದನ್ನು ಮಾನ್ಯಸದಸ್ಯರಿಗೆ ಮನದಟ್ಟಾಗುವ ರೀತಿಯಲ್ಲಿ ವಿವರಣೆಗಳನ್ನು ಕೊಡುತ್ತಿದ್ದೇವೆ ಇದರ ಮುನ್ನುಡಿಯಲ್ಲಿ ಸರ್ಕಾರದ ಬೊಕ್ಕಸದಿಂದ ಖರ್ಚಾಗತಕ್ಕ ಹಣವೆಷ್ಟು ಮತ್ತು ಕೇಂದ್ರ ಸರ್ಕಾರದಿಂದ ಬಂದು ಜಾಸ್ತಿಯಾಗತಕ್ಕ ಹಣವೆಷ್ಟು ಮತ್ತು ಲೋನುಸೇರಿ ವಸೂಲು ಮಾಡಬೇಕಾದ ಹಣವೆಷ್ಟು ಎಂದು ಹೇಳಿದ್ದೇವೆ. ಕೇವಲ ೫೯,೪೪,೦೦೦ರೂಪಾಯಿ ಮಾತ್ರ ನಮ್ಮ ಬೊಕ್ಕಸದಿಂದ ಖರ್ಚಾಗುತ್ತದೆ ಇದು ಅಷ್ಟು ದೊಡ್ಡ ಹಣವಲ್ಲ.

ಕಳೆದ ಎರಡು ಮೂರು ತಿಂಗಳಿನಿಂದ ನಮ್ಮ ರಾಜ್ಯದ ಅನೇಕ ಭಾಗಗಳಲ್ಲಿ ಏನು ಅಭಾವ ಪರಿಸ್ಥಿತಿಯುಂಟಾಯಿತು ಅದರ ಪರಿಹಾರಕ್ಕಾಗಿ ಕೇಂದ್ರ ಸರ್ಕಾರದವರು ನಮ್ಮ ಮುನ್ನುಡಿಯನ್ನು ಮನ್ನಿಸಿ ಎರಡು ಕೋಟಿ ರೂಪಾಯಿಗಳನ್ನು ಮಂಜೂರು ಮಾಡಿದ್ದಾರೆ. ಯಾವರೀತಿ ಅಭಾವ ಪರಿಸ್ಥಿತಿಯನ್ನು ನಿವಾರಣೆ ಮಾಡಬೇಕೆಂಬ ವಿಚಾರವಲ್ಲಿ ವ್ಯಥೆಯಿಂದ ಹೇಳುತ್ತೇನೆ, ಕಳೆದ ನಾಲ್ಕೈದುದಿವಸ ಅಭಾವ ಪರಿಸ್ಥಿಯಮೇಲೆ ಚರ್ಚೆಯಾಯಿತಾದರೂ ಅದರ ಮೇಲೆ ಹೆಚ್ಚು ಬೆಳಕು ಬೀಳಲಿದೆ. ಮೈಸೂರು ರಾಜ್ಯದಲ್ಲಿ ಅನೇಕ ಜಿಲ್ಲೆಗಳಲ್ಲಿ ಈ ಪರಿಸ್ಥಿತಿ ಪುನಃ ಪುನಃ ತಲೆದೋರುತ್ತದೆ ಈ ಬಗ್ಗೆ ದೊಡ್ಡ ಸ್ಕೀಂ ೨೦೦-೨೫೦ ಲಕ್ಷರೂಪಾಯಿಗಳ ಸ್ಕೀಂ ಮಾಡಿ ಪ್ಲಾನಿಂಗ್ ಕಮಿಷನ್ನಿಗೆ ಕಳುಹಿಸಿ ಎರಡು ವರ್ಷವಾಯಿತು ಅದರ ಬಗ್ಗೆ ಕೊನೆ ತೀರ್ಮಾನ ಮಾಡಿಲ್ಲ ಅದರ ಬಗ್ಗೆ ಹೆಚ್ಚು ಬೆಳಕು ಬಿದ್ದಿದ್ದರೆ ಒಳ್ಳೆಯದಾಗುತ್ತಿತ್ತು. ಅದರ ಬದಲು ಸಣ್ಣಪುಟ್ಟ ವಿಚಾರಗಳಿಗೆ ಹೆಚ್ಚುಮಹತ್ವ ಈ ಚರ್ಚೆಯಲ್ಲಿ ಸಿಕ್ಕಿದ ಹಾಗೆ ನನಗೆ ಕಾಣುತ್ತದೆ.

ಕೊನೆಯದಾಗಿ ಮಾನ್ಯ ದೇವರಾಜ ಅರಸ್ ಅವರು ಸ್ಥಾನಿಕ ವಿಚಾರವನ್ನು ಎತ್ತಿದರು ನನ್ನ ಹತ್ತಿರ ಅದಕ್ಕೆ ಬೇಕಾದ ವಿವರವಿಲ್ಲದೆ ಇರುವುದರಿಂದ ಅದಕ್ಕೆ ಉತ್ತರ ಕೊಡುವುದಕ್ಕೆ ಸಾಧ್ಯವಾಗುತ್ತಿಲ್ಲ ಒಂದು ಪ್ರಶ್ನೆಯ ರೂಪವಾಗಿ ಕಳುಹಿಸಿದ್ದರೆ ಬಹುಶಃ ವಿವರ ಕೊಡಬಹುದಾಗಿತ್ತು.

ಶ್ರೀ ಡಿ. ದೇವರಾಜ ಅರಸ್:—ನಾನು ಇನಸ್ಟೆನ್ಸಸ್ ಕೊಟ್ಟೆ. ಅವರದೆ ಗವರ್ನಮೆಂಟ್ ಆರ್ಡರ್ಸ್ಸ್ ಎಲ್ಲ ಇವೆ. ಅದನ್ನು ತರಿಸಿಕೊಂಡು ನೋಡಬಹುದು.

ಶ್ರೀ ರಾಮಕೃಷ್ಣ ಹೆಗಡೆ:—ಒಟ್ಟಿನಲ್ಲಿ ಹೇಳುವುದಾದರೆ ಇಷ್ಟು ಮಾತ್ರ ಆಶ್ವಾಸನೆಯನ್ನು ಮಾನ್ಯ ಸದಸ್ಯರಿಗೆ ಕೊಡಲು ಬಯಸುತ್ತೇನೆ. ಮೈಸೂರು ರಾಜ್ಯದ ಹಣಕಾಸಿನ ಪರಿಸ್ಥಿತಿ ಸಂಪೂರ್ಣ ಉತ್ತಮ ಸ್ಥಿತಿಯಲ್ಲಿದೆ ಎಂದು ಹೇಳದೆ ಇದ್ದರೂ ಬಹಳ ಕೆಟ್ಟ ಪರಿಸ್ಥಿತಿಯಲ್ಲಿಲ್ಲ. ಕಳೆದ ಎರಡು ಮೂರು ವರ್ಷಗಳಲ್ಲಿ ಬಹಳಷ್ಟು ದೊಡ್ಡ ಪರಿಸ್ಥಿತಿಯನ್ನು ಎದುರಿಸಿದ್ದೇವೆ. ಮತ್ತು ಎರಡು ಮೂರುವರ್ಷಗಳಲ್ಲಿ ನಾವು ಖರ್ಚು ಮಾಡಿರತಕ್ಕ ದೊಡ್ಡದೊಡ್ಡ ಯೋಜನೆಗಳಿಗೆ ಮುಖ್ಯವಾಗಿ ದೊಡ್ಡ ನೀರಾವರಿ ಯೋಜನೆಗಳಿಗೆ ಖರ್ಚು ಮಾಡಿರುವಷ್ಟು ಹಣ ಬೇರೆ ಯಾವ ರಾಜ್ಯವೂ ಖರ್ಚುಮಾಡಿಲ್ಲ.

ಶ್ರೀ ಎಚ್ ಸಿದ್ದವೀರಪ್ಪ:—ಯು ಆರ್ ವರೀಡ್ ಎ ಎಂದು ಮುಖ್ಯವಾದ ಪತ್ರಿಕೆಯಲ್ಲಿ ಬಂದಿದೆ.

ಶ್ರೀ ರಾಮಕೃಷ್ಣ ಹೆಗಡೆ:— ಎಲ್ಲಿಯವರೆಗೆ ಸರ್ಕಾರನಡೆಯುತ್ತದೆಯೋ ಅಲ್ಲಿಯವರೆಗೆ ಏರಿ ತಪ್ಪಿದ್ದಲ್ಲ ಒಂದು ಕಡೆ ಸಾಲ ಮಾಡಬೇಕು. ಇನ್ನೊಂದು ಕಡೆ...

SRI H. SIDDAVEERAPPA:—The Hindu is a super paper. What it has stated is that you are worried about the performances of the planned programmes. Sri Ramakrishna Hegde is the most worried man", it has stated.

SRI RAMAKRISHNA HEGDE:— May I tell my esteemed friends here that even in the worst situation I have learnt to be always cherful and there is no point in getting depressed But I do not say we have been completely out of woods. What I say is that we can successfully implement our Forth plan programmes.

8 00 P.M.

ಶ್ರೀ ಎಲ್, ಶ್ರೀಕಂಠಯ್ಯ:— ಈಗ ರಾಜ್ಯದಲ್ಲಿ ಇಷ್ಟೊಂದು ಓವರ್ ಡ್ರಾಫ್ಟ್ ಇರುವಾಗ ಲಕ್ಷಾಂತರ ರೂಪಾಯಿಗಳನ್ನು ಸಿಲ್ಕ್ ಮಿಲ್ಸ್‌ಗೆ ಕೊಡುತ್ತಿದ್ದೀರಲ್ಲಾ ಅದನು ವಿವೇಚನೆಯಿಂದ ಕೊಡುತ್ತಿದ್ದೀರಾ?

ಶ್ರೀ ಹೆಚ್, ಸಿದ್ದವೀರಪ್ಪ :—ನಿಮ್ಮ ಓವರ್ ಡ್ರಾಫ್ಟ್ ೧೫ ಕೋಟಿಗಿಂತ ಕಡಿಮೆ ಇರುವುದಿಲ್ಲ. ಈಗ ನಾನು ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಮುಂದೆ ಬರುವವರೆಗೆ ಏನಾದರೂ ಅವಕಾಶ ಮಾಡಿಟ್ಟು ಹೋಗಿ ಎಂದು ನನ್ನ ಅಭಿಪ್ರಾಯ.

ಶ್ರೀ ರಾಮಕೃಷ್ಣ ಹೆಗಡೆ :—ಮುಂದೆ ಯಾರೇ ಬರಲಿ ಒಂದು ಒಳ್ಳೆಯ ಕಾರ್ಯ ಮಾಡಲಿ ಎಂದು ಬಿಟ್ಟು ಹೋಗುತ್ತೇವೆಯೇ ವಿನಃ ಕೆಟ್ಟ ಕೆಲಸ ಮಾಡಿಬಿಟ್ಟು ಹೋಗುವುದಿಲ್ಲ.

ಶ್ರೀ ಹೆಚ್. ಸಿದ್ದವೀರಪ್ಪ :—ಈವೊತ್ತಿನ ದಿವಸ ನೀವು ಎರಡು ಹೊತ್ತಿಗೆಗಳನ್ನು ಕೊಟ್ಟದ್ದೀರಿ, ಅದರಲ್ಲಿ ಎರಡು ಡಿಪಾರ್ಟ್‌ಮೆಂಟಿದ್ದು ಮಾತ್ರ ಕೊಟ್ಟಿದ್ದೀರಿ. ಅದಕ್ಕೆ ನಾನು ಸಲಹೆ ಮಾಡುವುದು ಅಡ್ಮಿನಿಸ್ಟ್ರೇಟೀವ್ ರಿಫಾರಂಸ್ ಕಮೀಷನ್ ಪ್ರಕಾರ ಪ್ರತಿಯೊಂದು ಡಿಪಾರ್ಟ್‌ಮೆಂಟಿನದೂ ಪರ್‌ಫಾರ್‌ಮೆನ್ಸ ಬಡ್ಜೆಟ್ ಕೊಟ್ಟರೆ ಆವಾಗ ಎಲ್ಲಾ ಮಾನ್ಯ ಸದಸ್ಯರಿಗೂ ಕೂಡ ಡಿಪಾರ್ಟ್‌ಮೆಂಟ್‌ಗಳಲ್ಲಿ ಏನೇನು ಕಾರ್ಯಕಲಾಪಗಳು ನಡೆಯುತ್ತದೆ ಎಂದು ತಿಳಿದುಕೊಳ್ಳುವುದಕ್ಕೆ ಸುಲಭವಾಗುತ್ತದೆ. ಆವಾಗ ಎಲ್ಲಾ ಡಿಪಾರ್ಟ್‌ಮೆಂಟ್‌ಗಳ ವಿಷಯ ಚೆನ್ನಾಗಿ ಗೊತ್ತಾಗುತ್ತದೆ. ಆದುದರಿಂದ ಮುಂದಿನ ಸೆಷನ್ ಹೊತ್ತಿಗಾದರೂ ಎಲ್ಲಾ ಡಿಪಾರ್ಟ್‌ಮೆಂಟ್‌ಗಳ ವಿಷಯವನ್ನು ಪ್ರಿಂಟ್ ಮಾಡಿ ಪ್ರತಿಯೊಬ್ಬ ಸದಸ್ಯರಿಗೂ ಹಂಚ್ಚಿಸಿದರೆ ಬಹಳ ಅನುಕೂಲವಾಗುತ್ತದೆ ಎಂದು ಹೇಳುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ:—ಸರಿ.

ಶ್ರೀ ಡಿ. ದೇವರಾಜ್ ಅರಸ್ :—ಭದ್ರಾವತಿ ಪೇಪರ್ ಮಿಲ್ಸ್ ಬಗ್ಗೆ ಮಾನ್ಯ ಸಚಿವರು ಈಗ ಪ್ರಾಫಿಟ್ ಬರುತ್ತಿದೆ ಎಂದು ಹೇಳಿದರು. ಅದಕ್ಕಾಗಿ ನಾನು ಕೇಳುವುದು ಏನೆಂದರೆ ಭದ್ರಾವತಿ ಪೇಪರ್‌ನಲ್ಲಿ ಒಟ್ಟು ಪ್ರೊಡಕ್ಷನ್ ಕೆಪಾಸಿಟಿ ಎಷ್ಟು ಇದೆ, ಅಷ್ಟು ಕೆಪಾಸಿಟಿಯಲ್ಲೂ ಆ ಮಿಲ್ ವರ್ಕ್ ಮಾಡುತ್ತಾ ಇದೆಯೋ ಈಗ ಬರುವ ಲಾಭವನ್ನೇ ಹೆಚ್ಚು ಎಂದು ತಿಳಿದುಕೊಂಡರೆ ಬೇರೆ ಪೇಪರ್ ಮಿಲ್ಲುಗಗಲ್ಲಿ ಏನು ಲಾಭ ಬರುತ್ತವೆಯೋ ಅದಕ್ಕಿಂತ ಕಡಿಮೆ ಎಂದು ಗೊತ್ತಾಗುತ್ತದೆ. ಅಲ್ಲದೆ ಈಗ ಪೇಪರ್ ಪ್ರೈಸ್ ಹೆಚ್ಚು ಇರುವುದರಿಂದ ಲಾಭಬರುತ್ತದೆ ಇದೆಯೋ ವಿನಃ ಎಷ್ಟು ಪ್ರಮಾಣದಲ್ಲಿ ಲಾಭ ಬರಬೇಕಾಗಿತ್ತೋ ಆ ಪ್ರಮಾಣದಲ್ಲಿ ಬರುತ್ತಾ ಇದೆಯೋ ಈಗ ಆ ಮಿಲ್ ಕೆಲಸ ಮಾಡುತ್ತಾ ಇರುವುದರಿಂದ ಸರ್ಕಾರಕ್ಕೆ ಅದು ತೃಪ್ತಿಕರವಾಗಿದೆಯೋ ಎನ್ನುವುದನ್ನು ತಿಳಿಸಬೇಕು,

ಶ್ರೀ ಕೆ. ಪ್ರಭಾಕರ್ :—ಈಗ ಕಾವೇರಿ ವಾಟರ್ ಸಪ್ಲೈ ಸ್ಕೀಂಗೆ ಕೋಟ್ಯಾಂತರ ರೂಪಾಯಿ ಖರ್ಚಾಗುತ್ತಾ ಇದೆ. ಫ್ಯಾಮಿನ್ ರಿಲೀಫ್‌ಗೆ ಹಣ ಬೇಕು ಎಂದು ಬರೆದಿದ್ದೀರಿ ಸರ್ಕಾರದವರು ಈಗ ಇರತಕ್ಕಂಥ ಹಣದಲ್ಲಿ ಫ್ಯಾಮಿನ್ ರಿಲೀಫ್‌ಗೆ ಸರಿಯಾಗಿ ವಿನಿಯೋಗಿಸುತ್ತಿದ್ದಾರೆಯೇ ಯಾರಿಗೆ ನಿಜವಾದ ಸಹಾಯ ಸಿಕ್ಕಬೇಕೋ ಅವರಿಗೆ ಸಿಕ್ಕುತ್ತಾ ಇಲ್ಲದೇ ಇರುವುದರಿಂದ ಕೇಂದ್ರ ಸರ್ಕಾರದವರು ಕೊಟ್ಟಿರುವ ಹಣವನ್ನು ಅವರು ಸರಿಯಾಗಿ ಉಪಯೋಗಿಸುತ್ತಾ ಇಲ್ಲ. ಈ ಕಾರಣದಿಂದ ಮುಂದೆ ಪುನಃ ಪರಿಹಾರ ಕೊಡುವುದಕ್ಕೆ ತಡಮಾಡುತ್ತಾ ಇರುವುದು ನಿಜವೇ ಅಲ್ಲವೇ ತಿಳಿಸಬೇಕು.

ಶ್ರೀ ಎಸ್.ಎಸ್. ಅರಕೇರಿ :—ಕೋಆಪರೇಟಿವ್ ಬ್ಯಾಂಕುಗಳಲ್ಲಿ ಮ್ಯಾನೇಜ್‌ಮೆಂಟಿನಲ್ಲಿ ಹರಿಜನರಿಗೆ ೨ ಪರ್ಸೆಂಟು ಕೊಡಬೇಕೆಂದು ಇದೆ. ಅದನ್ನು ಕೊಡುತ್ತಾ ಇಲ್ಲ. ಹರಿಜನರನ್ನು ಮೆಂಬರನ್ನಾಗಿ ಮಾಡಿಕೊಳ್ಳುವುದಿಲ್ಲ. ಅಲ್ಲಿ ಸ್ಥಾನ ಖಾಲಿ ಇದ್ದರೂ ಹಾಗೆಯೇ ಇಟ್ಟುಕೊಂಡಿದ್ದಾರೆ. ಈ ತರಹ ೨ ಪರ್ಸೆಂಟು ಹರಿಜವರಿಗೆ ಕೊಡಬೇಕಾದ ಸ್ಥಾನ ಯಾವ ಕೋಆಪರೇಟಿವ್ ಬ್ಯಾಂಕುಗಳಲ್ಲಾಗಲಿ ಸೊಸೈಟಿಗಳಲ್ಲಾಗಲಿ ಕೊಡುವುದಿಲ್ಲವೋ ಅಂತಹವುಗಳಿಗೆ ನೀವು ಏನು ಸಬ್ಸಿಡಿ ಕೊಡುತ್ತೀರೋ ಅದನ್ನು ಕಟ್ ಮಾಡುವುದಕ್ಕೆ ಸಾಧ್ಯವೇ ಎಂದು ಕೇಳುತ್ತೇನೆ.

ಎರಡನೆಯದಾಗಿ ೨೫೦ ಹುಡುಗರು ಜಪಾನ್ ಎಕ್ಸ್‌ಪೋ—೭೦ಕ್ಕೆ ಹೋಗಿದ್ದುದರಲ್ಲಿ ದಡ್ಡರು, ಅನ್‌ಕ್ವಾಲಿಫೈಡ್ ಅಂತಹವರನ್ನು ೧೨೦ ಜನರನ್ನು ಕಳುಹಿಸಿದ್ದೀರಿ. ಅದರಲ್ಲಿ ನಿಮಗೆ ಹರಿಜನರು ಯಾರೂ ಸಿಕ್ಕಲಿಲ್ಲವೇ ನೀವು ಆರಿಸಿ ಕಳುಹಿಸಿದ್ದುದರಲ್ಲಿ ಯಂಗ್ ಫಾರ್ಮರ್ಸ್ ಅಸೋಸಿಯೇಷನ್‌ನಲ್ಲಿ ಹರಿಜನರಲ್ಲಿ ಡಿಸ್ಟ್ರಿಕ್ಟ್ ವೈಸ್ ಪ್ರೆಸಿಡೆಂಟ್ ಅನೇಕರು ಇದ್ದಾರೆ. ಅವರಲ್ಲಿ ಯಾರನ್ನಾದರೂ ಏತಕ್ಕೆ ಆರಿಸಿ ಕಳುಹಿಸಲ್ಲಿಲ್ಲ. ಆದುದರಿಂದ ಇದರಲ್ಲಿ ಅನ್ಯಾಯವಾಗಿದೆ ಎಂದು ಕಂಡು ಬಂದಿದೆ. ಇದಕ್ಕೆ ತಾವು ಏನು ಹೇಳುತ್ತೀರಿ?

ಶ್ರೀ ಸಿ. ಎಂ. ಎಸ್. ಶಾಸ್ತ್ರಿ :—ಸ್ವಾಮಿ, ತಾವು ಕೋ ಆಪರೇಟಿವ್ ಸೊಸೈಟಿಗಳಿಗೆ ಕೊಡತಕ್ಕಂಥ ಸಬ್ಸಿಡಿಯನ್ನು ಕಡಿಮೆ ಮಾಡಿದ್ದೀರಿ. ಇನ್ನು ಮುಂದೆ ಪೂರ್ಣವಾಗಿ ನಿಲ್ಲಿಸಿಬಿಡುತ್ತೇವೆ ಎಂದು ಹೇಳುತ್ತೀರಿ. ಈಗ ಕೇಂದ್ರ ಸರ್ಕಾರದಿಂದ ಎಷ್ಟು ಸಬ್ಸಿಡಿ ಬಂದಿದೆಯೋ ಮುಂದಿನ ವರ್ಷವೂ ಅಷ್ಟೇ ಬರುತ್ತದೆ. ಆದುದರಿಂದ ನಾನು ಹೇಳುವುದು ಸರಿಯಾದ ರೀತಿಯಲ್ಲಿ ನಡೆಯುತಕ್ಕಂಥ ಸೊಸೈಟಿಗಳಿಗೆ ಸಬ್ಸಿಡಿಯನ್ನು ನಿಲ್ಲಿಸಿದರೆ ಅದು ತಪ್ಪಾಗುವುದಿಲ್ಲವೇ ಅದು ಸರಿಯೇ ಆದುದರಿಂದ ಅಂತಹ ಸೊಸೈಟಿಗಳಿಗೆ ಮುಂದು ವರಿಸುವುದಕ್ಕೆ ಏರ್ಪಾಡು ಮಾಡುತ್ತೀರಾ.

ಶ್ರೀ ರಾಮಕೃಷ್ಣ ಹೆಗಡೆ :—ಅವರು ಮಾತನಾಡಿದ ಭಾಷಣದಲ್ಲಿ ವಿರೋಧಾಭಾಸ ಇದೆ. ಹೇಗೆಂದರೆ ಸರಿಯಾದ ರೀತಿಯಲ್ಲಿ ನಡೆಯುತಕ್ಕಂಥಾ ಸೊಸೈಟಿಗಳಿಗೆ ಸಬ್ಸಿಡಿಯ ಅಗತ್ಯವೇ ಇಲ್ಲ. ಸಬ್ಸಿಡಿ ಕೊಕ್ಕತಕ್ಕಂಥಾದ್ದು ಒಂದು ಸೊಸೈಟಿ ಪ್ರಾರಂಭವಾದ ಮೊದಲು ೨–೩ ವರ್ಷ ಅದರ ವೆಚ್ಚವನ್ನು ಸಹಿಸುವುದಡ ಸಾಧ್ಯವಿಲ್ಲ ಮತ್ತು ಪ್ರಾಫಿಟ್ ಬರುವುದಿಲ್ಲ. ಅಂಥಾ ವೇಳೆಯಲ್ಲಿ ಲುಕ್ಸಾನು ಆಗುವುದಾಗಿದ್ದರೆ ಅದನ್ನು ಸ್ವಲ್ಪ ರಿಕವರಿ ಮಾಡಿಕೊಳ್ಳುವುದಕ್ಕೆ ಸಬ್ಸಿಡಿ ಕೊಡುವ ಉದ್ದೇಶ. ಇನ್ನೊಂದು ವಿಷಯ ಏನೆಂದರೆ ಈ ವರ್ಷ ಎಷ್ಟು ಕೊಟ್ಟಿದ್ದಾರೆ ಅಷ್ಟೇ ಮುಂದಿನ ವರ್ಷ ಸಿಕ್ಕುತ್ತದೆ ಎಂದು ಹೇಳುವುದು ಕಷ್ಟ. ಇಷ್ಟು ಮಾತ್ರ ಹೇಳಬಲ್ಲೆ. ಕೇಂದ್ರ ಸರ್ಕಾರದಿಂದ ಡೈರೆಕ್ಟ್ ಆಗಿ ಸಿಕ್ಕುವುದಿಲ್ಲ. ನ್ಯಾಷನಲ್ ಕೋಆಪರೇಟೀವ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಮುಖಾಂತರ ಸಿಕ್ಕುತ್ತದೆ. ಆ ರೀತಿ ಸಿಕ್ಕಿದರೂ ನಾವು ತೆಗೆದು ಕೊಳ್ಳುವುದಿಲ್ಲ ಎಂದು ಹೇಳುವುದಿಲ್ಲ. ಯಾವುದಾದರೂ ಡಿಸರ್ವಿಂಗ್ ಸೊಸೈಟಿಗಳು ಇದ್ದರೆ ಅಂಥಹವರಿಗೆ ಕೊಡುತ್ತೇವೆ.

ಇನ್ನೂ ಮಾನ್ಯ ದೇವರಾಜ ಅರಸ್‌ರವರು ಭದ್ರಾವತಿ ಪೇಪರ್ ಮಿಲ್‌ನಲ್ಲಿ ಯಾವ ಪ್ರಮಾಣದಲ್ಲಿ ಲಾಭ ಬರಬೇಕೋ ಆ ಪ್ರಮಾಣದಲ್ಲಿ ಲಾಭ ಇಲ್ಲ ಎಂದು ಹೇಳಿದರು. ಅದಕ್ಕೆ ಮುಖ್ಯವಾಗಿ ಕಾರಣ ಏನೆಂದರೆ ಆಗ ಕೆಪಾಸಿಟಿ ಕಡಿಮೆ ಇತ್ತು. ಈಗ ಆ ಕೆಪಾಸಿಟಿಯನ್ನು ಹೆಚ್ಚು ಮಾಡಿದ್ದೇವೆ. ಈಗ ಲಾಭ ಹೆಚ್ಚು ಬರತಕ್ಕಂಥ ಆಸೆ ಇದೆ. ಆದರೆಬೇರೆ ಫ್ಯಾಕ್ಟರಿಗಳಿಗೆ ಹೋಲಿಸಿ ನೋಡಿದರೆಸಮಾನವಾದ ಪರ್ಸೆಂಟೇಜ್ ನಲ್ಲಿ ಲಾಭ ದೊರೆಯುತ್ತದೆ ಎಂದು ಹೇಳುವುದಕ್ಕೆ ಸಾಧ್ಯವಿಲ್ಲ.

ಇನ್ನು ಶ್ರೀಮಾನ್ ಅರಕೇರಿಯವರು ಎಕ್ಸ್‌ಪೊ ೭೦ ನೋಡಲು ಯಾವ ಆಧಾರದ ಮೇಲೆ ಹುಡುಗರನ್ನು ಆರಿಸಿದ್ದೀರಿ ಎಂದು ಕೇಳಿದರು. ಅದಕ್ಕಾಗಿ ನಾವು ಒಂದು ಪುಸ್ತಕವನ್ನು ಕೊಟ್ಟಿದ್ದೇವೆ. ಅದರಲ್ಲಿ ಯಾವ ಆಧಾರದ ಮೇಲೆ ಆರಿಸಿ ಕಳುಹಿಸಿದ್ದೇವೆ ಎನ್ನುವುದು ಗೊತ್ತಾಗುತ್ತದೆ.

ಕೊನೆಯದಾಗಿ ಒಂದು ಮಾತನ್ನು ಹೇಳಬೇಕಾಗಿದೆ. ಶ್ರೀಮಾನ್ ಶಾಸ್ತ್ರಿಯವರು ಯಾವುದೋ ಒಂದು ಪೇಪರನ್ನು ಹಿಡಿದುಕೊಂಡು ಅದರಲ್ಲಿ ಬಂದಿರತಕ್ಕಂಥ ವಿಷಯವನ್ನು ಪ್ರಸ್ತಾವನೆ ಮಾಡಿದ್ದಾರೆ. ಆ ಪೇಪರ್ ನೋಡಿದರೆ ರಣಭೇರಿ ಎಂದು ಕಾಣುತ್ತದೆ. ಇದರ ಬಗ್ಗೆ ಏನಾಯಿತು ಎನ್ನುವುದನ್ನು ಹೇಳುತ್ತೇನೆ. ಬಹುಶಃ ೨–೩ ತಿಂಗಳಾಗಿರಬಹುದು. ೩ ತಿಂಗಳ ಹಿಂದೆ ಅದರ ಸಂಪಾದಕರು ನನಗೆ ಒಂದು ಪತ್ರವನ್ನು ಬರೆದರು. ಯಾವನೋ ಒಬ್ಬ ಎಕ್ಸೈಜ್ ವ್ಯಾಪಾರಿ ಟ್ಯಾಕ್ಸ್ ಕೊಡುವುದನ್ನು ಎವೇಡ್ ಮಾಡುತ್ತಿದ್ದಾನೆ. ಅದಕ್ಕೆ ಬೇಕಾದರೆ ಆಧಾರ ಕೊಡುತ್ತೇನೆ. ಅದಕ್ಕೆ ಸೂಕ್ತ ಕ್ರಮ ತೆಗೆದು ಕೊಳ್ಳಬೇಕು ಎಂದು ಪತ್ರ ಬರೆದರು. ಆ ಲೆಟರನ್ನು ಹೋಮ್ ಸೆಕ್ರೆಟರಿಯವರಿಗೂ ಕಳುಹಿಸಿದೆ. ಸಂಪಾದಕರಿಗೂ ಕೂಡ ತಿಳಿಸಿದ್ದೇನೆ. ಅದಕ್ಕೆ ಸಂಬಂಧಪಟ್ಟ ವಿವರಗಳನ್ನು ಕೊಡಿ, ಅದರ ಬಗ್ಗೆ ಕೂಡಲೇ ಕ್ರಮ ತೆಗೆದುಕೊಳ್ಳುವುದಕ್ಕೆ ಹೋಮ್ ಸೆಕ್ರೆಟರಿಯವರಿಗೂ ಹೇಳಿದ್ದೇನೆ ಎಂದು ತಿಳಿಸಿದೆ. ಅವರನ್ನು ಬೇಟಿ ಮಾಡಿ ಹೆಚ್ಚಿನ ವಿವರಗಳನ್ನು ೨–೩ ದಿವಸದಲ್ಲಿ ಕೊಡುತ್ತೇವೆಂದು ಹೇಳಿದರು, ೨–೩ ತಿಂಗಳಾದರೂ ಕೊಡಲಿಲ್ಲ. ಅಷ್ಟಾದರೂ ಕೂಡ ಈ ವಿಚಾರವನ್ನು ವಿಜಿಲೆನ್ಸ್ ಕಮೀಷನ್ ಮುಂದೆ ರೆಫರ್ ಮಾಡಿದ್ದೇನೆ, ಮಾನ್ಯ ಸದಸ್ಯರು ಈಗ ಬೇಕಾದರೆ ವಿಜಿಲೆನ್ಸ್ ಕಮೀಷನ್ ಅವರ ಮುಂದೆ ಹೋಗಿ ಡಿಟೇಲ್ಸ್ ಕೊಡಲಿ. ಅವರಿಂದ ರಿಪೋರ್ಟ್ ಪಡೆದ ಮೇಲೆ ಅದರಲ್ಲಿ ಯಾರೇ ತಪ್ಪು ಮಾಡಿದವರು ಇರಲಿ ಅವರು ಉಗ್ರವಾದ ತಪ್ಪಿತಸ್ಥರಾಗಿದ್ದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಆ ರೀತಿ ಕ್ರಮ ತೆಗೆದುಕೊಳ್ಳುವುದಕ್ಕೆ ನಾನು ಹಿಂದುಮುಂದು ನೋಡುವುದಿಲ್ಲ.

ಒಂದು ಅಂಶ ಮಾತ್ರ ಶುದ್ಧ ಅಂತಃಕರಣದಿಂದ ಹೇಳುವುದು ಏನೆಂದರೆ ಯಾವುದೇ ಒಬ್ಬ ಎಕ್ಸೈಜ್ ಕಂಟ್ರಾಕ್ಟರಿಗೆ ಯಾವುದೇ ರೀತಿಯ ಫೇವರಿಟಿಸಂ ತೋರಿಸಿಲ್ಲ. ಪಿ.ಎ.ಸಿ. ಇದೆ. ಪತ್ರಿಕೆಗಳಲ್ಲಿ ಬೇಕಾದ್ದು ಬರಬಹುದು, ಅದರಲ್ಲಿ ಬರುವುದಬೆಲ್ಲಾ ನಿಜವೆಂದು ಒಪ್ಪುವುದಕ್ಕಾಗುವುದಿಲ್ಲ ಬಂದಿರುವ ಆರೋಪವನ್ನು ವಿಜಿಲೆನ್ಸ್ ಕಮಿಷನರಿಗೆ ರೆಫರ್ ಮಾಡಲಾಗಿದೆ, ಅಲ್ಲಿ ಹೋಗಿ ವಿವರವನ್ನು ಹೇಳಬಹುದು. ಪಿ.ಎ.ಸಿ. ಯವರು ಬೇಕಾದ ಫೈಲನ್ನು ತರಿಸಿ ನೋಡಿಕೊಳ್ಳಲಿ; ಕಾಯಿದೆಗೆ ವಿರುದ್ಧವಾಗಿ ಯಾವ ಕೆಲಸವನ್ನು ಕೂಡ ಮಾಡಿಲ್ಲ. ಪತ್ರಿಕೆಯಲ್ಲಿ ಬರುವುದನ್ನು ನೋಡಿ ಆರೋಪ ಮಾಡುವುದು ಸರಿಯಲ್ಲ.

ಶ್ರೀ ವಿ. ಎಲ್. ಶಿವಪ್ಪ :— ಕೋ-ಆಪರೇಟಿವ್ ಅಮೆಂಡ್‌ಮೆಂಟ್ ಬಿಲ್ ಬಹಳ ವರ್ಷಗಳಿಂದ ಬರುತ್ತದೆಂದು ತಿಳಿದಿದ್ದೆವು. ತಿದ್ದುಪಡಿ ಮಾಡಲು ತೀರ್ಮಾನವಾಗಿತ್ತು, ತಮ್ಮ ಪಕ್ಷಕ್ಕೆ ಬೇಕಾದ ಅನುಕೂಲತೆ ಕಲ್ಪಿಸಿಕೊಂಡು ತರಬಹುದೆಂದು ಕಾಣುವುದು. ಇಂದು ಆಡಳಿತ ಪಕ್ಷದ ಸಭೆಯಲ್ಲಿ ಇದರ ವಿಚಾರ ಚರ್ಚೆಯಾಯಿತೆಂದು ತಿಳಿದುಬಂದಿದೆ. ಅದನ್ನು ಯಾವಾಗ ತರಲಾಗುವುದು ?

ಶ್ರೀ ರಾಮಕೃಷ್ಣ ಹೆಗಡೆ :— ಈ ಅಧಿವೇಶನದಲ್ಲೇ ತರಬೇಕೆಂದಿದ್ದೆವು, ಅವಕಾಶವಾಗಲಿಲ್ಲ, ಬರುವ ಅಧಿವೇಶನದಲ್ಲಿ ಅವಶ್ಯವಾಗಿ ತರುತ್ತೇವೆ, ಇದೆರಲ್ಲಿ ಭಿನ್ನಾಭಿಪ್ರಾಯವಿಲ್ಲ.

Sri B. P Gangadhar :— A defamatory statement is made against the Chief Minister. What action has the Government taken against the person concerned? Otherwise, people will presume that that statemrnt is true.

ಶ್ರೀ ಸಿ.ಎಂ.ಎಸ್. ಶಾಸ್ತ್ರಿ :—ನಾನು ಹೇಳಿದಂತೆ ಪತ್ರಿಕೆಯಲ್ಲಿ ಬಂದಿರುವುದನ್ನು ಸ್ವಲ್ಪ ಓದುತ್ತೇನೆ. ಅದು ಬಹಳ ಪ್ರಾಮುಖ್ಯವಾದುದು. ಆ ವಿಚಾರದಲ್ಲಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕು.

ಅಧ್ಯಕ್ಷರು :— ಅದಕ್ಕೆ ಆಗಲೆ ಉತ್ತರ ಹೇಳಿದ್ದಾರೆ. Now I shall put the demand to vote.

The question is :—

> "That further sums not exceeding the amounts as shown in respect of Demands Nos. 9, 17, 21, 23, 26, 27, 30, 33, 38, 44, 48, 53 and 54 be granted to the Government to defray the charges which will come in course of payment during the financial year for the period ending 31st of March 1971."

THE MOTION WAS ADOPTED.

As directed by the Chair the motion for demands for Grants adopted by the House an reproduced below.

DEMAND NO. 9—PARLIAMENT, STATE/UNION TERRITORY LEGISLATURE

18. Parliament, State/Union Territory Legislature.

"That a further sum not exceeding Rs. 14.85,000 be granted to the Government to defray the charges which will come in course of payment during the financial year for the period ending 31st day of March 1971, in respect of 'Parliament, State/Union Territory Legislaturet."

DEMAND No. 17.—EDUCATION.

28. Education.

"That a further sum not exceeding Rs. 200 be granted to the Government to defray the charges which will come in course of payment during the financial year for the period ending 31st day of March 1971, in respect of 'Education'."

DEMAND No. 21.—RURAL DEVELOPMENT

32. Rural Development.

"That a further sum not exceeding Rs 100 be granted to the Government to defray the charges which will come in course of payment during the financial year for the period ending 31st day of March 1971, in respect of 'Rural Development'."

DEMAND No. 23—CO-OPERATION

34. Co-operation.

"That a further sum not exceeding Rs. 100 be granted to the Government to defray the charges which will come in course of payment during the financial year for the period ending 31st day of March 1971, in respect of 'Co-operation.',"

DEMAND No. 26—LABOUR AND EMPLOYMENT

38. Labour and Employment.

"That a further sum not exceeding Rs. 100 be granted to the Government to defray the charges which will come in course of payment during the financial year for the period ending 31st day of March 1971, in respect of 'Labour and Employment.'."

DEMAND No. 27—MISCELLANEOUS SOCIAL AND DEVELOPMENTAL ORGANISATIONS.

39. Miscellanceous Social and Developmental Organisations.

',That a further sum not exceeding Rs 13,00,000 be granted to the Government to defray the charges which will come in course of payment during the financial year for the period ending 31st day of March 1971, in respect of 'Miscellaneous Social and Developmental Organisations'."

DEMAND NO. 30.—IRRIGATION—(NON-COMMERCIAL)

44. Irrigation, Navigation, Embackment and Drainage Work, (Non-Commercial).

"That a further sum not exceeding Rs. 18,03,204 be grantad to the Government to defray the charges which will come in course of payment during the financial year for the period ending 31st day of March 1971 in respect of 'I.N.E. and D. Works (Non-Commercial)'."

DEMAND NO. 33.—FAMINE

64. Famine Relief.

"That a further sum not exceeding Rs. 2,00,00,000 be granted to the Government to defray the charges which will come in course of payment during the financial year for the period ending 31st day of March 1971, in respect of 'Famine Relief'."

DEMAND NO. 38—FOREST

70. Forest.

"That a further sum not exceeding Rs. 100 be granted to the Government to defray the chargs which will come in course of payment during the financial year for the period ending 31st day of March 1971, in respect of 'Forest'."

DEMAND NO. 44.—INDUSTRIAL AND ECONOMIC DEVELOPMENT

96. Capital Outlay on Industrial and Economic Development.

"That a further sum not exceeding Rs. 21,61,500 be granted to the Government to defray the charges which will come in course of payment during the financial year for the period ending 31st day of March 1971, in respect of Capital Outlay on Indurtrial and Economic Development'."

DEMAND NO. 41—CAPITAL OUTLAY ON PUBLIC WORKS

103. Capital Outlay on Public Works.

"That a further sum not exceeding Rs. 400 be granted to the Government to defray the charges which will come in course of payment during the financial year for the period ending 31st day of March 1971, in respect of 'Capital Outlay on Public Works'."

DEMAND NO. 53—CAPITAL OUTLAY ON SCHEMES OF GOVERNMENT TRADING

124. Capital Outlay on Schemes of Government Trading.

"That a further sum not exceeding Rs. 100 be granted to the Government to defray the charges Which will course of payment during the financial year for the period 31st day of March 1971, in respect of 'Capital Outlay on Schemes of Government Trading'."

DEMAND NO. 54—ADVANCES AND LOANS.

Q Loans and Advances by tSate/Union Territory Governments.

"That a further snm not exceeding Rs. 2,44,07,021 be granted to the Gouernment to defray the charges which will come in course of payment during the financial year for the period ending 31st day of March 1971,in respect of Loans and Advances by State/Union Territory Governments'."

MYSORE APPROPRIATION (No 4) BILL 1970—INTRODUCTION

GOVERNORS RECOMMENDATION.

MR. SPEAKER:—I wish to bring to the notice of the House that I have received the recommendation of the Governor for the introduction and consideration of the Mysore Appropriation (No.4) Bill, 1970. It is as follows:—

> "Under Article 207 of the Constitution of India, I, Dharma Vira, Governor of Mysore, do hereby recommend that the Mysore Appropriation (No. 4) Bill, 1970 be introduced and considered by the Mysore Legislative Assembly."

Introduction

SRI RAMAKRISHNA HEGEDE (Minister for Finance, Planning and Youth Welfare) : - Sir, I beg leave of the House to introduce the Mysore Appropriation (No, 4) Bill, 1970.

MR, SPEAKER:—The question is: "That leave be granted to introduce the Mysore Appropriation (No. 4)Bill 1970."

The *Motion was adoqted*

MR. SPEAKER:–The leave to introduce the bill is granted.